ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 25 ಗುರುವಾರ 2022

₹4

ಸಂಪುಟ: 43 | ಸಂಚಿಕೆ: 130 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com   ಜಾಹೀರಾತು: ad@mysurumithra.com


Promotional Feature

ಮೂರೇ ವರ್ಷದಲ್ಲಿ ಮೈಸೂರಲ್ಲಿ ಮನೆ ಮಾತಾಗಿರುವ ಪರಿಶುದ್ಧ ತಿಂಡಿ–ತಿನಿಸುಗಳ ಖಜಾನೆ

'ಶ್ರೀ ರಾಯಲ್ ವಾರಿಯರ್ ಬೇಕರಿ'



–ಎಂ.ಎಸ್.ನಾರಾಯಣ್, ಮಾಲೀಕರು
ಶ್ರೀ ರಾಯಲ್ ವಾರಿಯರ್ ಬೇಕರಿ





ಹೃತ್ವಿಕ್.ಎನ್

ಕೊರೊನಾ ಸಂದರ್ಭದಲ್ಲಿ ಆರಂಭದಲ್ಲಿ ಕಷ್ಟವಾಯಿತು. ನಂತರ ವ್ಯಾಪಾರ ಸುಧಾರಿಸಿತು. ಕುವೆಂಪುನಗರದ ಬೇಕರಿ ಯಶಸ್ವಿಯಾಗಿದ್ದರಿಂದ ಶಾಖೆಗಳನ್ನು ವಿಸ್ತರಿಸಲು ಧೈರ್ಯ ಮಾಡಿದೆವು. ಮೈಸೂರಿನ ವಿವಿಧೆಡೆ 9 ಶಾಖೆಗಳಿದ್ದು, ಅಗ್ರಹಾರದಲ್ಲಿ 10ನೇ ಶಾಖೆ ಆರಂಭವಾಗುತ್ತಿದೆ. ನಮ್ಮ ಯಶಸ್ಸಿನಲ್ಲಿ ಇವರ ಪಾತ್ರ ಬಹಳ ಮುಖ್ಯ. ಆಹಾರ ಉದ್ಯಮದಲ್ಲಿ ಪ್ರತಿಕ್ಷಣ ಎಚ್ಚರಿಕೆ ವಹಿಸಬೇಕು. ಶುಚಿ, ರುಚಿ, ಗುಣಮಟ್ಟ ಕಾಯ್ದುಕೊಳ್ಳಬೇಕು. ಇದರಲ್ಲಿ ನಾವು ಎಂದೂ ರಾಜಿಯಾಗಿಲ್ಲ. ಹಾಗಾಗಿ ಗ್ರಾಹಕರು ನಮ್ಮ ಕೈ ಹಿಡಿದಿದ್ದಾರೆ. ಅವರಿಗೆ ಸದಾ ಚಿರಋಣಿ. ಯಾವುದೇ ಉದ್ಯಮದಲ್ಲಿ ಯಶಸ್ಸು ಕಾಣಬೇಕಾದರೆ ಧೈರ್ಯ ಹಾಗೂ ಅನುಭವವಿರಬೇಕು. ಆರಂಭದಲ್ಲೇ ಲಾಭ–ನಷ್ಟ ನೋಡದೆ ಬದ್ಧತೆಯಿಂದ ಮುಂದುವರೆಯಬೇಕು.

–ಎಂ.ಎಸ್.ನಾರಾಯಣ್, ಮಾಲೀಕರು
ಶ್ರೀ ರಾಯಲ್ ವಾರಿಯರ್ ಬೇಕರಿ

ರುಚಿ–ಶುಚಿ–ಗುಣಮಟ್ಟದ ಉತ್ಪನ್ನಗಳ ಮೂಲಕ ಮೈಸೂರಲ್ಲಿ ಮನೆ ಮಾತಾಗಿರುವ 'ಶ್ರೀ ರಾಯಲ್ ವಾರಿಯರ್ ಬೇಕರಿ' ಯಶಸ್ವಿ ಮೂರು ವರ್ಷ ಪೂರೈಸಿದೆ. ಈ ಶುಭ ಸಂದರ್ಭದಲ್ಲಿ ಇದರ 10ನೇ ಶಾಖೆ ಅಗ್ರಹಾರದಲ್ಲಿ ಆ.25ರಂದು ಪ್ರಾರಂಭವಾಗುತ್ತಿದೆ.

ಕುವೆಂಪುನಗರ ಡಿಪೋ ಸಮೀಪ ನೃಪತುಂಗ ರಸ್ತೆಯಲ್ಲಿ 2019ರ ಆ.7ರಂದು ಮೊದಲ ಶಾಖೆ ಆರಂಭಿಸಲಾಗಿದ್ದು, ನಂತರ ಗೋಕುಲಂ, ಹೆಬ್ಬಾಳು, ಸಿದ್ಧಾರ್ಥನಗರ, ಜೆ.ಪಿ.ನಗರ, ದಟ್ಟಗಳ್ಳಿ, ಕುವೆಂಪುನಗರದ ಉದಯರವಿ ರಸ್ತೆ, ಶಿವರಾಂಪೇಟೆಯಲ್ಲಿ ಶಾಖೆ ತೆ–ರೆದು, ಯಶಸ್ವಿಯಾಗಿದ್ದು ಇದೀಗ ಅಗ್ರಹಾರ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿ ಸೆಂಥಿಲ್ ಕುಮಾರ್ ಟೆಕ್ಸ್‌ಟೈಲ್ಸ್ ಸಮೀಪ 10ನೇ ಶಾಖೆ ಆರಂಭಿಸಲಾಗುತ್ತಿದೆ.

ಶುಭಾರಂಭದ ದಿನದಂದು 500 ರೂ.ಗಿಂತ ಹೆಚ್ಚಿನ ಬಿಲ್ ಮೇಲೆ ಶೇ.50ರಷ್ಟು ರಿಯಾಯ್ತಿ ನೀಡುತ್ತಿರುವುದು ವಿಶೇಷ. ಕುವೆಂಪುನಗರ, ಜೆ.ಪಿ.ನಗರ ಹಾಗೂ ಸಿದ್ಧಾರ್ಥ ಬಡಾವಣೆಯ ಶಾಖೆ ನಂತರ ಅಗ್ರಹಾರದ ಹೊಸ ಶಾಖೆ ಉತ್ಪಾದನಾ ಘಟಕವನ್ನು ಒಳಗೊಂಡಿರುವುದು ಮತ್ತೊಂದು ವಿಶೇಷವಾಗಿದೆ.

'ಶ್ರೀ ರಾಯಲ್ ವಾರಿಯರ್ ಬೇಕರಿ' ಕುಕ್ಕಿಸ್ ಬಿಸ್ಕೆಟ್‌ಗೆ ಪ್ರಸಿದ್ಧಿ ಪಡೆದಿದೆ. ಇಲ್ಲಿ ದೊರೆಯುವ ದಿಲ್‌ಪಸಂದ್, ಪಫ್ಸ್, ವಿವಿಧ ಬಗೆಯ ಸ್ವಾದಿಷ್ಟ ಕೇಕ್‌ಗಳಿಗೂ ಭಾರೀ ಬೇಡಿಕೆ ಇದೆ. ಖಾರದ ತಿಂಡಿಗಳು, ಮಧುಮೇಹಿಗಳಿಗಾಗಿ ವಿಶೇಷವಾಗಿ ಸಿದ್ಧಪಡಿಸುವ ರಾಗಿ ಬಿಸ್ಕೆಟ್, ಗೋದಿ ರಸ್ಕ್, ಸಿರಿಧಾನ್ಯಗಳ ರಸ್ಕ್, ಬ್ರೆಡ್, ಬನ್‌ಗಳೂ ಹೆಚ್ಚು ಬಿಕರಿಯಾಗುತ್ತವೆ. ಇಲ್ಲಿ ಅತ್ಯಂತ ಶುಚಿಯಾಗಿ ತಯಾರಿಸುವ ಉತ್ತಮ ಗುಣಮಟ್ಟದ ಸ್ವಾದಿಷ್ಟ ತಿನಿಸುಗಳ ರುಚಿಗೆ ಗ್ರಾಹಕರು ಮಾರು ಹೋಗಿದ್ದಾರೆ. ಹಾಗಾಗಿ ಪ್ರತಿನಿತ್ಯವೂ ಎಲ್ಲಾ ಶಾಖೆಗಳೂ ಗ್ರಾಹಕರಿಂದ

ನಮ್ಮ ಸಂಸ್ಥೆಯ ಬೆಳವಣಿಗೆಗೆ ಕಾರಣರಾದ ನಮ್ಮ ನೆಚ್ಚಿನ ಗ್ರಾಹಕರಿಗೆ ಸಂಸ್ಥೆಯ ಮಾಲೀಕರಾದ ಎಂ.ಎಸ್. ನಾರಾಯಣ್‌ರವರು ಹಾಗೂ ಇವರ ಪುತ್ರ ಹೃತ್ವಿಕ್.ಎನ್ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ವಿಶೇಷ ತಿನಿಸುಗಳ ಆಗರ

'ಶ್ರೀ ರಾಯಲ್ ವಾರಿಯರ್ ಬೇಕರಿ' ವಿಶೇಷ ತಿನಿಸುಗಳ ಆಗರವಾಗಿದೆ. ವೆನಿಲಾ ಕೇಕ್, ಪೈನಾಪಲ್ ಕೇಕ್, ಸ್ಟ್ರಾಬೆರಿ ಕೇಕ್, ಚಾಕೊಲೇಟ್ ಕೇಕ್, ಪ್ಲೈನ್ ಕೇಕ್, ಕ್ಯಾಶೋ ಕೇಕ್, ಕ್ಯಾರೆಟ್ ಕೇಕ್, ಬಟ್ಟರ್ ಸ್ಕಾಚ್ ಕೇಕ್, ಗೀ ಕೇಕ್, ಡೇಟ್ಸ್ ಕೇಕ್, ಮಿಲ್ಕ್ ಪುಡ್ಡಿಂಗ್, ಮಲ್ಟಿಗ್ರೈನ್ ಕೇಕ್, ಚಾಕೋ ಡೊನಟ್, ಪೈನಾಪಲ್ ಹನಿ ಕೇಕ್, ಬನಾನ ಕೇಕ್, ಚಾಕೋ ಮೌಸ್ ಕೇಕ್ ಹೀಗೆ ಹತ್ತಾರು ವಿಶೇಷ ಬಗೆಯ ಕೇಕ್‌ಗಳು, ಮಿಕ್ಸ್‌ಚರ್, ಬನಾನ ಚಿಪ್ಸ್, ಬಟ್ಟರ್ ಮುರ್ಕು, ಜಾಕ್‌ಫ್ರೂಟ್ ಚಿಪ್ಸ್, ಹುರಿಗಾಳು, ಅವರೇಬೇಳೆ, ಕೋಡಬಳೆ, ಚಕ್ಕಲಿ, ನಿಪ್ಪಟ್ಟು ಇತ್ಯಾದಿ ಖಾರದ ತಿಂಡಿಗಳು, ಸ್ವೀಟ್ ಬನ್, ಸಾಲ್ಟ್ ಹೋಲ್ ವೀಟ್, ಜ್ಯಾಗರಿ, ಫ್ರೂಟ್ ಮತ್ತು ಮಲ್ಟಿಗ್ರೈನ್ ಬ್ರೆಡ್, ಖಾರ ಬನ್, ಪೊಟ್ಯಾಟೋ ಬನ್, ಕ್ರೀಮ್ ಬನ್, ಜಾಮ್ ಬನ್, ಮಿನಿ ಸ್ವೀಟ್ ಬನ್, ಮಿನಿ ಖಾರ ಬನ್, ಪಾವ್ ಬನ್, ಬರ್ಗರ್ ಬನ್, ಕೋಕನಟ್ ಬನ್ ಸೇರಿದಂತೆ ಹಲವು ಬಗೆಯ ಬ್ರೆಡ್‌ಗಳು, ಬೇಬಿ ರಸ್ಕ್, ಮಿಲ್ಕ್ ರಸ್ಕ್, ಫ್ರೂಟ್ ರಸ್ಕ್, ಹೋಲ್ ವೀಟ್ ರಸ್ಕ್, ಕೇಕ್ ರಸ್ಕ್, ಮಲ್ಟಿಗ್ರೈನ್ ರಸ್ಕ್ ಸೇರಿದಂತೆ ಹಲವು ಬಗೆಯ ರಸ್ಕ್‌ಗಳು, ವೆನಿಲಾ ಮಫಿನ್ಸ್, ಚಾಕೊಲೇಟ್ ಮಫಿನ್ಸ್, ರೆಡ್ ವೆಲ್‌ವೆಟ್ ಮಫಿನ್ಸ್, ಡ್ರೈಫ್ರೂಟ್ ಮಫಿನ್ಸ್‌ಗಳು ಈ ಬೇಕರಿಯಲ್ಲಿ ಲಭ್ಯವಿದೆ.

ವಾರಿಯರ್ ಕುಕ್ಕಿಸ್‌ಗೆ ಭಾರೀ ಬೇಡಿಕೆ

ಪಿಸ್ತಾ ಬಾದಾಮಿಕಾ, ಸ್ಪೆಷಲ್ ಬಟರ್ ಕುಕ್ಕಿಸ್, ಡ್ರೈ ಕೋಕನಟ್, ಮಿನಿ ಬಟರ್ ಸಾಲ್ಟ್, ಬಾದಾಮ್, ಕ್ಯಾಶೂ ಕುಕ್ಕಿಸ್, ರಾಗಿ, ವೆನಿಲಾ ಡ್ರಾಪ್ಸ್, ಸಾಲ್ಟ್, ಮಸಾಲಾ, ಮಿಲ್ಕ್, ಓಟ್ಸ್ ಕುಕ್ಕಿಸ್, ಡಾರ್ಕ್‌ಚಾಕೋ ಕುಕ್ಕಿಸ್, ಸಿರಿಧಾನ್ಯದ ಕುಕ್ಕಿಸ್, ಚಾಕೊನೆಟ್, ಅಲ್ಮಾಂಡ್, ಪಿಸ್ತಾ, ಚಾಕೋಚಿಪ್, ಗೀ ಕುಕ್ಕಿಸ್, ಸ್ವೀಟ್ ಅಂಡ್ ಸಾಲ್ಟ್ ಕುಕ್ಕಿಸ್ ಹೀಗೆ ವಿಭಿನ್ನ ಬಗೆಯ ಕುಕ್ಕಿಸ್ ಬಿಸ್ಕೆಟ್‌ಗಳು 'ಶ್ರೀ ರಾಯಲ್ ವಾರಿಯರ್ ಬೇಕರಿ' ಸ್ಪೆಷಲ್ ಆಗಿವೆ. ನೋಡಿದಾಕ್ಷಣ ಬಾಯಲ್ಲಿ ನೀರೂರಿಸುವ ಕುಕ್ಕಿಸ್ ಬಿಸ್ಕೆಟ್‌ಗೆ ಗ್ರಾಹಕರು ಮಾರು ಹೋಗಿದ್ದಾರೆ. ಕುಕ್ಕಿಸ್ ಕೊಳ್ಳಲೆಂದೇ ಮೈಸೂರಿನ ಅಕ್ಕಪಕ್ಕದ ಗ್ರಾಮೀಣ ಗ್ರಾಹಕರು ಅಧಿಕ ಸಂಖ್ಯೆಯಲ್ಲಿ ಬರುತ್ತಾರೆ.

ಕೊರೊನಾ ಸಂದಿಗ್ಧತೆ ನಡುವೆ ಉದ್ಯಮದಲ್ಲಿ ದಾಖಲೆ

ಜಗತ್ತಿನಲ್ಲಿ ಕೊರೊನಾ ಭಾರೀ ಅವಾಂತರ ಸೃಷ್ಟಿಸಿತ್ತು. ಉದ್ಯಮ ಕ್ಷೇತ್ರವೂ ತಳಹಿಡಿದಿತ್ತು. ವ್ಯಾಪಾರ ವಹಿವಾಟಿನಲ್ಲಿ ಅಲ್ಲೋಲ ಕಲ್ಲೋಲವಾಗಿತ್ತು. ಕೊರೊನಾ ವೇಳೆ ಅದೆಷ್ಟೋ ಉದ್ಯಮಗಳು ನೆಲಕಚ್ಚಿದ್ದವು. ಆದರೆ ಮೈಸೂರಿನ 'ಶ್ರೀ ರಾಯಲ್ ವಾರಿಯರ್ ಬೇಕರಿ' ಕೊರೊನಾ ಸಂದಿಗ್ಧತೆ ನಡುವೆಯೇ ಪುಟಿದೆದ್ದು ವಿಸ್ತಾರಗೊಂಡಿದ್ದು ವಿಶೇಷ. ಮಾಲೀಕ ಎಂ.ಎಸ್.ನಾರಾಯಣ್ ಅವರು 2019ರ ಆಗಸ್ಟ್ 7ರಂದು ಕುವೆಂಪುನಗರದಲ್ಲಿ ಬೇಕರಿ ಉದ್ಯಮ ಆರಂಭಿಸಿದರು. ಪ್ರೋತ್ಸಾಹ ನೀಡಿದ ಅವರ ಪತ್ನಿ, ಪುತ್ರ ಹಾಗೂ ಪುತ್ರಿ ಸೇರಿಕೊಂಡು ಕೆಲಸ ಮಾಡಿದರು. ಆದರೆ ಬೇಕರಿ ತೆರೆದು ಕೇವಲ 4 ತಿಂಗಳಲ್ಲೇ ಕೊರೊನಾ ಅಲೆ ಅಪ್ಪಳಿಸಿತು.

ವ್ಯಾಪಾರ ವಹಿವಾಟು ಬಂದ್ ಆಯಿತು. ನಂತರ ಹಂತ ಹಂತವಾಗಿ ವ್ಯಾಪಾರಕ್ಕೆ ಸಮಯ ನಿಗದಿ ಮಾಡಲಾಯಿತು. ಆ ಸಂದರ್ಭದಲ್ಲಿ ಎಲ್ಲರಂತೆ ತೀವ್ರ ಸಂಕಷ್ಟ ಎದುರಿಸಿದರೂ ಎಂ.ಎಸ್.ನಾರಾಯಣ್ ಎದೆಗುಂದಲಿಲ್ಲ. ಲಾಭ–ನಷ್ಟದ ಲೆಕ್ಕಾಚಾರ ಮರೆತು ಉತ್ತಮ ಸೇವೆಯ ಮೂಲಕ ಸಾವಿರಾರು ಗ್ರಾಹಕರ ಮನಸ್ಸು ಗೆದ್ದರು. ಕೊರೊನಾ ನಡುವೆಯೇ ಮೈಸೂರಿನ ವಿವಿಧೆಡೆ 9 ಶಾಖೆಗಳನ್ನು ಆರಂಭಿಸಿ, ಯಶಸ್ವಿಯಾದರು. ಇದರಲ್ಲಿ ನಾರಾಯಣ್ ಅವರೊಂದಿಗೆ ಅವರ ಪುತ್ರ ಎನ್.ಹೃತ್ವಿಕ್ ಪರಿಶ್ರಮವೂ ಮಹತ್ವದ್ದಾಗಿದೆ. ಈಗ 10ನೇ ಶಾಖೆ ಪ್ರಾರಂಭಿಸುತ್ತಿದ್ದು, ಮುಂದಿನ ದಿನಗಳಲ್ಲಿ ರಾಜ್ಯದ ಬೇರೆ ನಗರಗಳಿಗೂ ಉದ್ಯಮ ವಿಸ್ತರಿಸುವ ಆಶಯವನ್ನು 48ರ ಹರೆಯದ ನಾರಾಯಣ್ ಹೊಂದಿದ್ದಾರೆ.

ಶುದ್ಧ ಸಸ್ಯಾಹಾರಿ ತಿನಿಸು ಘಟಕ

ಸಿದ್ಧಾರ್ಥನಗರ ವಿನಯಮಾರ್ಗ ಜೈನ್ ಟೆಂಪಲ್ ಬಳಿ ಇರುವ ಶ್ರೀ ರಾಯಲ್ ವಾರಿಯರ್ ಬೇಕರಿ ಶಾಖೆಯಲ್ಲಿ ಶುದ್ಧ ಸಸ್ಯಾಹಾರಿ ತಿನಿಸುಗಳನ್ನು ಮಾತ್ರ ಮಾರಾಟ ಮಾಡಲಾಗುತ್ತದೆ. ಇಲ್ಲಿಯೂ ಉತ್ಪಾದನಾ ಘಟಕವಿದ್ದು ಮೊಟ್ಟೆ ರಹಿತ(ಎಗ್‌ಲೆಸ್) ತಿನಿಸುಗಳನ್ನು ಮಾತ್ರ ತಯಾರಿಸಲಾಗುತ್ತದೆ. ಸಿಲ್ವಿವಂಡರ್, ಪೈನಾಪಲ್, ಬಟ್ಟರ್ ಸ್ಕಾಚ್, ಡೇತ್‌ಬೇ ಚಾಕೊಲೆಟ್, ಬ್ಲಾಕ್ ಕರೆಂಟ್, ವೈಟ್ ಫಾರೆಸ್ಟ್, ಜರ್ಮನ್ ಫಾರೆಸ್ಟ್, ಚಾಕೋ ಟ್ರಫಲ್, ಫ್ರೂಟ್, ರೆಡ್‌ವೆಲ್‌ವೆಟ್ ಪೇಸ್ಟ್ರಿ ಕೇಕ್‌ಗಳು, ಬ್ರೆಡ್, ಬನ್ ಸೇರಿದಂತೆ ಯಾವುದರ ತಯಾರಿಕೆಗೂ ಮೊಟ್ಟೆ ಬಳಸುವುದಿಲ್ಲ.

ನೆರವಾದವರ ನೆನೆವ ನಾರಾಯಣ್

ಮೈಸೂರಿನ ಜೆ.ಪಿ.ನಗರದ ಮಧ್ಯಮ ವರ್ಗ ಕುಟುಂಬದ ಎಂ.ಎಸ್.ನಾರಾಯಣ್, ಆಹಾರ ಉದ್ಯಮ ಕ್ಷೇತ್ರದಲ್ಲಿ 25 ವರ್ಷಗಳ ಅನುಭವಿ. 2019ರ ಆಗಸ್ಟ್‌ವರೆಗೂ ಬೇರೆಯವರ ಬಳಿ ಕೆಲಸ ಮಾಡಿಕೊಂಡಿದ್ದರು. ಬೇಕರಿ ಉದ್ಯಮದಲ್ಲಿ ತಮ್ಮದೇ ಛಾಪು ಮೂಡಿಸಬೇಕೆಂಬ ಹಂಬಲವಿತ್ತಾದರೂ ಆ ನಿಟ್ಟಿನಲ್ಲಿ ಮುಂದುವರೆಯಲು ಧೈರ್ಯ ಮಾಡಿರಲಿಲ್ಲ. ಯಾರದೋ ಕಹಿ ಮಾತುಗಳಿಂದ ನೊಂದಿದ್ದ ನಾರಾಯಣ್ ಅವರಿಗೆ ಆತ್ಮಸ್ಥೈರ್ಯ ತುಂಬಿದ್ದು ಅವರ ಪತ್ನಿಯಂತೆ. ಅಂತೂ ಧೈರ್ಯ ಮಾಡಿ ಬೇಕರಿ ಉದ್ಯಮ ಆರಂಭಿಸಿದ ನಾರಾಯಣ್‌ಗೆ ಕುಟುಂಬ ಬೆಂಬಲವಾಗಿ ನಿಂತಿತು. 'ಯಾಕಾದರೂ ಬೇಕರಿ ಆರಂಭಿಸಿದೆವೋ ಎಂಬ ಭಾವನೆ ಮೂಡಿದಾಗ ಹಿತೈಷಿಗಳು ನೆರವಾದರು. 10, 15, 20 ಸಾವಿರ ರೂ. ಹೀಗೆ ಸಾಧ್ಯವಾದಷ್ಟು ಹಣ ಸಹಾಯ ಮಾಡಿದರು. ಪರಿಚಿತರಾದ ಪಾಂಡವಪುರದ ನಾರಾಯಣಗೌಡರನ್ನು ಪೂಜೆಗೆ ಆಹ್ವಾನಿಸಿದ್ದಾಗ ಕೇಳದೆಯೇ ಅವರು 1 ಲಕ್ಷ ರೂ. ನೀಡಿ, ಸಾಧ್ಯವಾದಾಗ ಹಿಂದಿರುಗಿಸು ಎಂದರು. ಎಸ್‌ಬಿಐ ಬ್ಯಾಂಕ್ ಸಹಕಾರವೂ ಬಹಳ ಮುಖ್ಯವಾಗಿದೆ. ನಮ್ಮ ಉದ್ಯಮಕ್ಕಾಗಿ ಸಾಕಷ್ಟು ಸಾಲ ಸೌಲಭ್ಯ ನೀಡಿದೆ' ಎಂದು ನಾರಾಯಣ್ ಸ್ಮರಿಸಿಕೊಳ್ಳುತ್ತಾರೆ. ಮತ್ತು ಪ್ರಾರಂಭದಲ್ಲಿ ಹೆಚ್ಚಿನ ಸಹಕಾರ ನೀಡಿದ ಎಸ್.ವಿ.ಟಿ. ರಂಗನಾಥ್ ಪ್ರಕಾಶ್, ರಾಜೇಶ್ ಖನ್ನಾ, ಶರವಣ, ಎಚ್.ಎಸ್.ಶೋಭಾ ಇವರುಗಳಿಗೂ ಸಹ ಅಭಿನಂದನೆಗಳನ್ನು ಸಲ್ಲಿಸುತ್ತಾರೆ.

ಮೈಸೂರು ಮಳೆಗಾಲದ ರೇಸ್‌ಗಳು ಇಂದಿನಿಂದ ಆರಂಭ

● 2019ರ ಮಾನ್ಸೂನ್ ರೇಸ್‌ಗಳಿಗೆ ಹೋಲಿಸಿದರೆ ಷೇರು ಹಣವು ಶೇ.49 ಹೆಚ್ಚಾಗಿದೆ ● ಬಹುನಿರೀಕ್ಷಿತ ಮೈಸೂರು ಡರ್ಬಿ ಅ.30ಕ್ಕೆ ನಿಗದಿ

ಮೈಸೂರು, ಆ.24 (ಆರ್‌ಕೆಬಿ)– ಮೈಸೂರು ರೇಸ್ ಕ್ಲಬ್ ಲಿಮಿಟೆಡ್‌ನ ಈ ಬಾರಿಯ 18 ದಿನಗಳ ಮಾನ್ಸೂನ್ ರೇಸ್‌ಗಳು ಆಗಸ್ಟ್ 25ರಿಂದ ಅಕ್ಟೋಬರ್ 30ರವರೆಗೆ ನಡೆಯಲಿವೆ.

ಮೈಸೂರು ರೇಸ್ ಕ್ಲಬ್ ಆವರಣದಲ್ಲಿ ಕ್ಲಬ್ ಅಧ್ಯಕ್ಷರೂ ಆದ ಹಿರಿಯ ಸ್ಟೀವರ್ಡ್ ವೈ.ಬಿ.ಗಣೇಶ್ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ರೇಸ್‌ಗಳ ವಿವರಗಳನ್ನು ಪ್ರಕಟಿಸಿದರು. ಈ ಬಾರಿಯ ಮಾನ್ಸೂನ್ ರೇಸ್‌ಗಳು 140 ರೇಸ್‌ಗಳನ್ನು ಹೊಂದಿದ್ದು, ಬಹುನಿರೀಕ್ಷಿತ ಮೈಸೂರು ಡರ್ಬಿ 2022 [ಗ್ರೇಡ್ 1] ರೊಂದಿಗೆ ಅ.30ರಂದು ರೇಸಿಂಗ್ ಹಾಗೂ ಕುದುರೆಗಳ ಗುಣಮಟ್ಟವನ್ನು ಸುಧಾರಿಸುವ ಸಲುವಾಗಿ ಕಳೆದ 2019ರಲ್ಲಿ ನಡೆದ ಮೈಸೂರು (ಮಾನ್ಸೂನ್) ರೇಸ್‌ಗಳಲ್ಲಿ ನೀಡಲಾದ ಷೇರು ಹಣಕ್ಕೆ ಹೋಲಿಸಿದರೆ ಕ್ಲಬ್ ಷೇರು ಹಣವನ್ನು ಶೇ.49ರಷ್ಟು ಹೆಚ್ಚಿಸಲಾಗಿದೆ. ಇದರೊಂದಿಗೆ ರೇಸಿಂಗ್‌ನ ಗುಣಮಟ್ಟವೂ ಇನ್ನಷ್ಟು ಸುಧಾರಿಸುತ್ತದೆ ಎಂಬ ಭರವಸೆ ಇದೆ. ಷೇರು ಹಣದಿಂದ ನಿರೀಕ್ಷಿತ ವೇತನವು 8 ಕೋಟಿ ರೂ. ಆಗಲಿದೆ. ಅಲ್ಲದೆ ಈ ಬಾರಿ ಒಟ್ಟು 460 ಸ್ಟೇಬಲ್ ಕುದುರೆಗಳು ಮತ್ತು 200 ಹೊರ ರಾಜ್ಯಗಳ ಕುದುರೆಗಳು ಭಾಗವಹಿಸಲಿವೆ ಎಂದರು.



ಎಂಆರ್‌ಸಿ ಅಧ್ಯಕ್ಷ ಮತ್ತು ಹಿರಿಯ ಸ್ಟೀವರ್ಡ್ ವೈ.ಬಿ.ಗಣೇಶ್(ಎಡದಿಂದ ನಾಲ್ಕನೆಯವರು) ಮೈಸೂರಿನ ಎಂಆರ್‌ಸಿ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಚಿತ್ರದಲ್ಲಿ (ಎಡದಿಂದ) ಕಾರ್ಯದರ್ಶಿ ಮತ್ತು ಸಿಇಓ ಎನ್‌ಎಚ್‌ಎಸ್ ಮಣಿ, ಸಮಿತಿ ಸದಸ್ಯ ಕೆ.ಎಂ.ಚಂದ್ರೇಗೌಡ, ಸ್ಟೀವರ್ಡ್‌ಗಳಾದ ಬಿ.ಯು.ಚೆಂಗಪ್ಪ, ಕೆ.ಜಿ.ಅನಂತರಾಜ್ ಅರಸ್, ಎಚ್.ಕೆ. ರಮೇಶ್, ಸಮಿತಿ ಸದಸ್ಯರಾದ ಕೆ.ವಿ.ಪರೀಕ್ಷಿತ್, ಎ.ಎಸ್.ಅಜಿತ್‌ಕುಮಾರ್‌ರಾಜ್ ಅರಸ್ ಅವರನ್ನು ಕಾಣಬಹುದು.

ಪ್ರಮುಖ ಕ್ಲಾಸಿಕ್/ಸ್ಟೀಪ್‌ಸ್ಟೇಕ್ಸ್ ರೇಸ್‌ಗಳು ಹೀಗಿವೆ

ಆ.26: ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಸ್ಮಾರಕ ಮಿಲಿಯನ್ 2022–(ಮೂರು ವರ್ಷ ವಯಸ್ಸಿನ ಭಾರತೀಯ ಕುದುರೆಗಳಿಗೆ) **ಸೆ.2:** ಕೃಷ್ಣರಾಜ ಒಡೆಯರ್ ಸ್ಮಾರಕ ಟ್ರೋಫಿ [ಗ್ರೇಡ್–3]–(ನಾಲ್ಕು ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಭಾರತೀಯ ಕುದುರೆಗಳಿಗೆ). **ಸೆ.16:** ಮೈಸೂರು 1000 ಗಿನಿಯಾಸ್ 2022 [ಗ್ರೇಡ್ 3] – (ಮೂರು ವರ್ಷ ವಯಸ್ಸಿನ ಇಂಡಿಯನ್ ಫಿಲ್ಲಿಸ್‌ಗಾಗಿ) **ಸೆ.24:** ಮಹಾರಾಜಾ ಕಪ್ [ಗ್ರೇಡ್–3]–(ನಾಲ್ಕು ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಭಾರತೀಯ ಕುದುರೆಗಳಿಗೆ) **ಅ.6:** ಮೈಸೂರು ದಸರಾ ಸ್ಪ್ರಿಂಟ್ ಚಾಂಪಿಯನ್‌ಶಿಪ್ 2022 [ಗ್ರೇಡ್ 3]–(ಮೂರು ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಭಾರತೀಯ ಕುದುರೆಗಳಿಗೆ) **ಅ.7:** ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಮೈಸೂರು 2000 ಗಿನಿಯಾಸ್ 2022 [ಗ್ರೇಡ್–3]–(ಮೂರು ವರ್ಷ ವಯಸ್ಸಿನ ಭಾರತೀಯ ಕುದುರೆಗಳಿಗೆ) **ಅ.14:** ಗವರ್ನರ್ಸ್ ಕಪ್ 2022–(ನಾಲ್ಕು ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಭಾರತೀಯ ಕುದುರೆಗಳಿಗೆ) **ಅ.29:** ಮೈಸೂರು ರೇಸ್ ಕ್ಲಬ್ ವಾರ್ಷಿಕೋತ್ಸವ ಕಪ್ 2022–(ಮೂರು ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಭಾರತೀಯ ಕುದುರೆಗಳಿಗೆ) **ಅ.30:** ಮೈಸೂರು ಡರ್ಬಿ 2022 [ಗ್ರೇಡ್–1]–(ಮೂರು ವರ್ಷ ವಯಸ್ಸಿನ ಭಾರತೀಯ ಕುದುರೆಗಳಿಗೆ).

ಮೈಸೂರಲ್ಲಿ ಅಲ್ಪಸಂಖ್ಯಾತರ ಆಯೋಗದಿಂದ ಕೋಮು ಸೌಹಾರ್ದತೆ ಸಭೆ

ಅಲ್ಪಸಂಖ್ಯಾತರ ರಕ್ಷಣೆಗೆ ಬದ್ಧ

● ಕರ್ನಾಟಕ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಮ್ ಭರವಸೆ
● ಸಭೆಯಲ್ಲಿ ಮುಸ್ಲಿಂ, ಕ್ರಿಶ್ಚಿಯನ್, ಜೈನ, ಸಿಖ್, ಬುದ್ದಿಸ್ಟ್ ಮುಖಂಡರು ಭಾಗಿ



ಮೈಸೂರು, ಆ.24(ಆರ್‌ಕೆಬಿ)– ರಾಜ್ಯದಲ್ಲಿ ಶಾಂತಿ ಸೌಹಾರ್ದತೆ ಕಾಪಾಡುವುದಕ್ಕೆ ಅಲ್ಪಸಂಖ್ಯಾತರು ಹೆಚ್ಚಿನ ಆದ್ಯತೆ ನೀಡಬೇಕು. ಈ ಮೂಲಕ ಇತರರಿಗೆ ಮಾದರಿಯಾಗಬೇಕು ಎಂದು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಮ್ ತಿಳಿಸಿದರು.

ಮೈಸೂರು ಜಿಪಂ ಸಭಾಂಗಣದಲ್ಲಿ ರಾಜ್ಯ ಅಲ್ಪಸಂಖ್ಯಾತರ ಆಯೋಗದ ವತಿಯಿಂದ ಆಯೋಜಿಸಿದ್ದ, ಅಲ್ಪಸಂಖ್ಯಾತ ಸಮುದಾಯದ ಮುಖಂಡರೊಂದಿಗೆ ಕೋಮು ಸೌಹಾರ್ದತೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕರ್ನಾಟಕದಲ್ಲಿ ಅಲ್ಪಸಂಖ್ಯಾತರ ರಕ್ಷಣೆ, ಸಂಸ್ಥೆಗಳ ರಕ್ಷಣೆ ಹಾಗೂ ಮುಖ್ಯವಾಗಿ ಸಂವಿಧಾನ ನೀಡಿರುವ ಹಕ್ಕುಗಳಿಗೆ ತೊಂದರೆಯಾದಾಗ, ಅಲ್ಪಸಂಖ್ಯಾತರ ಆಯೋಗ ನಿಮ್ಮ ರಕ್ಷಣೆಗೆ ಬರುತ್ತದೆ. ಸಭೆ ನಡೆಸಿ ನಿಮ್ಮ ಕುಂದು–ಕೊರತೆಗಳನ್ನು ಕೇಳುವುದು ನಮ್ಮ ಕರ್ತವ್ಯ ಎಂದು ಹೇಳಿದರು.

ಮೈಸೂರು ಜಿಲ್ಲೆಯಲ್ಲಿ ಈ ಹಿಂದೆ ನಾನು ಪೊಲೀಸ್ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾಗಿನಿಂದಲೂ ಈ ಜಿಲ್ಲೆ ಮೇಲೆ ವಿಶೇಷ ಆಸಕ್ತಿ. ಈ ಜಿಲ್ಲೆಯ ಜನರು ತಮ್ಮ ಪ್ರೀತಿ ಮತ್ತು ವಿಶ್ವಾಸದಿಂದಲೇ ಹೆಚ್ಚು ಪರಿಚಿತರು. ಅಲ್ಪಸಂಖ್ಯಾತರಿಗೆ ತೊಂದರೆ ಕುರಿತು ಅರಿವಾಗಿದೆ. ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದೇನೆ. ನಿಮ್ಮ ಸಮಸ್ಯೆಗಳ ಪರಿಹಾರ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದರು.

ಕೊರೊನಾ ಸಾಂಕ್ರಾಮಿಕ ರೋಗದಿಂದಾಗಿ ಸರ್ಕಾರಕ್ಕೆ ತೆರಿಗೆ ಸಂಗ್ರಹದಲ್ಲಿ ಸ್ವಲ್ಪ ಕಡಿಮೆಯಾದ ಪರಿಣಾಮ ಅನುದಾನ ಕಡಿಮೆಯಾಗಿದೆ. ಮುಂದಿನ ದಿನಗಳಲ್ಲಿ ಇದರ ಪ್ರಮಾಣವನ್ನು ಹೆಚ್ಚಿಸುವಂತೆ ಆಯೋಗದ ಮೂಲಕ ವರದಿ ನೀಡಲಾಗುವುದು ಎಂದರು. ಸಭೆಯಲ್ಲಿ ವಿವಿಧ ಅಲ್ಪಸಂಖ್ಯಾತ ಮುಖಂಡರು ತಮ್ಮ ಸಮುದಾಯದ ಹಲವಾರು ಸಮಸ್ಯೆಗಳನ್ನು ವಿವಿಧ ಇಲಾಖೆ ಸಿಬ್ಬಂದಿ ಹಾಗೂ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರೊಂದಿಗೆ ಚರ್ಚಿಸಿದರು. ಮುಸ್ಲಿಂ, ಕ್ರೈಸ್ತ, ಜೈನ, ಬೌದ್ಧ, ಸಿಖ್ ಇನ್ನಿತರ ಸಮುದಾಯದ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು. ಆಯೋಗದ ಕಾರ್ಯದರ್ಶಿ ಸಲ್ಮಾ ಫಿರ್ದೋಸ್ ಇನ್ನಿತರರು ಉಪಸ್ಥಿತರಿದ್ದರು.

ಜ.18ರಿಂದ 22ರವರೆಗೆ ಬೆಂಗಳೂರಲ್ಲಿ ಸಿಐಟಿಯು ಅಖಿಲ ಭಾರತ ಸಮ್ಮೇಳನ; ಲಾಂಛನ ಬಿಡುಗಡೆ

ಕೇಂದ್ರ ಸರ್ಕಾರದ ಜನವಿರೋಧಿ ಧೋರಣೆ ವಿಚಾರವಾಗಿ ಸಮ್ಮೇಳನದಲ್ಲಿ ಚರ್ಚೆ; ಸಿಐಟಿಯು ಜಿಲ್ಲಾಧ್ಯಕ್ಷ ಬಾಲಾಜಿರಾವ್



ಮೈಸೂರು,ಆ.24(ಪಿಎಂ)– ಮುಂಬರುವ ಜ.18ರಿಂದ 22ರವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ಸಿಐಟಿಯು ಅಖಿಲ ಭಾರತ ಸಮ್ಮೇಳನದ ಲಾಂಛನವನ್ನು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಬಿಡುಗಡೆ ಮಾಡಲಾಯಿತು.

ಬಳಿಕ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಸಿಐಟಿಯು (ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್) ಜಿಲ್ಲಾಧ್ಯಕ್ಷ ಬಾಲಾಜಿರಾವ್, ಸಮ್ಮೇಳನ ಸಂಬಂಧ ಸ್ವಾಗತ ಸಮಿತಿ ರಚನೆಯಾಗಿದ್ದು, ಸಮಿತಿ ಗೌರವಾಧ್ಯಕ್ಷರಾಗಿ ಕೆಸುಬ್ಬರಾವ್, ಕಾರ್ಯಾಧ್ಯಕ್ಷರಾಗಿ ಎಸ್.ವರಲಕ್ಷ್ಮೀ, ಅಧ್ಯಕ್ಷರಾಗಿ ಅಮಾನುಲ್ಲಾ ಖಾನ್, ಪ್ರಧಾನ ಕಾರ್ಯದರ್ಶಿಯಾಗಿ ಮೀನಾಕ್ಷಿ ಸುಂದರಂ ಹಾಗೂ ಖಜಾಂಚಿಯಾಗಿ ಪರಮೇಶ್ವರ್ ಆಯ್ಕೆಯಾಗಿದ್ದಾರೆ. ಈಗಾಗಲೇ ಇವರು ಸಮ್ಮೇಳನದ ಪೂರ್ವ ಸಿದ್ಧತೆಯಲ್ಲಿ ತೊಡಗಿದ್ದಾರೆ ಎಂದರು.

ಸಮಾಜದ ವಿವಿಧ ಕ್ಷೇತ್ರಗಳ ಗಣ್ಯರನ್ನು ಸ್ವಾಗತ ಸಮಿತಿ ಸಲಹೆಗಾರರನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಹಂಸಲೇಖ, ಡಾ.ಬರಗೂರು ರಾಮಚಂದ್ರಪ್ಪ, ಪ್ರೊ.ಜಿ.ಎಸ್. ಸಿದ್ದರಾಮಯ್ಯ, ಡಾ.ಎಲ್.ಹನುಮಂತಯ್ಯ, ಡಾ.ಆರ್. ಪೂರ್ಣಿಮಾ, ಬಿ.ಬಸವಲಿಂಗಯ್ಯ ಮೊದಲಾದವರು ಸಲಹೆಗಾರರಾಗಿದ್ದಾರೆ. ದೇಶದ ವಿವಿಧ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಂದ 1,500ಕ್ಕೂ ಹೆಚ್ಚು ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ. ಜೊತೆಗೆ ಹತ್ತಾರು ದೇಶದ ವಿದೇಶಿಗರು ಸೌಹಾರ್ದ ಪ್ರತಿನಿಧಿಗಳಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸರ್ಕಾರಕ್ಕೆ ಯಾವುದೇ ಪ್ರತಿರೋಧ ಇರಬಾರದು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಯಸುತ್ತಿದ್ದು, ಇಂತಹ ಧೋರಣೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾಗಲಿದೆ. ಈ ಸರ್ಕಾರಗಳು ಕಾರ್ಪೊರೇಟ್ ಪರವಾದ ನೀತಿ ಅನುಸರಿಸುತ್ತಿವೆ. ಶಾಸನಬದ್ಧ ಸಾಮಾಜಿಕ ಭದ್ರತೆಗಳಿಂದ ಕಾರ್ಮಿಕರನ್ನು ವಂಚಿಸುವಲ್ಲಿ ನಿರತವಾಗಿವೆ. ಇಂತಹ ಪರಿಸ್ಥಿತಿಯಲ್ಲಿ ನಡೆಯಲಿರುವ ಸಿಐಟಿಯು ಅಖಿಲ ಭಾರತ ಸಮ್ಮೇಳನ ಒಂದು ಮಹತ್ತರ ಘಟ್ಟವಾಗಲಿದೆ ಎಂದರು. ಕಳೆದ 5 ವರ್ಷಗಳಲ್ಲಿ ಶೇ.40ರಷ್ಟು ಬೆಲೆ ಏರಿಕೆಯಾಗಿದೆ. ಅವೈಜ್ಞಾನಿಕ ಜಿಎಸ್‌ಟಿ ಜಾರಿಯಿಂದ ಬಡಜನತೆ ಹಾಗೂ ಜನಸಾಮಾನ್ಯರು ಸಂಕಷ್ಟಕ್ಕೆ ಸಿಲುಕಿದ್ದಾರೆ. ವಿವಿಧ ಯೋಜನೆಗಳಡಿ ಕೆಲಸ ಮಾಡುವ ನೌಕರರು ನಿಕೃಷ್ಟ ಗೌರವಧನದಲ್ಲಿ ಬದುಕಬೇಕಾಗಿದೆ. ಖಾಯಂ ಹುದ್ದೆಗಳೇ ಇಲ್ಲದಂತೆ ಮಾಡಲಾಗುತ್ತಿದ್ದು, ಹೋರಾಟದ ಹಕ್ಕುಗಳನ್ನು ಕಸಿಯಲಾಗುತ್ತಿದೆ. ಕೋಮುವಾದ, ಮತೀಯ ದ್ವೇಷಗಳಿಗೆ ಕುಮ್ಮಕ್ಕು ನೀಡಲಾಗುತ್ತಿದೆ. ಈ ಎಲ್ಲಾ ವಿಚಾರಗಳ ಬಗ್ಗೆ ಸಮ್ಮೇಳನದಲ್ಲಿ ಚರ್ಚೆಯಾಗಲಿದ್ದು, ಮುಂದಿನ 3 ವರ್ಷಗಳ ಜನಚಳವಳಿ ಹಾಗೂ ಕಾರ್ಮಿಕರ ಹೋರಾಟದ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಅಖಿಲ ಭಾರತ ಸಮ್ಮೇಳನದ ಪೂರ್ವಭಾವಿಯಾಗಿ ಇದೇ ನ.15ರಿಂದ 17ರವರೆಗೆ ಕುಂದಾಪುರದಲ್ಲಿ ರಾಜ್ಯ ಸಮ್ಮೇಳನ ನಡೆಯಲಿದೆ. ಅಂತೆಯೇ ಮೈಸೂರು ಜಿಲ್ಲಾ ಸಮ್ಮೇಳನ ಇದೇ ಸೆ.17 ಮತ್ತು 18ರಂದು ನಂಜನಗೂಡಿನಲ್ಲಿ ನಡೆಯಲಿದೆ ಎಂದರು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಯರಾಂ, ಖಜಾಂಚಿ ಅಣ್ಣಪ್ಪ, ಪದಾಧಿಕಾರಿಗಳಾದ ಶಿವಕುಮಾರ್, ನವೀನ್ ಗೋಷ್ಠಿಯಲ್ಲಿದ್ದರು.

ಆ.27, 28ರಂದು ನಾಟಕ ಪ್ರದರ್ಶನ; 'ಸಂಬಂಜ ಅನ್ನೋದು ದೊಡ್ಡದು ಕನಾ'

ಹಿರಿಯ ಸಾಹಿತಿ ದೇವನೂರ ಮಹಾದೇವರ ಐದು ಕೃತಿ ಆಧರಿಸಿ ರಂಗಪ್ರಯೋಗ



ಮೈಸೂರು,ಆ.24(ಪಿಎಂ)–ಜನಮನ ಸಾಂಸ್ಕೃತಿಕ ಸಂಘಟನೆ ವತಿಯಿಂದ ಆ.27 ಮತ್ತು 28ರಂದು ಹಿರಿಯ ಸಾಹಿತಿ ದೇವನೂರ ಮಹಾದೇವ ಅವರ ಐದು ಕೃತಿಗಳನ್ನು ಆಧರಿಸಿದ 'ಸಂಬಂಜ ಅನ್ನೋದು ದೊಡ್ಡದು ಕನಾ' ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಸದರಿ ನಾಟಕದ ನಿರ್ದೇಶಕರೂ ಆದ ಮೈಸೂರು ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ (ಜನ್ನಿ) ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 30 ವರ್ಷಗಳಿಂದ ನಮ್ಮ ಈ ಸಂಘಟನೆ ಜನಪರ ಚಳವಳಿಗೆ ಪೂರಕವಾಗಿ ರಂಗ ಪ್ರಯೋಗ ನಡೆಸುತ್ತಾ ಬಂದಿದೆ. ಇದೀಗ ದೇವನೂರ ಮಹಾದೇವ ಅವರ ಆಯ್ದ ಕಥೆಗಳನ್ನು ಆಧರಿಸಿ ಒಂದು ನಾಟಕ ನಿರ್ಮಿಸುವ ವಿನೂತನ ಪ್ರಯೋಗ ಕೈಗೆತ್ತಿಕೊಂಡಿದೆ. ಸಂಘಟನೆಯಿಂದ ನಡೆದ ರಂಗಭೂಮಿ ಶಿಬಿರದಲ್ಲಿ ಭಾಗವಹಿಸಿದ 20 ಮಂದಿಯ ಯುವ ಜನರ ತಂಡದಿಂದ ಸದರಿ ನಾಟಕ ಪ್ರದರ್ಶನಗೊಳ್ಳಲಿದೆ ಎಂದರು.

ದೇವನೂರ ಮಹಾದೇವ ಅವರು ತಮ್ಮ ಕೃತಿಗಳಲ್ಲಿ ತಮ್ಮ ಪರಿಸರದ ಶೋಷಿತರ ಸಂವೇದನೆಗಳನ್ನು ಅತ್ಯಂತ ಸೃಜನಶೀಲವಾಗಿ ಸಾಮಾಜಿಕ ಅರಿವನ್ನು ಮೂಡಿಸುವ ನೆಲೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಇವರ ಮಹತ್ವದ ಕೃತಿಗಳನ್ನು ಅಷ್ಟೇ ಪರಿಣಾಮಕಾರಿಯಾಗಿ ನಾಟಕಕಾರ ಡಾ.ರಾಜಪ್ಪ ದಳವಾಯಿ, ರಂಗರೂಪಕ್ಕೆ ತಂದಿದ್ದಾರೆ. ಒಡಲಾಳ ಸೇರಿದಂತೆ ಆಯ್ದ ಐದು ಕೃತಿಗಳನ್ನು ಆಧರಿಸಿ 'ಸಂಬಂಜ ಅನ್ನೋದು ದೊಡ್ಡದು ಕನಾ' ನಾಟಕ ವಿನ್ಯಾಸ ಮಾಡಲಾಗಿದೆ. 1 ಗಂಟೆ 40 ನಿಮಿಷದ ಅವಧಿಯ ನಾಟಕ ಇದಾಗಿದೆ ಎಂದು ತಿಳಿಸಿದರು.

ಆ.26ರಂದು ಉದ್ಘಾಟನಾ ಪ್ರದರ್ಶನ: ಕಲಾಮಂದಿರದ ಕಿರುರಂಗಮಂದಿರದಲ್ಲಿ ಆ.27 ಮತ್ತು 28ರಂದು ಸಂಜೆ 7ಕ್ಕೆ ನಾಟಕ ಪ್ರದರ್ಶನವಿದ್ದು, 100 ರೂ.ಗಳ ಟಿಕೆಟ್ ವ್ಯವಸ್ಥೆ ಮಾಡಲಾಗಿದೆ. ಆ.26ರಂದು ಸಂಜೆ 7ಕ್ಕೆ ಇದೇ ಕಿರುರಂಗಮಂದಿರಲ್ಲಿ ಉದ್ಘಾಟನಾ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಇದಕ್ಕೆ ಹಿರಿಯ ಬಹುಭಾಷಾ ನಟ ಪ್ರಕಾಶ್ ರೈ ಚಾಲನೆ ನೀಡಲಿದ್ದಾರೆ. ಈ ಪ್ರದರ್ಶನಕ್ಕೆ ಆಹ್ವಾನಿತರಿಗೆ ಮಾತ್ರ ಅವಕಾಶವಿದೆ. ರೈತ ಸಂಘ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳಿಗೆ ಆಹ್ವಾನ ನೀಡಲಾಗುವುದು ಎಂದರು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸದರಿ ನಾಟಕದ ಪ್ರದರ್ಶನ ನೀಡುವ ಉದ್ದೇಶವಿದೆ. ಜೊತೆಗೆ ದೇವನೂರ ಮಹಾದೇವ ಅವರ 'ಆರ್‌ಎಸ್‌ಎಸ್ ಆಳ ಮತ್ತು ಅಗಲ' ಕೃತಿ ಆಧರಿಸಿಯೂ ರಂಗಪ್ರಯೋಗ ನಡೆಸುವ ಉದ್ದೇಶವೂ ಇದೆ ಎಂದು ವಿವರಿಸಿದರು. ನೆಲೆ ಹಿನ್ನೆಲೆ ಸಂಸ್ಥೆಯ ಕೆ.ಆರ್.ಗೋಪಾಲಕೃಷ್ಣ, ಕಲಾವಿದರಾದ ಮಧು ಮಳವಳ್ಳಿ, ಅಮೃತ್ ಗೋಷ್ಠಿಯಲ್ಲಿದ್ದರು.

ಬ್ಯಾಚುಲರ್ ಆಫ್ ವಿಜ್ಯುಯಲ್ ಆರ್ಟ್ಸ್ ಪದವಿ ಪ್ರವೇಶಾತಿಗಾಗಿ ಅರ್ಜಿ ಆಹ್ವಾನ

ಮೈಸೂರು, ಆ.24– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು (ಕಾವಾ) ವತಿಯಿಂದ 2022–23 ನೇ ಶೈಕ್ಷಣಿಕ ಸಾಲಿಗೆ ಮೈಸೂರು ಸಂಸ್ಥೆಯಲ್ಲಿ ಬ್ಯಾಚುಲರ್ ಆಫ್ ವಿಜ್ಯುಯಲ್ ಆರ್ಟ್ಸ್ (ಬಿ.ವಿ.ಎ) ದೃಶ್ಯಕಲೆಯಲ್ಲಿ ಪ್ರಥಮ ಪದವಿ ಪ್ರವೇಶಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪದವಿಯಲ್ಲಿ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್ ಕಲೆ(ಅಚ್ಚುಕಲೆ) ಅನ್ವಯ ಕಲೆ, ಕಲಾ ಇತಿಹಾಸ ಹಾಗೂ ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ವಿಭಾಗಗಳಲ್ಲಿ ವಿಶೇಷ ಅಧ್ಯಯನದ ಪದವಿಯಾಗಿದ್ದು ನಂತರ ಎರಡು ವರ್ಷದ ಸ್ನಾತಕೋತ್ತರ ಪದವಿ ಸಹ ಇರುತ್ತದೆ.

ಬಾಕಿ ಉಳಿದಿರುವ ಸೀಟುಗಳಿಗೆ ಪ್ರಥಮ ಬ್ಯಾಚುಲರ್ ಆಫ್ ವಿಜ್ಯುಯಲ್ ಆರ್ಟ್ಸ್ (ಬಿ.ವಿ.ಎ) ಪ್ರವೇಶಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಆ.30ರಂದು ಅಂತಿಮ ದಿನಾಂಕವಾಗಿದೆ. ಸೆ.1ರಂದು ಬೆಳಗ್ಗೆ 11 ಗಂಟೆಗೆ ಅರ್ಹತಾ ಪರೀಕ್ಷೆ ಹಾಗೂ ಮಧ್ಯಾಹ್ನ 2 ಗಂಟೆಗೆ ವೈಯಕ್ತಿಕ ಸಂದರ್ಶನ ಇರುತ್ತದೆ. ಆಸಕ್ತ ಅಭ್ಯರ್ಥಿಗಳು ಅಂತರ್ಜಾಲ ವಿಳಾಸ http://www. mysore.nic.in ಮತ್ತು http://www.cavamysore.karnataka.gov.in ಮೂಲಕ ಮಾಹಿತಿ ಪಡೆಯಬಹುದು. ಹೆಚ್ಚಿನ ಮಾಹಿತಿಗೆ ದೂ.ಸಂಖ್ಯೆ: 0821–2438931 ಅನ್ನು ಸಂಪರ್ಕಿಸಬಹುದು.

ಗ್ರಾಪಂ ಸದಸ್ಯರ ತೆಗೆದು ಹಾಕುವ ಕರಡು ಅಧಿಸೂಚನೆ ಹಿಂಪಡೆಯಲು ಎಂಎಲ್ಸಿ ಸಿ.ಎನ್.ಮಂಜೇಗೌಡ ಆಗ್ರಹ



ಮೈಸೂರು, ಆ.24(ಎಂಕೆ)– ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರನ್ನು ತೆಗೆದುಹಾಕುವ ಕರಡು ಅಧಿಸೂಚನೆ ವಾಪಸ್ ಪಡೆಯುವಂತೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಒತ್ತಾಯಿಸಿದ್ದಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ನಿಯಮಗಳಿಗೆ ಬದಲಾವಣೆ ತರುವ ಉದ್ದೇಶದಿಂದ ಜು.27ರಂದು ಹೊರಡಿಸಿರುವ ಸೂಚನೆಯು ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರನ್ನು ತೆಗೆದುಹಾಕುವ ಸಲಹೆಗಳನ್ನು ಒಳಗೊಂಡಿದೆ. ಈ ಸಲಹೆಗಳು ಕಾಯಿದೆಯಾಗಿ ಬದಲಾವಣೆಗೊಂಡು ಕಾರ್ಯಗತವಾದಲ್ಲಿ ಗ್ರಾಪಂ ಚುನಾಯಿತ ಪ್ರತಿನಿಧಿಗಳ ಕಾಯಿದೆ ಬದ್ಧ ಹಕ್ಕನ್ನು ಮೊಟಕುಗೊಳಿಸಿದಂತಾಗುತ್ತದೆ. ಆದ್ದರಿಂದ ಹೊರಡಿಸಿರುವ ಕರಡು ಅಧಿಸೂಚನೆಯನ್ನು ವಾಪಸ್ ಪಡೆಯುವಂತೆ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಕರಡು ಅಧಿಸೂಚನೆಯಲ್ಲಿ 12ಎಲ್, 43ಎ, 48(4) ಹಾಗೂ 48(5)ರಲ್ಲಿ ತಿಳಿಸಿರುವ ಅಂಶಗಳಿಗೆ ತಿದ್ದುಪಡಿತರುವ ಉದ್ದೇಶವಿದೆ. ಅದರಂತೆ ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರನ್ನು ತೆಗೆದುಹಾಕುವ ಪ್ರಕ್ರಿಯೆ ಸಂಬಂಧ ದೂರು ದಾಖಲಿಸುವ ಮತ್ತು ತನಿಖೆ ನಡೆಸಿ ವರದಿ ನೀಡುವ ಅಧಿಕಾರವನ್ನು ಸರ್ಕಾರ ಹಂತದಿಂದ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಹಂತಕ್ಕೆ ಇಳಿಸಿರುವುದು ಸರಿಯಲ್ಲ. ಈ ಪ್ರಕ್ರಿಯೆ ಮೊದಲಿನಂತೆ ಸರ್ಕಾರದ ಮಟ್ಟದಲ್ಲಿಯೇ ನಡೆಯಬೇಕು ಎಂದಿದ್ದಾರೆ.

ಕಾಯಿದೆ ಪ್ರಕಾರ 43ಎ, 48(4) ಹಾಗೂ 48(5)ರಲ್ಲಿ 'ದುರ್ನಡತೆ ಮತ್ತು ತಲೆತಗ್ಗಿಸುವ ನಡತೆಯಿಂದ ತಪ್ಪಿತಸ್ಥನಾಗಿದ್ದಾನೆಂದು' ಎನ್ನುವ ಪದಗಳನ್ನು ಬಳಸಲಾಗಿದೆ. ಆದರೆ ಎಲ್ಲಿಯೂ ದುರ್ನಡತೆ ಮತ್ತು ತಲೆತಗ್ಗಿಸುವ ನಡತೆ ಯಾವುದೆಂದು ವಿವರಣೆ ನೀಡಿಲ್ಲ. ಅಲ್ಲದೆ ಕಾಯಿದೆ ಲೋಪವನ್ನು ಬಳಸಿಕೊಂಡು ಹಾಗೂ ರಾಜಕೀಯ ಒತ್ತಡಕ್ಕೆ ಮಣಿದು ಅಧಿಕಾರಿಗಳು ದುರ್ಬಳಕೆ ಮಾಡುವ ಸಾಧ್ಯತೆಗಳಿವೆ ಎಂದು ಗ್ರಾಪಂ ಸದಸ್ಯರು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಚುನಾಯಿತ ಪ್ರತಿನಿಧಿಗಳನ್ನು ಗೌರವದಿಂದ ನೋಡುವುದು ಸರ್ಕಾರದ ಜವಾಬ್ದಾರಿಯಾಗಿದ್ದು, ಅಧಿಸೂಚನೆಯನ್ನು ವಾಪಸ್ ಪಡೆಯುವಂತೆ ಮನವಿ ಮಾಡಿದ್ದಾರೆ.

ಮಿನುಥಾಗೆ ಪಿಎಚ್.ಡಿ ಪದವಿ



ಮೈಸೂರು, ಆ. 24– ಡಾ.ಪಿ.ಜಯಶ್ರೀ ಅವರ ಮಾರ್ಗದರ್ಶನದಲ್ಲಿ ವಿ. ಮಿನುಥಾ ಅವರು ರಿಪ್ರೊಡಕ್ಟಿವ್ ಮತ್ತು ಚೈಲ್ಡ್ ಹೆಲ್ತ್ ಕೇರ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಉಚಿತ ಆಶ್ವಾಸನೆ ಬಗ್ಗೆ ಚರ್ಚಿಸಲು ಸರ್ವಪಕ್ಷ ಸಭೆ ಕರೆಯಬಾರದೇಕೆ: ಕೇಂದ್ರಕ್ಕೆ ಸುಪ್ರೀಂಕೋರ್ಟ್ ಸಲಹೆ

ನವದೆಹಲಿ: ರಾಜಕೀಯ ಪಕ್ಷಗಳ ಉಚಿತ ಆಶ್ವಾಸನೆಗಳ ಸಂಬಂಧ ಸಮಸ್ಯೆಯನ್ನು ಪರಿಹರಿಸಲು ಚರ್ಚೆಯ ಅಗತ್ಯವನ್ನು ಪುನರುಚ್ಚರಿಸಿದ ಸುಪ್ರೀಂಕೋರ್ಟ್, ಈ ಬಗ್ಗೆ ಚರ್ಚಿಸಲು ಸರ್ವಪಕ್ಷಗಳ ಸಭೆಗಳನ್ನು ಏಕೆ ಕರೆಯಬಾರದು ಎಂದು ಕೇಂದ್ರವನ್ನು ಪ್ರಶ್ನಿಸಿದೆ.

ಸಿಜೆಐ ಎನ್‌ವಿ ರಮಣ ನೇತೃತ್ವದ ಪೀಠವು ಆರ್ಥಿಕತೆಯನ್ನು ನಾಶಪಡಿಸುವ ಉಚಿತ ಭರವಸೆಗಳನ್ನು ನಿಷೇಧಿಸುವ ಬಗ್ಗೆ ಸರ್ವಾನುಮತದ ದೃಷ್ಟಿಕೋನವಿಲ್ಲದ ಹೊರತು ಸಮಸ್ಯೆಯನ್ನು ನಿಯಂತ್ರಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದೆ.

ಕೇವಲ ರಾಜಕೀಯ ಪಕ್ಷಗಳು ಭರವಸೆ ನೀಡಿ ಚುನಾವಣೆಗೆ ಸ್ಪರ್ಧಿಸುತ್ತವೆಯೇ ಹೊರತು ವ್ಯಕ್ತಿಗಳಲ್ಲ. ಈ ವ್ಯವಸ್ಥೆಯಲ್ಲಿ ವ್ಯಕ್ತಿಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಇಲ್ಲದಿರಬಹುದು ಆದರೆ ನಮ್ಮ ಪ್ರಜಾಪ್ರಭುತ್ವದಲ್ಲಿ ಅದರ ರಾಜಕೀಯ ಪಕ್ಷಗಳು. ಆರ್ಥಿಕತೆಯನ್ನು ನಾಶಪಡಿಸುವ ಉಚಿತಗಳನ್ನು ನಾವು ನಿಲ್ಲಿಸಬೇಕು ಎಂಬ ಸರ್ವಾನುಮತದ ದೃಷ್ಟಿ ಇರುವವರೆಗೆ ನಾವು ಸಮಸ್ಯೆಯನ್ನು ನಿಯಂತ್ರಿಸಲು ಸಾಧ್ಯವಿಲ್ಲ. ನಾಳೆ ನಾವು ಆದೇಶವನ್ನು ರವಾನಿಸಿದರೆ, ಯಾರೂ ಕಾಳಜಿ ವಹಿಸುವುದಿಲ್ಲ. ಎಲ್ಲಾ ರಾಜಕೀಯ ಪಕ್ಷಗಳು ಏಕೆ ಭೇಟಿಯಾಗಬಾರದು. ಕೇಂದ್ರ ಸರ್ಕಾರ ಅವರಿಗೆ ಏನು ಬೇಕು ಎಂದು ಅವರ ಅಭಿಪ್ರಾಯವನ್ನು ಕೇಳಬಹುದು ಎಂದು ಉನ್ನತ ನ್ಯಾಯಾಧೀಶರು ಹೇಳಿದರು.

ನಿವೃತ್ತ ಸುಪ್ರೀಂಕೋರ್ಟ್ ನ್ಯಾಯಾಧೀಶರು ಸಮಿತಿಯ ನೇತೃತ್ವ ವಹಿಸಬಹುದೆಂಬ ಹಿರಿಯ ವಕೀಲ ವಿಕಾಸ್ ಸಿಂಗ್ ಅವರ ಸಲಹೆಯ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ ಸಿಜೆಐ, 'ನಿವೃತ್ತಿ ಅಥವಾ ತನ್ನ ವೃತ್ತಿಜೀವನದಿಂದ ನಿವೃತ್ತಿ ಹೊಂದುವ ವ್ಯಕ್ತಿಗೆ ಭಾರತದಲ್ಲಿ ಯಾವುದೇ ಮೌಲ್ಯವಿಲ್ಲ. ಹೀಗಾಗಿ ಸಮಸ್ಯೆಗಳನ್ನು ಪರಿಹರಿಸಲು ಸಲಹೆಗಳನ್ನು ನೀಡಲು ರಚಿಸಲಾಗುವ ಸಮಿತಿಯ ಮುಖ್ಯಸ್ಥರಾಗಿರುವ ವ್ಯಕ್ತಿಗೆ ಸಂಬಂಧಿಸಿದಂತೆ ಪೀಠವು ತನ್ನ ಕಳವಳವನ್ನು ವ್ಯಕ್ತಪಡಿಸಿತು. ಚುನಾವಣೆಗೆ ಮುನ್ನ ಉಚಿತ ಆಶ್ವಾಸನೆ "ಮುಖ್ಯ ಸಮಸ್ಯೆ" ಎಂದು ಪರಿಗಣಿಸಿದ ವಕೀಲ ಪ್ರಶಾಂತ್ ಭೂಷಣ್, ಚುನಾವಣೆಗೆ ಕೇವಲ 6 ತಿಂಗಳ ಮೊದಲು ಉಚಿತ ಭರವಸೆಗಳನ್ನು ನೀಡುವುದು ಮತದಾರರಿಗೆ ಲಂಚ ನೀಡಿದಂತೆ ಎಂದು ಪ್ರತಿಪಾದಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.08.2022 ಗುರುವಾರ, ಮಳೆ ನಕ್ಷತ್ರ : ಮಖೆ, 17.08.2022 ರಿಂದ 30.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ
ತಿಥಿ: ತ್ರಯೋದಶಿ, ನಕ್ಷತ್ರ : ಪುಷ್ಯ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಮಾಸ ಶಿವರಾತ್ರಿ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸುವರ್ಣ ಪ್ರಾಶನ ಅಭಿಯಾನ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 8ರಿಂದ.

■ **ಶ್ರೀ ವಾಣಿ ವಿಲಾಸ ಅರಸು ಶಿಕ್ಷಣ ಸಂಸ್ಥೆಗಳು :** ಶ್ರೀ ವಾಣಿ ಫೆಸ್ಟ್–2022, ಉದ್ಘಾಟನೆ : ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಚಲನಚಿತ್ರ ನಟ ಧನ್ವೀರ್‌ಗೌಡ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಕಾರ್ಯದರ್ಶಿ ಮಹೇಶ್ ಎನ್. ಅರಸ್, ಸ್ಥಳ: ಕಾಲೇಜು ಆವರಣ, ನಜರ್‌ಬಾದ್, ಬೆಳಗ್ಗೆ 10ಕ್ಕೆ.

■ **ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು :** ಸಾಂಸ್ಕೃತಿಕ, ರಾಷ್ಟ್ರೀಯ ಸೇವಾ ಯೋಜನೆ, ರೇಂಜರ್ಸ್ ಚಟುವಟಿಕೆಗಳ ಸಮಾರೋಪ ಸಮಾರಂಭ, ಉದ್ಘಾಟನೆ : ಶಾಸಕ ಎಲ್.ನಾಗೇಂದ್ರ, ಮುಖ್ಯ ಅತಿಥಿಗಳು : ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಡಾ. ಎಂ.ಎನ್. ಗಿರಿಧರ್‌ರಾವ್, ಚಲನಚಿತ್ರ ನಟ ಅಭಿಲಾಶ್, ಕೆ.ವಿ. ಪ್ರಿಯಾ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಡಿ. ರವಿ, ಸ್ಥಳ: ಕಾಲೇಜಿನ ಕಲಾಮಂಟಪ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಮಹಿಳಾ ಕಾಲೇಜು, ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು:** ಸಂಸ್ಕೃತೋತ್ಸವ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ: ಪತ್ರಕರ್ತ ಶಿವಮೂರ್ತಿ ಜುಪ್ತಿಮಠ, ವಿಜಯ ವಿಠ್ಠಲ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್ ಅವರಿಂದ ವಿಶೇಷ ಉಪನ್ಯಾಸ, ಅಧ್ಯಕ್ಷತೆ: ಜೆಎಸ್‌ಎಸ್ ಮಹಿಳಾ ಕಾಲೇಜು ಪ್ರಿನ್ಸಿಪಾಲ್ ಡಾ.ಕೆ.ವಿ.ಸುರೇಶ, ಉಪಸ್ಥಿತರು: ಎಂ.ಪಿ.ರಾಜೇಶ್ವರಿ, ಡಾ. ಎಚ್.ಬಿ. ಸುರೇಶ್, ಡಾ.ಷಡಕ್ಷರಿ, ಡಾ.ಕೋಮಲ, ಸ್ಥಳ: ನವಜ್ಯೋತಿ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ಆರ್ಟ್ ಮ್ಯಾಟರ್ಸ್, ಮೈಸೂರು, ಮೈಸೂರು ವಿಶ್ವವಿದ್ಯಾನಿಲಯ :** ರಾಜ್ಯ ಮಟ್ಟದ ಕಾವಿಕಲೆ ಕಾರ್ಯಾಗಾರ, ಉದ್ಘಾಟನೆ: ಹಿರಿಯ ಕಲಾವಿದ ಎಸ್.ಎಂ.ಜಂಬುಕೇಶ್ವರ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತಕುಮಾರ್, ಮುಖ್ಯ ಅತಿಥಿಗಳು: ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್, ಆರ್ಟ್ ಮ್ಯಾಟರ್ಸ್‌ನ ಸಿ.ಚಂದ್ರಶೇಖರ್, ಶ್ರೀಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ಪ್ರಾಚಾರ್ಯ ಮಹದೇವ ಶೆಟ್ಟಿ, ಮೈಸೂರು ಜಿಲ್ಲಾ ಸಂಚಾಲಕ್ ಶಿವು, ಸ್ಥಳ: ವಿಜ್ಞಾನ ಭವನ, ಮೈಸೂರು ವಿವಿ, ಬೆಳಗ್ಗೆ 11ಕ್ಕೆ.

■ **ಸಂಚಲನ ಮೈಸೂರು :** ಸಂಚಲನ ಕುಣಿಯೋಣು ಬಾರಾ.. ಮಕ್ಕಳ ರಂಗ ತರಬೇತಿ, ಜಾನಪದ ನೃತ್ಯಗಳ ತರಬೇತಿ ಶಿಬಿರ, ಉದ್ಘಾಟನೆ : ಚಲನಚಿತ್ರ ನಟ ಮನ್ವಿತ್, ಅಧ್ಯಕ್ಷತೆ : ಗುರೂರು ಹಿರಿಯ ಪ್ರಾಥಮಿಕ ಶಾಲೆ ಅಧ್ಯಕ್ಷ ಚಿನ್ನಸ್ವಾಮಿ, ಮುಖ್ಯ ಅತಿಥಿಗಳು : ಶ್ರೀವತ್ಸ, ಜೀವನ್ ಕುಮಾರ್ ಬಿ. ಹೆಗ್ಗೋಡು, ಡಾ. ನಿಂಗರಾಜು, ಎಸ್. ಶ್ರೀಕಾಂತ್, ಪ್ರಾಸ್ತಾವಿಕ ನುಡಿ : ದೀಪಕ್ ಮೈಸೂರು, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗುರೂರು, ಮಧ್ಯಾಹ್ನ 3ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು:** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಶರಣ ಸಂಸ್ಕೃತಿ ಕುರಿತು ಪ್ರವಚನ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, ಗಾಯನ– ಎನ್. ಹೇಮಾ, ಅಮೃತಾ ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ– ಡಾ.ಲತಾ ಮೈಸೂರು, 10.00 ಅರುಣಾ ಸಾಯಿರಾಂ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ. ಮೀನಾ, 1.20 ಭಾವಗೀತೆ, 3.00 ರಾಗಲಹರಿ, ಪ್ರಸ್ತುತಿ–ಜಿ.ಪುಷ್ಪಲತಾ, ನಿರ್ಮಾಣ– ಎಸ್. ಸುಬ್ರಹ್ಮಣ್ಯ, 4.00 ಹಳ್ಳಿಹಾಡು– ಭಾಗವಹಿಸುವವರು ಮಾದಿಗಳ್ಳಿ ಗ್ರಾಮದ ಜಯಮ್ಮ ಮತ್ತು ಸಂಗಡಿಗರು, 4.30ಕನ್ನಡ ಭಾರತಿ "ವಿಶ್ವಕೋಶ : ಪರಿಶ್ರಮ–ಪ್ರಯೋಜನ", ಸಂವಾದದಲ್ಲಿ ಭಾಗವಹಿಸುವವರು ಡಾ.ಜಿ.ಎಲ್. ಹೆಗಡೆ, ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, ನಡೆಸಿಕೊಡುವವರು– ದಿವಾಕರ ಹೆಗಡೆ, 6.50 ಕೃಷಿರಂಗ– ಕಿಸಾನ್‌ವಾಣಿ – ತೋಟಗಾರಿಕೆ ಬೆಳೆಗಳ ನಿರ್ವಹಣೆಯಲ್ಲಿನ ಅನುಭವ ಕುರಿತು ಎ.ಹೆಚ್.ಮಹದೇವ ನಾಯಕ್ ಅವರೊಡನೆ ಸಂದರ್ಶನ, 9.00 ಯುವವಾಣಿ–ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಸಂಬಂಧವಾಗಿ ಅಂತರ್ ವಿಶ್ವವಿದ್ಯಾಲಯದ ಖೋ ಖೋ ಕ್ರೀಡೆಯ ಚಾಂಪಿಯನ್‌ಗಳಾದ ಅರ್ಪಿತಾ ಆರ್., ತೇಜಸ್ವಿನಿ ಕೆ.ಆರ್., ಚೈತ್ರಾ ಬಿ ಮತ್ತು ಮೋನಿಕಾ ಎಲ್ ಹಾಗೂ ಕೋಚ್ ಕಾಂತರಾಜ್ ಬಿ.ಡಿ. ಅವರೊಂದಿಗೆ ಮಾತುಕತೆ, 9.30 ಕನ್ನಡ ಭಾರತಿ, 10.30 ಸವಿನೆನಪು

■ **ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆ, ಇನ್ಸ್‌ಟಿಟ್ಯೂಷನ್ ಆಫ್ ವ್ಯಾಲ್ಯೂರ್ಸ್ :** ಚಾರ್ಟರ್ಡ್ ಅಕೌಂಟೆಂಟ್ ಕೆ.ವಿ. ಶ್ರೀನಿವಾಸನ್ ಅವರಿಂದ ಮೌಲ್ಯಮಾಪನ– ಒಂದು ಆನಂದದಾಯಕ ವೃತ್ತಿ ಕುರಿತು ಉಪನ್ಯಾಸ, ಗೌರವ ಅತಿಥಿಗಳು: ದೆಹಲಿ ಇನ್ಸ್‌ಟಿಟ್ಯೂಷನ್ ಆಫ್ ವ್ಯಾಲ್ಯೂರ್ಸ್ ಸೌತ್ ವೆಸ್ಟ್‌ನ ಟಿ.ವಿ. ಚಂದ್ರ, ಇನ್ಸ್‌ಟಿಟ್ಯೂಷನ್ ಆಫ್ ವ್ಯಾಲ್ಯೂರ್ಸ್, ಮೈಸೂರು ಶಾಖೆ ಅಧ್ಯಕ್ಷ ಆರ್. ರವಿ, ಅಧ್ಯಕ್ಷತೆ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಧನ್ವಂತರಿ ಪ್ರಯುಕ್ತ ಪಂಚರಾತ್ರೋತ್ಸವ ಕಾರ್ಯಕ್ರಮ, ಸಂಜೆ 6ರಿಂದ 7ರವರೆಗೆ ಆತನೂರಿನ ಪಂಡಿತ್ ಶ್ರೀ ಭೀಮಸೇನಾಚಾರ್ಯ ಅವರಿಂದ 'ಕೃಷ್ಣನ ಬಾಲಲೀಲೆಗಳು' ಕುರಿತು ವಿಶೇಷ ಪ್ರವಚನ, ಪ್ರತಿದಿನ ಸಂಜೆ 7 ಗಂಟೆಯಿಂದ ಶೇಷವಾಹನ ಉತ್ಸವ, ಗಜವಾಹನ ಉತ್ಸವ, ವಾಯುವಾಹನ ಉತ್ಸವ, ಗರುಡೋತ್ಸವ ಹಾಗೂ ಮಹಾರಥೋತ್ಸವ, ಸ್ಥಳ: ಶ್ರೀ ಉತ್ತರಾದಿ ಮಠ, ಅಗ್ರಹಾರ.

ಸುತ್ತೂರಿನಲ್ಲಿಂದು

■ **ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ:** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ಜೆಎಸ್‌ಎಸ್ ಕಾಲೇಜು ಪ್ರಾಧ್ಯಾಪಕ ಪ್ರೊ. ಹೆಚ್.ಟಿ. ದೇವಣ್ಣ, ವಾಚನ: ಜೆಎಸ್‌ಎಸ್ ಪ್ರೌಢಶಾಲೆ ದೈಹಿಕ ಶಿಕ್ಷಕ ಡಿ.ಎಂ. ಸಿದ್ದಲಿಂಗಸ್ವಾಮಿ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಸುತ್ತೂರು ಮಠ, ಸಂಜೆ 6.30ರಿಂದ.

ರತ್ನಪುರಿಯಲ್ಲಿಂದು

■ **ಮಹಾಜನ ವಿದ್ಯಾಸಂಸ್ಥೆ, ರಾಜ್ಯ ಕಾನೂನು ವಿಶ್ವವಿದ್ಯಾಲಯ (ಹುಬ್ಬಳ್ಳಿ), ಎಸ್‌ಬಿಆರ್‌ಆರ್ ಮಹಾಜನ ಕಾಲೇಜು (ರಾಷ್ಟ್ರೀಯ ಸೇವಾ ಯೋಜನೆಯ ಘಟಕ):** ವಾರ್ಷಿಕ ವಿಶೇಷ ಶಿಬಿರ 2021–22, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ, ಬೆಳಗ್ಗೆ 10 ಗಂಟೆಗೆ ಕಾನೂನು ಅರಿವು ಕಾರ್ಯಕ್ರಮ, ಅಧ್ಯಕ್ಷತೆ : ಮಹಾಜನ ವಿದ್ಯಾಸಂಸ್ಥೆ ಕಾರ್ಯದರ್ಶಿ ಶ್ರೀಮತಿ ವಿಜಯಲಕ್ಷ್ಮೀ ಮುರಳೀಧರ್, ಮುಖ್ಯ ಅತಿಥಿಗಳು : ಹಿರಿಯ ಸಿವಿಲ್ ನ್ಯಾಯಾಧೀಶ ದೇವರಾಜ್ ಭೂತೆ, ಹುಣಸೂರು ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷ ಶಿರಿನ್ ಜಾವಿದ್ ಅನ್ಸಾರಿ, ಸದಸ್ಯ ಕಾರ್ಯದರ್ಶಿ ಮನು ಪಟೇಲ್ ಬಿ.ವೈ., ವಕೀಲರ ಸಂಘದ ಅಧ್ಯಕ್ಷ ಯೋಗಣ್ಣೇಗೌಡ, ಮಹಾಜನ ಕಾನೂನು ಕಾಲೇಜು ಪ್ರಾಂಶುಪಾಲ ಪ್ರೊ. ಎಂ.ಎಂ. ಪ್ರಭುಸ್ವಾಮಿ, ಸ್ಥಳ: ಸರ್ಕಾರಿ ಪ್ರೌಢಶಾಲೆ, ರತ್ನಪುರಿ, ಹುಣಸೂರು ತಾ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 25 ಗುರುವಾರ 2022

ಸಂಪುಟ: 43 | ಸಂಚಿಕೆ: 130 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಇದು ಅತ್ಯಂತ ಭ್ರಷ್ಟ ಸರ್ಕಾರ

● ಸಚಿವರು, ಶಾಸಕರಿಂದ 40% ಕಮಿಷನ್‌ಗೆ ಬೇಡಿಕೆ: ಗುತ್ತಿಗೆದಾರ ಸಂಘದ ಅಧ್ಯಕ್ಷ ಕೆಂಪಣ್ಣ ಮತ್ತೊಮ್ಮೆ ಆಕ್ರೋಶ
● ಕೋಲಾರ ಉಸ್ತುವಾರಿ ಸಚಿವ ಮುನಿರತ್ನ ವಿರುದ್ಧ ನೇರಾನೇರ ಕಮಿಷನ್ ಕೇಳಿದ ಆರೋಪ
● ವಿಪಕ್ಷ ನಾಯಕ ಸಿದ್ದರಾಮಯ್ಯ ಭೇಟಿ ನಂತರ ಮಾಧ್ಯಮಗಳ ಮುಂದೆ ಕಮಿಷನ್ ಕಿರುಕುಳ ಬಹಿರಂಗ

ಬೆಂಗಳೂರು, ಆ.24–ರಾಜ್ಯ ಬಿಜೆಪಿ ಸರ್ಕಾರದ ಮೇಲೆ ಮತ್ತೊಮ್ಮೆ 40% ಕಮಿಷನ್ ಆರೋಪ ಗುತ್ತಿಗೆದಾರರಿಂದ ಕೇಳಿ ಬಂದಿದೆ. ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಮತ್ತೊಮ್ಮೆ ಕೆರಳಿದ್ದಾರೆ. ಸರ್ಕಾರದ ಸಂಪೂರ್ಣ ವ್ಯವಸ್ಥೆಯೇ ಭ್ರಷ್ಟಾಚಾರದಲ್ಲಿ ಮುಳುಗಿದೆ. ಸಚಿವರುಗಳು, ಶಾಸಕರ ಪ್ರತಿಯೊಂದು ಇಲಾಖೆಯಲ್ಲಿಯೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಸರ್ಕಾರದ ಆಡಳಿತ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ.




ಈ ಬಗ್ಗೆ ಮತ್ತೊಮ್ಮೆ ಪ್ರಧಾನಿ ಮೋದಿಗೆ ಪತ್ರ ಬರೆಯುವುದಾಗಿ ಕೆಂಪಣ್ಣ ಗುಡುಗಿದ್ದಾರೆ. ಕೋಲಾರ ಜಿಲ್ಲೆ ಉಸ್ತುವಾರಿ ಸಚಿವ ಮುನಿರತ್ನ ಅವರ ಹೆಸರನ್ನು ಮಾಧ್ಯಮಗಳ ಮುಂದೆ ಪ್ರಸ್ತಾಪಿಸಿರುವ ಅವರು, ಗುತ್ತಿಗೆದಾರರಿಗೆ ಕೆಲಸ ಮಂಜೂರು ಆಗಬೇಕೆಂದರೆ ಲಂಚ ಕೊಡಬೇಕು, ಇಲ್ಲದಿದ್ದರೆ ಗುತ್ತಿಗೆ ರದ್ದು ಮಾಡಲಾಗುವುದು, ಹಣ ಕಲೆಕ್ಟ್ ಮಾಡಿ ತನ್ನಿ ಎಂದು ತೋಟಗಾರಿಕೆ ಸಚಿವ ಮುನಿರತ್ನ ನೇರವಾಗಿ ಇಂಜಿನಿಯರ್‌ಗಳಿಗೆ ಬೆದರಿಕೆ ಹಾಕುತ್ತಾರೆ ಎಂದು ಕೆಂಪಣ್ಣ ದೂರಿದ್ದಾರೆ. ಮೂರು ವರ್ಷಗಳಿಂದ ಕೆಲಸ ಮಾಡದಿದ್ದರೆ ಮೆಷಿನ್ ತಂದು ಪರೀಕ್ಷೆ ಮಾಡಿಸುತ್ತೇವೆ ಎಂದು ಸಹ ಗುತ್ತಿಗೆದಾರರಿಗೆ ಬೆದರಿಕೆ ಹಾಕುತ್ತಾರಂತೆ. ಮೂರು ವರ್ಷದಿಂದ ಇನ್ನೂ ಪೇಮೆಂಟ್ ಮಾಡಿಲ್ಲ, ಮುನಿ ರತ್ನ ಅವರು ರಾಜರಾಜೇಶ್ವರಿ ನಗರ ಕ್ಷೇತ್ರದಲ್ಲಿ ಎಷ್ಟು ಕೆಲಸ ಮಾಡಿದ್ದಾರೆ ತೋರಿಸಲಿ ನೋಡೋಣ ಎಂದು ಸವಾಲು ಹಾಕಿದ್ದರು. ಸರ್ಕಾರದ ಸಚಿವರು, ಶಾಸಕರು ಲಂಚ, ಭ್ರಷ್ಟಾಚಾರದಲ್ಲಿ ನಂಬರ್ 1, 2 ಸ್ಥಾನದಲ್ಲಿದ್ದಾರೆ. ಗುತ್ತಿಗೆದಾರರಿಂದ ಕಾಮಗಾರಿ ಹಣದಲ್ಲಿ ಶೇಕಡಾ 40ರಷ್ಟು ಲಂಚ ಪಡೆಯುತ್ತಾರೆ. ಅವರಿಗೆ ಇಷ್ಟೊಂದು ಲಂಚ ಹೋದರೆ ಉಳಿದ ಹಣದಲ್ಲಿ ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ಮಾಡಲು ಹೇಗೆ ಸಾಧ್ಯ, ಗುತ್ತಿಗೆದಾರರು ಜನಪ್ರತಿನಿಧಿಗಳ ಕಿರುಕುಳದಿಂದ ನಲುಗಿ ಹೋಗುತ್ತಿದ್ದಾರೆ ಎಂದು ಕೆಂಪಣ್ಣ ಆರೋಪಿಸಿದ್ದಾರೆ.

ಒಂದು ವರ್ಷ 2 ತಿಂಗಳಿಂದ ಹೋರಾಟ ಮಾಡುತ್ತಿದ್ದೇವೆ. ಸಿಎಂ ಮಾತಿಗೂ ಬೆಲೆ ಇಲ್ಲದಂತಾಗಿದೆ. ಮಾನ, ಮರ್ಯಾದೆ ಇಲ್ಲದ ಜನಪ್ರತಿನಿಧಿಗಳು ಇವರು. ಇನ್ನೂ 22 ಸಾವಿರ ಕೋಟಿ ಬಿಲ್ ಪೆಂಡಿಂಗ್ ಇದೆ. ಕೆಲವರದು 3 ವರ್ಷಗಳಿಂದ ಬಾಕಿ ಇದೆ. ನನ್ನ ಜೀವನದಲ್ಲಿ ನೋಡಿದ ಅತ್ಯಂತ ಭ್ರಷ್ಟ ಸರ್ಕಾರ ಇದಾಗಿದೆ. ಇದರಲ್ಲಿ ಎಲ್ಲರೂ ಇದ್ದಾರೆ. ▶ 8ನೇ ಪುಟಕ್ಕೆ

ನನ್ನ ವಿರುದ್ಧ ಆರೋಪಕ್ಕೆ ಸಾಕ್ಷಿ, ದಾಖಲೆ ಕೊಡಬೇಕು


ಇಲ್ಲದಿದ್ದರೆ ಕೆಂಪಣ್ಣ ವಿರುದ್ಧ ಮಾನನಷ್ಟ ಮೊಕದ್ದಮೆ ಹಾಕುವೆ



ಬೆಂಗಳೂರು: ತಮ್ಮ ವಿರುದ್ಧ 40% ಕಮಿಷನ್ ಆರೋಪ ಮಾಡಿರುವ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ವಿರುದ್ಧ ತೋಟಗಾರಿಕೆ ಇಲಾಖೆ ಸಚಿವ ಮುನಿರತ್ನ ಗರಂ ಆಗಿದ್ದಾರೆ. ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಇಂದು ಮಾಧ್ಯಮ ಪ್ರತಿನಿಧಿಗಳ ಮುಂದೆ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವರೊಬ್ಬರು ಗುತ್ತಿಗೆದಾರರಲ್ಲಿ ನೀವು ಹಣ ಕಲೆಕ್ಟ್ ಮಾಡಿಕೊಂಡು ಬಾರದಿದ್ದರೆ ಕಾರ್ಯ ನಿರ್ವಹಣಾ ಎಂಜಿನಿಯರ್‌ಗಳನ್ನು ಸಸ್ಪೆಂಡ್ ಮಾಡುತ್ತೇನೆ ಎಂದು ಬೆದರಿಕೆ ಹಾಕುತ್ತಾರಂತೆ ಎಂದರು. ಆಗ ಮಾಧ್ಯಮ ಪ್ರತಿನಿಧಿಗಳು ಯಾರು ಆ ಜಿಲ್ಲಾ ಉಸ್ತುವಾರಿ ಸಚಿವರು, ಹೆಸರು ಹೇಳಿ ಎಂದು ಒತ್ತಾಯಿಸಿದಾಗ ಕೋಲಾರ ಜಿಲ್ಲಾ ಉಸ್ತುವಾರಿ ಸಚಿವರು ಎಂದರು. ಇದಕ್ಕೆ ಗರಂ ಆಗಿ ಮಾಧ್ಯಮಗಳ ಮುಂದೆ ಪ್ರತಿಕ್ರಿಯಿಸಿರುವ ತೋಟಗಾರಿಕೆ ಇಲಾಖೆ ಸಚಿವ ಮುನಿರತ್ನ, ಕೆಂಪಣ್ಣ ಏನೇ ಆರೋಪ ಮಾಡಬಹುದು, ಅದಕ್ಕೆ ಸಾಕ್ಷಿ ಇದೆಯೇ, ಇದ್ದರೆ ದಾಖಲೆ ಕೊಡಬೇಕು. ಇಲ್ಲದಿದ್ದರೆ ನಾನು ಮಾನನಷ್ಟ ಮೊಕದ್ದಮೆ ಕೇಸ್ ಹಾಕುತ್ತೇನೆ ಎಂದು ಎಚ್ಚರಿಕೆ ನೀಡಿದ್ದಾರೆ. ಆರೋಪಕ್ಕೆ ಸಂಬಂಧಿಸಿದಂತೆ ಒಂದು ಸಣ್ಣ ಸಾಕ್ಷಿ ಕೊಡಲಿ. ನನ್ನ ಬಳಿ ಯಾರು ಬಂದಿದ್ದಾರೆ, ನಾನು ಏನು ಹೇಳಿದ್ದೇನೆ. ಎಲ್ಲವನ್ನೂ ನಾನೇ ತನಿಖೆ ಮಾಡಿಸುತ್ತೇನೆ, ಇದನ್ನು ಬಿಡಲ್ಲ. ಸರ್ಕಾರ, ಸಚಿವರ ಬಗ್ಗೆ ಆರೋಪ ಮಾಡಿದರೆ ಸುಮ್ಮನಿರಲ್ಲ. ಕಾನೂನು ಹೋರಾಟ ಮಾಡ್ತೇನೆ. ನನ್ನ ತಪ್ಪಿದ್ದರೆ ಏನು ಶಿಕ್ಷೆ ಕೊಟ್ಟರೂ ನಾನು ಅನುಭವಿಸುತ್ತೇನೆ ಎಂದು ಸಚಿವ ಮುನಿರತ್ನ ಗುಡುಗಿದ್ದಾರೆ.

ಸಚಿವರು, ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರದ ಪುರಾವೆ ಇದ್ದರೆ ಲೋಕಾಯುಕ್ತಕ್ಕೆ ದೂರು ನೀಡಿ

● ಗುತ್ತಿಗೆದಾರರ ಸಂಘಕ್ಕೆ ಮುಖ್ಯಮಂತ್ರಿ ಬೊಮ್ಮಾಯಿ ಸಲಹೆ
● ಲೋಕಾಯುಕ್ತ ಸ್ವಾಯತ್ತ ಸಂಸ್ಥೆ; ಹಸ್ತಕ್ಷೇಪ ಮಾಡಲಾಗದು
● ವಿಪಕ್ಷ ನಾಯಕ ಸಿದ್ದರಾಮಯ್ಯ ಭೇಟಿಯಾದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ನಡೆಗೆ ತೀಕ್ಷ್ಣ ಪ್ರತಿಕ್ರಿಯೆ



ಬೆಂಗಳೂರು, ಆ.24(ಕೆಎಂಶಿ)– ಭ್ರಷ್ಟಾಚಾರದ ಪುರಾವೆ, ದಾಖಲೆಗಳಿದ್ದರೆ, ಸಂಬಂಧಿಸಿದ ಸಚಿವರು, ಅಧಿಕಾರಿಗಳ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.

ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, 40% ಕಮಿಷನ್ ಆರೋಪಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಿ, ಹೇಳಿಕೆ ನೀಡಿದ ನಂತರ ಇದಕ್ಕೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿಯವರು ಶಾಸನಬದ್ಧವಾದ ತನಿಖಾ ಸಂಸ್ಥೆಗೆ ಯಾವುದೇ ಆರೋಪಗಳಿದ್ದರೂ, ದೂರು ನೀಡಬಹುದು. ▶ 8ನೇ ಪುಟಕ್ಕೆ

40% ಅಲ್ಲ 50% ಕಮಿಷನ್ ಸರ್ಕಾರ!

ವಿಪಕ್ಷ ನಾಯಕ ಸಿದ್ದರಾಮಯ್ಯ ಗಂಭೀರ ಆರೋಪ



ಬೆಂಗಳೂರು, ಆ.24–ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ 40% ಅಲ್ಲ 50% ರಷ್ಟು ಕಮಿಷನ್ ತೆಗೆದುಕೊಳ್ಳುತ್ತದೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ದೂರಿದ್ದಾರೆ.

ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣರಿಂದ ಪರ್ಸೆಂಟೇಜ್‌ಗೆ ಸಂಬಂಧಿಸಿದಂತೆ ದೂರು ಸ್ವೀಕರಿಸಿ, ಮಾಧ್ಯಮಗಳೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ಬಿಜೆಪಿ ಸರ್ಕಾರದ ಭ್ರಷ್ಟಾಚಾರ ತಾರಕಕ್ಕೇರಿದೆ ಎಂದರು.

ಆ ಮೂಲಕ ಪರ್ಸೆಂಟೇಜ್ ಆರೋಪದ ಧೂಳು ಮತ್ತೊಮ್ಮೆ ಸರ್ಕಾರದ ಮೇಲೆ ಕವಿದಿದ್ದು ಮುಂದಿನ ದಿನಗಳಲ್ಲಿ ಮತ್ತಷ್ಟು ತಾರಕಕ್ಕೇರುವ ಲಕ್ಷಣಗಳಿವೆ. ಈ ವಿಚಾರವನ್ನು ತಾವು ವಿಧಾನಸಭೆಯಲ್ಲಿ ಒತ್ತಾಯ ಮಾಡಬೇಕು ಎಂದು ನನಗೆ ಮನವಿ ಮಾಡಿದ್ದರು. ಟೆಂಡರ್ ಅನುಮೋದನೆಗೆ ಮೊದಲೇ 30 ರಿಂದ 40% ಲಂಚ ಕೊಡಬೇಕಾಗಿದೆ. ▶ 8ನೇ ಪುಟಕ್ಕೆ

ಮ್ಯಾಜಿಕ್ ನಂಬರ್ 113 ತಲುಪಲು ಮತ್ತೊಮ್ಮೆ ಆಪರೇಷನ್ ಕಮಲ

ಜೆಡಿಎಸ್, ಕಾಂಗ್ರೆಸ್ ಪ್ರಭಾವಿ ಶಾಸಕರ ಮನೆ ಬಾಗಿಲಿಗೆ ಎಡತಾಕುತ್ತಿರುವ ಬಿಜೆಪಿ ನಾಯಕರು

ಬೆಂಗಳೂರು, ಆ.24(ಕೆಎಂಶಿ)– ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಮ್ಯಾಜಿಕ್ ಸಂಖ್ಯೆ 113ರ ಗಡಿ ತಲುಪಲು ಬಿಜೆಪಿ ಮತ್ತೊಮ್ಮೆ ಆಪರೇಷನ್ ಕಮಲಕ್ಕೆ ಮುಂದಾಗಿದೆ. ಜೆಡಿಎಸ್‌ನ ಆಯ್ದ ಶಾಸಕರನ್ನು ಗುರಿಯಾಗಿಸಿಕೊಂಡು ನಿರಂತರವಾಗಿ ಅವರ ಮನವೊಲಿಸುವ ಕಾರ್ಯ ನಡೆದಿದೆ.

ವಿಧಾನಸಭೆ ಚುನಾವಣೆ ಇತಿಹಾಸದಲ್ಲೇ ಬಿಜೆಪಿ ನೂರು ಕ್ಷೇತ್ರದಲ್ಲಿ ಖಾತೆ ತೆರೆದಿಲ್ಲ. ಇಂತಹ ಕ್ಷೇತ್ರಗಳಲ್ಲಿ ವರ್ಚಸ್ವಿ ಮತ್ತು ಪ್ರಭಾವ ಹೊಂದಿರುವ ಜೆಡಿಎಸ್‌ನ 12ಕ್ಕೂ ಹೆಚ್ಚು ಶಾಸಕರನ್ನು ಸಂಪರ್ಕಿಸಿದೆ. ಜೆಡಿಎಸ್, ಅಷ್ಟೇ ಅಲ್ಲ, ಕಾಂಗ್ರೆಸ್ ಶಾಸಕರಿಗೂ ಗಾಳ ಹಾಕಿದೆ. ಇವರನ್ನು ಸೆಳೆಯಲು ಪಕ್ಷದ ಹಿರಿಯ ಮುಖಂಡರು ಹಾಗೂ ಸಚಿವರ ತಂಡ ರಚಿಸಲಾಗಿದೆ. ಜೆಡಿಎಸ್, ಕಾಂಗ್ರೆಸ್ ತೊರೆದು ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಸೇರುವ ಭರವಸೆ ನೀಡಿದರೆ, ಅವರವರ ಕ್ಷೇತ್ರದಲ್ಲಿ ಅಭಿವೃದ್ಧಿಗೆ 200 ಕೋಟಿ ರೂ. ಬಿಡುಗಡೆ ಮಾಡುವುದರ ಜತೆಗೆ ಪಕ್ಷವೇ ಚುನಾವಣಾ ವೆಚ್ಚ ಭರಿಸಲಿದೆ.

> “ಈ ಮಧ್ಯೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ತಮ್ಮನ್ನು ಯಾವ ಬಿಜೆಪಿ ನಾಯಕರೂ ಭೇಟಿ ಮಾಡಿಲ್ಲ, ಅದರ ಬಗ್ಗೆ ತಮಗೆ ಮಾಹಿತಿಯೂ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಕೆಲವರಿಗೆ ಅವರು ಪ್ರತಿನಿಧಿಸುವ ಜಿಲ್ಲೆ ವಿಭಜಿಸಿ ಅವರ ಕ್ಷೇತ್ರವನ್ನೇ ಜಿಲ್ಲೆ ಮಾಡುವ ಭರವಸೆ ನೀಡಲಾಗಿದೆ. ಈಗಲೇ ಸರ್ಕಾರದಿಂದ ನಿಮ್ಮೆಲ್ಲಾ ಕೆಲಸ ಮಾಡುತ್ತೇವೆ ಎಂಬ ವಿಶ್ವಾಸ ಮೂಡಿಸಲಾಗುತ್ತಿದೆ. ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಒಂದಲ್ಲ ಒಂದು ಅಧಿಕಾರ ನೀಡುತ್ತೇವೆ. ಈಗಾಗಲೇ ಬಂದವರಿಗೆ ಈ ರೀತಿ ಅವಕಾಶ ಕಲ್ಪಿಸಲಾಗಿದೆ. ಹೀಗೆ ಕೋರಿಕೆ, ಒತ್ತಡ ಹೇರುವ ಮೂಲಕ ಸೆಳೆಯುವ ಪ್ರಯತ್ನ ನಡೆಸಲಾಗಿದೆ. ▶ 8ನೇ ಪುಟಕ್ಕೆ

ಅಂತೂ ಐದು ತಿಂಗಳ ನಂತರ ಮೀಸಲಾತಿ ಪ್ರಕಟಿಸಿದ ಸರ್ಕಾರ

ಸಾಮಾನ್ಯ ವರ್ಗಕ್ಕೆ ಮೈಸೂರು ಮೇಯರ್



ಮೈಸೂರು, ಆ.24(ಆರ್‌ಕೆ)–ಅಂತೂ, ಸರ್ಕಾರ ಮೈಸೂರು ಮೇಯರ್ ಹಾಗೂ ಉಪ ಮೇಯರ್ ಸ್ಥಾನಗಳಿಗೆ ಮೀಸಲಾತಿ ಪ್ರಕಟಿಸಿದೆ. ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಟಿ.ಮಂಜುನಾಥ್, ಮೈಸೂರು ಸೇರಿದಂತೆ 10 ಮಹಾನಗರ ಪಾಲಿಕೆಗಳ ಮೇಯರ್ ಮತ್ತು ಉಪ ಮೇಯರ್ ಸ್ಥಾನಗಳಿಗೆ ಮೀಸಲಾತಿ ನಿಗದಿಪಡಿಸಿರುವ ಸಂಬಂಧ ಇಂದು ಅಧಿಸೂಚನೆ ಹೊರಡಿಸಿದ್ದು, ಕರ್ನಾಟಕ ರಾಜ್ಯಪತ್ರದಲ್ಲೂ ಪ್ರಕಟಿಸಲಾಗಿದೆ. ತೀವ್ರ ಕುತೂಹಲ ಕೆರಳಿಸಿದ್ದ ಮೈಸೂರು ಮಹಾನಗರ ಪಾಲಿಕೆ ಮೇಯರ್ ಸ್ಥಾನ ಸಾಮಾನ್ಯ (General) ಹಾಗೂ ಉಪ ಮೇಯರ್ ಸ್ಥಾನ ಹಿಂದುಳಿದ ವರ್ಗಗಳ ▶ 7ನೇ ಪುಟಕ್ಕೆ

ಬಿಸಿಎ ಮಹಿಳೆಗೆ ಉಪ ಮೇಯರ್ ಸ್ಥಾನ

ಮೇಯರ್ ಗಾದಿಗೆ ಭಾರೀ ಪೈಪೋಟಿ ಸಾಧ್ಯತೆ....

ಅಂತಿಮವಾಗಿ ಆಯಾಯ ಪಕ್ಷದ ವರಿಷ್ಠರ ಆಯ್ಕೆಗೆ ಸರ್ವರೂ ಶರಣು... ಶರಣು...

ಮೈಸೂರು, ಆ.24(ಎಸ್‌ಬಿಡಿ)– ಮೈಸೂರು ಮಹಾನಗರ ಪಾಲಿಕೆ ಮೇಯರ್ ಗಾದಿಗೆ ಭಾರೀ ಪೈಪೋಟಿ ಸೃಷ್ಟಿಯಾಗುವ ಸಾಧ್ಯತೆ ಇದೆ. ಮೇಯರ್ ಸ್ಥಾನ 'ಸಾಮಾನ್ಯ' ವರ್ಗಕ್ಕೆ ಮೀಸಲಾಗಿರುವ ಕಾರಣ ಎಲ್ಲಾ 65 ಕಾರ್ಪೊರೇಟರ್‌ಗಳೂ ಅರ್ಹರಾಗಿದ್ದು, 'ಬಿಸಿಎ ಮಹಿಳೆ'ಗೆ ಮೀಸಲಾಗಿರುವ ಉಪಮೇಯರ್ ಸ್ಥಾನಕ್ಕೂ ಅಧಿಕ ಮಂದಿ ಆಕಾಂಕ್ಷಿಗಳಿದ್ದಾರೆ. ಯಾವ ಪಕ್ಷಗಳಿಗೂ ನಿರ್ದಿಷ್ಟ ಬಹುಮತ ಇಲ್ಲದಿರುವುದರಿಂದ ಮೈತ್ರಿ ಅನಿವಾರ್ಯ. ಈ ನಿಟ್ಟಿನಲ್ಲಿ ಚುನಾವಣಾ ವೇಳಾಪಟ್ಟಿ ಪ್ರಕಟವಾದ ಬಳಿಕ ಚಟುವಟಿಕೆ ಚುರುಕುಗೊಳ್ಳಲಿದೆ. ಎಲ್ಲಾ ಪಕ್ಷಗಳ ರಾಜ್ಯ ಮಟ್ಟದ ನಾಯಕರು ನೀಡುವ ಸೂಚನೆಯಂತೆ 'ಮೈತ್ರಿ' ಪ್ರಕ್ರಿಯೆ ನಡೆಯಲಿದೆ.

'ಮೇಯರ್' ಜೆಡಿಎಸ್‌ಗೆ?: ಮೈಸೂರು ನಗರ ಪಾಲಿಕೆ ಪ್ರಥಮ ಬಾರಿ ಬಿಜೆಪಿ ಅಧಿಕಾರ ಹಿಡಿಯುವಲ್ಲಿ ಜೆಡಿಎಸ್ ಪಾತ್ರ ಮಹತ್ವದಾಗಿತ್ತು. ಬಿಜೆಪಿಯ ಸುನಂದಾ ಪಾಲನೇತ್ರ ಅವರು ಮೇಯರ್ ಆಗಲು ಪರೋಕ್ಷವಾಗಿ ಜೆಡಿಎಸ್ ಕಾರಣವಾಗಿತ್ತು. ಕಾಂಗ್ರೆಸ್ ಜೊತೆಗಿನ ಸ್ನೇಹ ಕಳಚಿಕೊಂಡು ಚುನಾವಣೆಯಲ್ಲಿ ತಟಸ್ಥವಾಗಿ ಉಳಿಯುವ ಮೂಲಕ ಬಿಜೆಪಿ ಗೆಲುವಿಗೆ ಸಹಕರಿಸಿತು. ಬಿಜೆಪಿ ಸುನಂದಾ ಪಾಲನೇತ್ರ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗಿ ಹಿರಿಯ ಸದಸ್ಯೆ ಶಾಂತಕುಮಾರಿ ಕಣಕ್ಕಿಳಿದಿದ್ದರು. ಕಡೇ ಗಳಿಗೆಯಲ್ಲಾದರೂ ಜೆಡಿಎಸ್ ಸದಸ್ಯರು ▶ 7ನೇ ಪುಟಕ್ಕೆ

ಜನರ ಸೇವೆ ಮಾಡಿದ ತೃಪ್ತಿ ಇದೆ



ಮೈಸೂರು,ಆ.24(ಆರ್‌ಕೆ)–ಮೇಯರ್ ಆಗಿ ಜನರಿಗೆ ಕೈಲಾದ ಸೇವೆ ಮಾಡಿದ್ದೇನೆಂಬ ತೃಪ್ತಿ ಇದೆ ಎಂದು ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ತಿಳಿಸಿದ್ದಾರೆ. ಮೈಸೂರು ಮೇಯರ್, ಉಪ ಮೇಯರ್ ಸ್ಥಾನಗಳಿಗೆ ಮೀಸಲಾತಿ ಅಧಿಸೂಚನೆ ಪ್ರಕಟವಾದ ಹಿನ್ನೆಲೆಯಲ್ಲಿ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಅವರು, ಪಕ್ಷಕ್ಕಾಗಿ ದುಡಿದಿರುವ ನನ್ನನ್ನು ಮೇಯರ್ ಮಾಡಿ ಜನ ಸೇವೆಗೆ ಅವಕಾಶ ಕಲ್ಪಿಸಿದ ಪಕ್ಷದ ಎಲ್ಲಾ ನಾಯಕರು, ಕಾರ್ಪೊರೇಟರ್‌ಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು. ನಿಯಮಾನುಸಾರ ಈಗ ಸರ್ಕಾರ ಹೊಸ ಮೇಯರ್, ಉಪ ಮೇಯರ್ ಸ್ಥಾನಗಳಿಗೆ ಮೀಸಲಾತಿ ಪ್ರಕಟಿಸಿರುವುದನ್ನು ಸ್ವಾಗತಿಸುತ್ತೇನೆ. ಮುಂದೆ ಅಧಿಕಾರ ವಹಿಸಿಕೊಳ್ಳುವವರಿಗೆ ನನ್ನ ಸಂಪೂರ್ಣ ಸಹಕಾರವಿರುತ್ತದೆ. ಪ್ರಾದೇಶಿಕ ಆಯುಕ್ತರು ಚುನಾವಣಾ ವೇಳಾಪಟ್ಟಿ ನಿಗದಿಪಡಿಸಿ ಪ್ರಕ್ರಿಯೆ ನಡೆಸಲಿದ್ದಾರೆ ಎಂದು ತಿಳಿಸಿದರು.

ದಸರಾ ವಸ್ತುಪ್ರದರ್ಶನಕ್ಕೆ ಸೆ.26ರಂದೇ ಸಿಎಂ ಬೊಮ್ಮಾಯಿ ಚಾಲನೆ

● ೯೦ ದಿನಗಳ ಪ್ರದರ್ಶನಕ್ಕೆ ಭರದ ಸಿದ್ಧತೆ ● ಮರಳಲ್ಲಿ ಮೂಡಲಿದ್ದಾರೆ ಪ್ರಧಾನಿ ಮೋದಿ, ಪುನೀತ್ ರಾಜ್‌ಕುಮಾರ್, ಸ್ವಾತಂತ್ರ್ಯ ಹೋರಾಟಗಾರರು ● ಬಹು ನಿರೀಕ್ಷಿತ ಕಾವೇರಿ ಕಲಾ ಗ್ಯಾಲರಿ ಇದೇ ವೇಳೆ ಉದ್ಘಾಟನೆ



ಮೈಸೂರು, ಆ.24(ಎಂಟಿವೈ)– ಕೊರೊನಾ ಹಿನ್ನೆಲೆಯಲ್ಲಿ ಎರಡು ವರ್ಷಗಳಿಂದ ಸ್ಥಗಿತಗೊಂಡಿದ್ದ ದಸರಾ ವಸ್ತುಪ್ರದರ್ಶನವನ್ನು ಈ ಬಾರಿ ವಿಭಿನ್ನ ಹಾಗೂ ವಿಶಿಷ್ಟವಾಗಿ ಏರ್ಪಡಿಸಲು ಉದ್ದೇಶಿಸಲಾಗಿದ್ದು, ಪ್ರವಾಸಿಗರ ಸ್ನೇಹಿಯಾಗಿ ವಿವಿಧ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ತಿಳಿಸಿದ್ದಾರೆ.

ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದಲ್ಲಿರುವ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದಿನ ವಸ್ತುಪ್ರದರ್ಶನಗಳ ಕುರಿತಂತೆ ಸಾಹಿತಿಗಳು, ಗಣ್ಯರು, ಸಾರ್ವಜನಿಕರು, ಪ್ರವಾಸಿಗರ ಅಭಿಪ್ರಾಯವನ್ನು ಪರಿಗಣನೆಗೆ ತೆಗೆದುಕೊಂಡು ಪ್ರಸಕ್ತ ಸಾಲಿನ ದಸರಾ ವಸ್ತುಪ್ರದರ್ಶನವನ್ನು ವಿಶಿಷ್ಟ ಕಾರ್ಯಕ್ರಮದೊಂದಿಗೆ ಜನರಿಗೆ ಮನರಂಜನೆ, ಮಾಹಿತಿ ನೀಡುವ ಕೇಂದ್ರವಾಗಿ ಮಾರ್ಪಡಿಸಲು ಚಿಂತಿಸಲಾಗಿದೆ. ಸೆ.26ರಿಂದ ಡಿ.24ರವರೆಗೆ 90 ದಿನಗಳ ಕಾಲ ಈ ಸಾಲಿನ ದಸರಾ ವಸ್ತು ಪ್ರದರ್ಶನ ಜರುಗಲಿದೆ ಎಂದರು.

ನವರಾತ್ರಿ ಆರಂಭಕ್ಕೂ 15 ದಿನ ಮುನ್ನವೇ ದಸರಾ ವಸ್ತುಪ್ರದರ್ಶನ ಆರಂಭಿಸುವಂತೆ ಸರ್ಕಾರ ಸೂಚನೆ ನೀಡಿತ್ತು. ಆದರೆ, ಸಂಪ್ರದಾಯದಂತೆ ನವರಾತ್ರಿಯ ಆರಂಭದ ದಿನವೇ ವಸ್ತುಪ್ರದರ್ಶನಕ್ಕೆ ಚಾಲನೆ ನೀಡಲಾಗುತ್ತದೆ. ಹಾಗಾಗಿ ಸೆ.26ರಂದು ಮುಖ್ಯಮಂತ್ರಿಗಳೇ ವಸ್ತುಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ ವಿವಿಧ ಇಲಾಖೆಗಳ 48 ಮಳಿಗೆಗಳಿರಲಿವೆ.



ಪತ್ರಿಕಾಗೋಷ್ಠಿಯಲ್ಲಿ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಸಿಇಓ ರುದ್ರೇಶ್.

ಸೆ.20ಕ್ಕೆ ಎಲ್ಲಾ ಸಿದ್ಧತೆಗಳನ್ನೂ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ. ಅದಕ್ಕಾಗಿ ಈಗಾಗಲೇ ವಿವಿಧ ಇಲಾಖೆಗಳಿಗೆ ಪತ್ರ ಕೂಡ ಬರೆಯಲಾಗಿದೆ ಎಂದರು.

ಮರಳಿನ ಆಕೃತಿಗಳು: ವಸ್ತುಪ್ರದರ್ಶನದಲ್ಲಿ ಪವರ್ ಸ್ಟಾರ್ ಡಾ.ಪುನೀತ್ ರಾಜ್‌ಕುಮಾರ್ ಅವರ ಮೂರು, ಯೋಗದ ಭಂಗಿಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಸಾವರ್ಕರ್ ಸೇರಿದಂತೆ 4 ಮಂದಿ ಸ್ವಾತಂತ್ರ್ಯ ಹೋರಾಟಗಾರರ ಆಕೃತಿಯನ್ನು ಮರಳಿನಲ್ಲೇ ಮೈಸೂರಿನ ಹೆಸರಾಂತ ಮರಳು ಕಲಾವಿದೆ ಎಂ.ಎನ್.ಗೌರಿ ಅವರಿಂದ ರೂಪಿಸಿ, ಪ್ರದರ್ಶಿಸಲಾಗುತ್ತದೆ. ವಸ್ತುಪ್ರದರ್ಶನ ಆವರಣದ ಕಾವೇರಿ ಕಲಾ ಗ್ಯಾಲರಿಯೂ ಮುಂದಿನ ತಿಂಗಳ ಎರಡನೇ ವಾರದಲ್ಲಿ ಉದ್ಘಾಟನೆಗೊಂಡು, ಜನಸಾಮಾನ್ಯರ ವೀಕ್ಷಣೆಗೆ ಲಭ್ಯವಾಗಲಿದೆ. ಇದೇ ಮೊದಲ ಬಾರಿಗೆ ಯೋಗ 3ಡಿ ವಿಡಿಯೋ ಮ್ಯಾಪಿಂಗ್ ನಿರ್ಮಿಸಲಾಗುತ್ತಿದೆ ಎಂದು ಹೇಳಿದರು.



ಡಿಜಿಟಲ್ ಆ್ಯಪ್: ಸಾರ್ವಜನಿಕರಿಗೆ ವಸ್ತುಪ್ರದರ್ಶನದಲ್ಲಿ ಮಳಿಗೆಗಳ ಮಾಹಿತಿ ನೀಡುವ ಸಲುವಾಗಿ ಡಿಜಿಟಲ್ ಆ್ಯಪ್ ಸೌಲಭ್ಯ ಕಲ್ಪಿಸಲಾಗಿದೆ. ಟಿಕೆಟ್ ಕೌಂಟರ್ ಬಳಿ ಆ್ಯಪ್ ಅನ್ನು ಡೌನ್ಲೋಡ್ ಮಾಡಿಕೊಂಡು ವಸ್ತುಪ್ರದರ್ಶನದ ಸಂಪೂರ್ಣ ನಕ್ಷೆ ಹಾಗೂ ಮಾಹಿತಿಯನ್ನು ಸಾರ್ವಜನಿಕರಿಗೆ ತಿಳಿಸಲು ಕ್ರಮ ಕೈಗೊಳ್ಳಲಾಗಿದೆ. ಇದರಿಂದ ಯಾವ ಮಳಿಗೆ ಯಾವ ಕಡೆ ಇದೆ. ಅದರಲ್ಲೇನು ಮಾಹಿತಿ ಇದೆ ಎಂದು ಸುಲಭವಾಗಿ ತಿಳಿಯಬಹುದು. ಅರಣ್ಯ ಇಲಾಖೆ ಹಾಗೂ ಕೃಷಿ ಇಲಾಖೆ ವತಿಯಿಂದ ಸಸಿಗಳು ಹಾಗೂ ಕೃಷಿ ಪರಿಕರಗಳನ್ನು ವಸ್ತುಪ್ರದರ್ಶನ ಪ್ರಾಧಿಕಾರದ ಮಳಿಗೆಗಳಲ್ಲಿ ಸಬ್ಸಿಡಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುತ್ತಿದೆ ▶ 8ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಮಾಸ್ಟರ್ : ರಾಮನಿಗೂ ರಾವಣನಿಗೂ ಯುದ್ಧ ಏಕೆ ಆಯಿತು?
ವಿದ್ಯಾರ್ಥಿ: ನನಗೆ ಗೊತ್ತಿಲ್ಲ ಸಾರ್
ಮಾಸ್ಟರ್ : (ಗದರಿಸುತ್ತಾ) ಅದಕ್ಕೆ ಮಹಾಭಾರತ ಓದು ಅಂತ ಬಡ್ಕೊಳ್ಳೋದು!

ಮೈಸೂರು ಮಿತ್ರ

ಗುರುವಾರ, 25 ಆಗಸ್ಟ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಸಾಧ್ಯವಾದಷ್ಟೂ ಹೆಚ್ಚು ಹಣವನ್ನು ಸಂಪಾದಿಸು. ಸಾಧ್ಯವಾದಷ್ಟನ್ನು ಉಳಿಸು, ಸಾಧ್ಯವಾದಷ್ಟು ದಾನ ಮಾಡು. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಮಾತು ಬಂದಾಗ ಸೋತು ಹೋದವನೇ ಜಾಣ

ನಿಮ್ಮ ಪತ್ರಗಳು

ಹಳ್ಳ ಹಿಡಿದ ನಗರ ಪಾಲಿಕೆ ಕೆಲಸ



ಮಾನ್ಯರೆ,

ಈಗ್ಗೆ ಸುಮಾರು ಒಂದೂವರೆ ತಿಂಗಳ ಹಿಂದೆ ಮೈಸೂರಿನ ವಿಜಯನಗರ ರೈಲ್ವೆ ಬಡಾವಣೆಯ ರಸ್ತೆಗಳನ್ನು ಹಲವಾರು ಕಾಮಗಾರಿಗಳಿಗೆಂದು ಅಗೆದಿದ್ದು, ಇದರಿಂದ ಸಾರ್ವಜನಿಕರಿಗೆ ಉಪದ್ರವವಾಗುತ್ತಿದ್ದ ಮೇರೆಗೆ, ಪಾಲಿಕೆ ಈ ಗುಂಡಿಗಳನ್ನು ಮತ್ತಷ್ಟು ಅಗೆದು ಅವುಗಳಿಗೆ ದೊಡ್ಡ ಗಾತ್ರದ ಜಲ್ಲಿ ಕಲ್ಲುಗಳನ್ನು ಅಸಹ್ಯಕರವಾಗಿ ಹಾಗೂ ತಾಂತ್ರಿಕತೆಯೇ ಇಲ್ಲದ ರೀತಿ ತುಂಬಿ ಹೋಗಿತ್ತು. ಇದನ್ನು ನೋಡಿದ ಬಡಾವಣೆ ನಿವಾಸಿಗಳು ಹೇಗೋ ಈ ಹಳ್ಳಗಳು ತುಂಬಿದರೆ ಸರಿ ಎಂದು ಭಾವಿಸಿ ಇದಕ್ಕೆ ಡಾಂಬರು ಹಾಕುವುದನ್ನು ನಿರೀಕ್ಷಿಸುತ್ತಿದ್ದರು. ಆದರೆ, ನಂತರ ಸುರಿದ ಮಳೆಗೆ ಈ ಜಲ್ಲಿ ಕಲ್ಲುಗಳೆಲ್ಲವೂ ಗುಂಡಿಗಳಿಂದ ಎದ್ದು ವಾಹನಗಳು ಓಡಾಡುವುದಿರಲಿ, ನಡೆಯಲು ಆಗದ ಪರಿಸ್ಥಿತಿಗೆ ತಲುಪಿದೆ. ಬಹುಶಃ ಇದನ್ನು ನೋಡಿದರೆ, ಇದುವರೆಗೂ ಸಾರ್ವಜನಿಕರು ಕಮಿಷನ್‌ಗಾಗಿ ಗುತ್ತಿಗೆ ಎಂದು ಹೇಳುತ್ತಿದ್ದು, ನಿಜವಿರಬಹುದು ಎನಿಸುತ್ತದೆ. ಇನ್ನು ಮುಂದೆ ಇಂತಹ ತುಂಡು ಗುತ್ತಿಗೆಗಳು ಕೆಲಸ ನಡೆಯುದೆಯೂ ಬಿಲ್ ಪಾವತಿ ಯಾಗಿರಬಹುದೇ ಎಂಬ ಗುಮಾನಿ ಕಾಡುತ್ತಿದೆ. ಇದೀಗ ಜಲ್ಲಿ ಕಲ್ಲು ಮೇಲೆದ್ದು, ರಸ್ತೆಯ ಮೇಲೆಲ್ಲಾ ಹರಡಿದ್ದು, ನಿವಾಸಿಗಳು ಪರದಾಡುವಂತಾಗಿದೆ. ಜೊತೆಗೆ ಈಗ ದಪ್ಪ ಕಲ್ಲುಗಳೂ ದ್ವಿಚಕ್ರ ವಾಹನ ಸವಾರರಿಗೆ ತೊಡಕಾಗುತ್ತಿವೆ.

ಪಾಲಿಕೆ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸುವರೇ ಅಥವಾ ಮನವಿಯೂ ಹಳ್ಳ ಹಿಡಿಯುವುದೇ ಎಂದು ಕಾದು ನೋಡಬೇಕಿದೆ.

–ವಿಜಯ್ ಹೆಮ್ಮಿಗೆ, ಮೈಸೂರು.

ಮರೆಯಾದ ವೈದ್ಯರತ್ನ



ಮಾನ್ಯರೆ,

ಇತ್ತೀಚೆಗೆ ನಿಧನರಾದ ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಹೆಸರಾಂತ ತಜ್ಞ ವೈದ್ಯ ಡಾ. ಎಂ.ಎಸ್.ವಿಶ್ವೇಶ್ವರ ಅವರ ನಿಧನದ ಸುದ್ದಿ ಕೇಳಿ ಬಹಳ ದುಃಖವಾಯಿತು. ಆಸ್ಪತ್ರೆಗೆ ಬರುತ್ತಿದ್ದ ರೋಗಿಗಳಿಗೆ ತಮ್ಮ ಹಿತವಚನಗಳಿಂದ ಸಂತೈಸುತ್ತಿದ್ದ ರೀತಿ ಅನುಕರಣೀಯವಾಗಿತ್ತು. ಹಲವಾರು ಕ್ಯಾನ್ಸರ್ ರೋಗಿಗಳನ್ನು ಗುಣಪಡಿಸುತ್ತಿದ್ದ ಶ್ರೀಯುತರನ್ನು ಕ್ಯಾನ್ಸರ್ ಬಲಿ ಪಡೆದಿದ್ದು ವಿಧಿಯ ಆಟವೇ ಆಗಿದೆ. ಶ್ರೀಯುತರ ಆತ್ಮಕ್ಕೆ ತಾಯಿ ಚಾಮುಂಡೇಶ್ವರಿ ಚಿರಶಾಂತಿ ಕರುಣಿಸಲಿ.

–ಹಿತೈಷಿಗಳು ಹಾಗೂ ಮಿತ್ರರು, ಮೈಸೂರು.

10 ರೂ. ಮುಖಬೆಲೆಯ ನಾಣ್ಯದ ತಲೆನೋವು

ಮಾನ್ಯರೆ,

ದೇಶದಲ್ಲಿ 1000 ಮತ್ತು 500 ರೂಪಾಯಿ ನೋಟುಗಳ ಅಮಾನ್ಯೀಕರಣ ಸಾರ್ವಜನಿಕರಿಗೆ ಒಂದು ದೊಡ್ಡ ತಲೆನೋವಾಗಿ ಪರಿಣಮಿಸಿತ್ತು. ಅದು ಮುಗಿದ ಬಳಿಕವೇ ಮತ್ತೊಂದು ಹೊಸ ತಲೆನೋವು ಶುರುವಾಗಿದೆ. ಯಾವುದು ಅದು ಅಂತೀರಾ? ಅದೇ 10 ರೂಪಾಯಿ ನಾಣ್ಯ. ಈ 10 ರೂಪಾಯಿ ನಾಣ್ಯ ಚಾಲ್ತಿಯಲ್ಲಿದೆಯೇ ಇಲ್ಲವೇ ಎಂಬ ಪ್ರಶ್ನೆ ಸಾರ್ವಜನಿಕರಲ್ಲಿ ಕಾಡುತ್ತಿದೆ. ಆ ಕಾರಣಕ್ಕೆ ಜನರು ಅದನ್ನು ಅಂಗಡಿಗಳಲ್ಲಿ ಕೊಡುವುದು ಬ್ಯಾಂಕುಗಳಿಗೆ ನೀಡುವುದು ಈ ರೀತಿ ಮಾಡುತ್ತಿದ್ದಾರೆ. ಜನಸಾಮಾನ್ಯರಿಗೆ ಈ ಪ್ರಶ್ನೆಯನ್ನು ಕೇಳಿದರೆ ಯಾಕೆ 10 ರೂ ನಾಣ್ಯಗಳನ್ನು ಬಳಸುವುದಿಲ್ಲ ಎಂದರೆ ಬೇರೆ ಜನಗಳು ಅದನ್ನು ಬಳಸುವುದಿಲ್ಲ. ಬ್ಯಾಂಕಿನಲ್ಲಿ ಕೂಡ ತೆಗೆದುಕೊಳ್ಳುವುದಿಲ್ಲ. ಹಾಗಾಗಿ ಬಳಸುವುದಿಲ್ಲ ಎನ್ನುತ್ತಾರೆ. ಆದರೆ ಈ ನಾಣ್ಯ ಚಾಲ್ತಿಯಲ್ಲಿದೆ. ಇದರ ಬಗ್ಗೆ ತಿಳುವಳಿಕೆ ಇಲ್ಲ. ಇದನ್ನು ತಿಳಿಸುವ ಕೆಲಸವನ್ನು ತಿಳಿದಿರುವವರು ಮಾಡುತ್ತಿಲ್ಲ. ಬ್ಯಾಂಕುಗಳಲ್ಲೂ ಈ ಕೆಲಸ ಆಗುತ್ತಿಲ್ಲ. ಆದ್ದರಿಂದ ಈ ನಾಣ್ಯಗಳು ಕೆಲವು ಅಂಗಡಿಗಳ ಗಲ್ಲಾಪೆಟ್ಟಿಗೆಯಲ್ಲಿ ಭದ್ರವಾಗಿದೆ. ಆದರೇ ಅದು ಎಲ್ಲೆಡೆ ಚಾಲ್ತಿಯಲ್ಲಿರಬೇಕು. ಈ ಕೆಲಸವನ್ನು ಮಾಡುವುದು ಸರ್ಕಾರದ ಮತ್ತು ನಮ್ಮ ಆದ್ಯ ಕರ್ತವ್ಯವಾಗಿದೆ.

– ಸಾಗರ್ ಕೆ.ಎಸ್., ಮಹಾರಾಜ ಕಾಲೇಜು ಮೈಸೂರು

ಸ್ಮಾರ್ಟ್‌ಫೋನ್‌ಗಳ ಬಳಕೆಯಿಂದ ಸಂಬಂಧಗಳಲ್ಲಿ ದೊಡ್ಡ ಅಂತರ

ಮಾನ್ಯರೆ,

ಮಾನವನ ಬೆಳವಣಿಗೆಯಲ್ಲಿ ದೂರದಲ್ಲಿರುವ ಸಂಬಂಧಿಕರ ನಡುವೆ ಮಾತನಾಡಲು ಟೆಲಿಫೋನ್ ಕಂಡುಹಿಡಿಯಲಾಯಿತು. ತದನಂತರ ಸೆಲ್ಫೋನ್‌ಗಳು ಬಳಕೆಗೆ ಬಂದವು. ಮಾನವ ಬೆಳೆಯುತ್ತಾ ಟೆಕ್ನಾಲಜಿ ಕೂಡ ಬೆಳೆಯಿತು. ಸ್ಮಾರ್ಟ್‌ಫೋನ್‌ಗಳನ್ನು ಪರಿಚಯಿಸಿದರು. ಆದರೆ ಅದರ ಬಳಕೆಯಿಂದ ಸ್ಮಾರ್ಟ್‌ಫೋನ್ ಇಲ್ಲದೆ ಜೀವನವಿಲ್ಲ ಎಂದು ಬದುಕುತ್ತಿದ್ದಾರೆ. ಫೋನ್‌ಗಳ ಬಳಕೆಯಿಂದ ಅನೇಕ ಜನರು ಒಬ್ಬರಿಗೊಬ್ಬರು ಮಾತನಾಡುವುದಿಲ್ಲ. ಅವರ ನಡುವೆ ಇರುವ ಸಂತೋಷ, ದುಃಖ ಎಲ್ಲವನ್ನು ವಾಟ್ಸಾಪ್ ಮೂಲಕ ತಿಳಿಸುತ್ತಿದ್ದಾರೆ. ಯಾರೂ ಸಹ ಕುಳಿತುಕೊಂಡು ಮಾತಾಡುವುದಿಲ್ಲ. ಒಂದು ನಿಮಿಷ ಕೂಡ ಸ್ಮಾರ್ಟ್‌ಫೋನ್ ಇಲ್ಲದೆ ಕೂರುವುದಿಲ್ಲ.

ಸ್ಮಾರ್ಟ್ ಫೋನ್‌ಗಳನ್ನೂ ಅವಶ್ಯಕತೆ ಇದ್ದಾಗ ಮಾತ್ರ ಉಪಯೋಗಿಸಿಕೊಂಡು ಇದ್ದರೆ ಬಹಳ ಒಳ್ಳೆಯದು. ಅವಶ್ಯಕತೆ ಮೀರಿದರೆ ಅಮೃತಕೂಡ ವಿಷವಾಗುತ್ತದೆ. ಆದ್ದರಿಂದ ಸ್ಮಾರ್ಟ್ ಫೋನ್‌ಗಳ ಬಳಕೆ ಕಡಿಮೆ ಮಾಡಿ ಜನರೊಂದಿಗೆ ಸ್ನೇಹ ಹೆಚ್ಚಿಸಿಕೊಂಡು ಸಮಾಜದಲ್ಲಿ ಮಾನವರಾಗಿ ಬದುಕಬೇಕು ಮತ್ತು ಸ್ಮಾರ್ಟ್ ಫೋನ್‌ಗಳಲ್ಲಿ ಮುಳುಗುವುದನ್ನು ಬಿಡಬೇಕು.

–ಸಿಂಚನ ಎಲ್., ಮಹಾಜನ ಕಾಲೇಜು, ಮೈಸೂರು



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಮುಳಿಯ ತಿಮ್ಮಪ್ಪಯ್ಯನವರಿಗೊಂದು ನಮನ

ಕನ್ನಡದ ಸೌಭಾಗ್ಯಕೆಣೆಯಿಲ್ಲ ಜಗದೊಳಗೆ
ಕನ್ನಡವೆ ನಮ್ಮೆಲ್ಲರುಸಿರು ಹಸಿರು
ಕನ್ನಡದೊಳೆಂಥೆಂಥ ಮಹನೀಯರುದಿಸಿಹರು
ಚೆನ್ನುಡಿಯ ಬೆಳೆಸಿದರು ಜತನದಿಂದ ॥

ಕನ್ನಡವನ್ನು ಪ್ರೀತಿಸಿ, ಬೋಧಿಸಿ, ಉಳಿಸಿ ಬೆಳೆಸಿದ ಅನೇಕ ಮಹಾನುಭಾವರಲ್ಲಿ ಅಗ್ರಗಣ್ಯ ಪಂಕ್ತಿಗೆ ಸೇರಬೇಕಾದವರು ಪ್ರಾತಃಸ್ಮರಣೀಯರಾದ ನಾಡೋಜ ಮುಳಿಯ ತಿಮ್ಮಪ್ಪಯ್ಯನವರು. ನಾನು ಅವರ ಹೆಸರನ್ನು ಮಾತ್ರ ಕೇಳಿದ್ದೆ. ಅವರ ಬದುಕು–ಬರಹಗಳ ಬಗೆಗೆ ಏನನ್ನೂ ತಿಳಿದಿರಲಿಲ್ಲ. ಕೆಲವು ದಿನಗಳ ಹಿಂದೆ ಒಬ್ಬ ಹಿರಿಯರು ದೂರವಾಣಿ ಮೂಲಕ ನನ್ನನ್ನು ಸಂಪರ್ಕಿಸಿ 'ನಾನು ಮುಳಿಯ ತಿಮ್ಮಪ್ಪಯ್ಯನವರ ಮಗ ಮುಳಿಯ ರಾಘವಯ್ಯ. ನಿಮಗೆ ಕೆಲವು ಪುಸ್ತಕಗಳನ್ನು ಕೊಡಬೇಕಾಗಿತ್ತು. ಬರಬಹುದೇ' ಎಂದು ಕೇಳಿದರು. ಸರಸ್ವತಿ ಮನೆಗೆ ಬರುತ್ತಾಳೆ ಎಂದರೆ ಯಾರು ಬೇಡ ಎನ್ನುತ್ತಾರೆ? ಅವಶ್ಯವಾಗಿ ಬನ್ನಿ ಎಂದು ನಾನು ಹೇಳಿದೆ. ಅವರು ಬಂದಾಗ ಅವರ ಗಂಭೀರ ನಡಿಗೆ, ಸೌಜನ್ಯ, ಮೃದು ವಚನ ನನ್ನನ್ನು ಮೂಕನನ್ನಾಗಿ ಮಾಡಿದುವು. ಅವರು ನಾಲ್ಕು ಹೊತ್ತಗೆಗಳನ್ನು ನನಗೆ ಕೊಟ್ಟರು. ಅವುಗಳಲ್ಲಿ ಮೂರು–ಮುಳಿಯ ತಿಮ್ಮಪ್ಪಯ್ಯ, ಮುಳಿಯ ಮಹಾಬಲಭಟ್ಟ, ಯಕ್ಷಗಾನ ಸೂರ್ಯಕಾಂತಿ ಕಲ್ಯಾಣ ಎಂಬ ಮೂರು ಗ್ರಂಥಗಳ ಕರ್ತರು ಅಥವಾ ಸಂಪಾದಕರು ಮುಳಿಯ ರಾಘವಯ್ಯನವರೇ. ನಾಲ್ಕನೆಯ ಗ್ರಂಥ ವಚನ ಕೋಗಿಲೆ ಡಾ. ಅರುಣ್ ಕುಮಾರ್ ಎಸ್.ಆರ್. ಕನ್ಯಾಡಿ ಅವರಿಂದ ಸಂಪಾದಿತವಾದದ್ದು. ಯಕ್ಷಗಾನ ಸೂರ್ಯಕಾಂತಿ ಕಲ್ಯಾಣವು ನಾಡೋಜ ಮುಳಿಯ ತಿಮ್ಮಪ್ಪನವರಿಂದ ವಿರಚಿತ.

ಮುಳಿಯ ಎಂಬುದು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ವಿಟ್ಲ ಎಂಬ ಊರಿನಿಂದ ಸುಮಾರು ಹತ್ತು ಕಿ.ಮೀ. ದೂರದಲ್ಲಿ ಇರುವ ಚಿಕ್ಕ ಹಳ್ಳಿಯಂತೆ. ಪಂಡಿತ ಮುಳಿಯ ತಿಮ್ಮಪ್ಪಯ್ಯನವರು 1888ರಲ್ಲಿ ಹುಟ್ಟಿದ್ದು ಈ ಹಳ್ಳಿಯಲ್ಲಿ. ಅವರ ವಂಶದ ಪೂರ್ವಜರು ಶ್ರೀಮಂತರಾಗಿದ್ದರೂ ಅತಿಯಾದ ಔದಾರ್ಯದಿಂದ, ಪರಿಚಿತರೇ ಮಾಡಿದ ವಿಶ್ವಾಸಘಾತದಿಂದ ತಿಮ್ಮಪ್ಪಯ್ಯನವರ ತಂದೆ ಕೇಶವಯ್ಯನವರು ಪರಾಶ್ರಯವನ್ನು ಅವಲಂಬಿಸುವ ಸ್ಥಿತಿ ಒದಗಿತ್ತು. ತಿಮ್ಮಪ್ಪಯ್ಯನವರಿಗೆ ಜ್ಞಾನದ ಆಕಾಂಕ್ಷೆ ಹುಟ್ಟಿನಿಂದಲೇ ಬಂದಿದ್ದರೂ ಸಾಂಪ್ರದಾಯಿಕ ಶಿಕ್ಷಣ ನಾಲ್ಕನೆಯ ತರಗತಿಯಲ್ಲಿ ತೇರ್ಗಡೆಯಾಗುವವರೆಗೆ ಮಾತ್ರ. ಆಮೇಲೆ ಕಲ್ಲಜೆ ಕೃಷ್ಣಶಾಸ್ತ್ರಿಗಳಲ್ಲಿ ಸಂಸ್ಕೃತ ವಿದ್ಯಾಭ್ಯಾಸ. 1906 ರಲ್ಲಿ ಕಾಲ್ನಡಿಗೆಯಲ್ಲೇ ಕೇರಳದ ತಿರುವಾಂಕೂರಿಗೆ ಹೋಗಿ ಹೆಚ್ಚು ಸಂಸ್ಕೃತವನ್ನು ಕಲಿತು ಅನಂತರ ಮೈಸೂರಿಗೆ ಬಂದ ತಿಮ್ಮಪ್ಪಯ್ಯ ಮೈಸೂರಿಗೆ ಬಂದು ಕನ್ನಡ–ಸಂಸ್ಕೃತ–ಸಂಗೀತಗಳನ್ನು ಅಭ್ಯಸಿಸಿದರು. ಅಲ್ಲೇ ತಮಗೆ ಅತ್ಯಂತ ಪ್ರಿಯವಾಗಿದ್ದ ಗಮಕ ಕಲೆಯನ್ನು ಮೈಗೂಡಿಸಿಕೊಂಡರು. 1910 ರಲ್ಲಿ ಸ್ವಗ್ರಾಮಕ್ಕೆ ಮರಳಿ ಗಮಕ ಕಲೆಯಿಂದ ಸಹೃದಯರನ್ನು ಆಕರ್ಷಿಸಿ 1911ರಲ್ಲಿ ಕೆನರಾ ಹೈಸ್ಕೂಲಿನಲ್ಲಿ ಕನ್ನಡ ಉಪಾಧ್ಯಾಯರಾದರು. ಅವರ ಪ್ರೀತಿಯ ಕವಿ ಮುದ್ದಣ. ಅವನ ರಾಮಾಶ್ವಮೇಧ ಮತ್ತು ಅದ್ಭುತ ರಾಮಾಯಣಗಳಿಂದ ಪ್ರಭಾವಿತರಾಗಿ ಸಾಹಿತ್ಯ ರಚನೆಯನ್ನು ಆರಂಭಿಸಿದರು. **ಅಜೋದಯ** ಎಂಬ ವಾರ್ಧಕ ಷಟ್ಪದಿಯ ಕಾವ್ಯವನ್ನು ತಿಮ್ಮಪ್ಪಯ್ಯನವರು ಆಗಲೇ ರಚಿಸಿದ್ದರಂತೆ. 1913 ರಲ್ಲಿ **ಚಂದ್ರಾವಲೀ ವಿಲಾಸ** ಎಂಬ ಗದ್ಯ ಕಾವ್ಯ ಅವರ ಲೇಖನಿಯಿಂದ ಮೂಡಿಬಂದಿತು. ಅಲ್ಲದೆ **'ಸೂರ್ಯಕಾಂತಿ ಕಲ್ಯಾಣ'** ಎಂಬ ಯಕ್ಷಗಾನವನ್ನು ಅವರು ಮೊದಲೇ ರಚಿಸಿದ್ದರು. ಇದರಲ್ಲಿ ಭಾಮಿನೀಷಟ್ಪದಿಯಲ್ಲಿ ರಚಿತವಾದ ಪದ್ಯಗಳೂ ನಾನಾ ರಾಗಗಳಲ್ಲಿ ಹಾಡಬಹುದಾದ ಹಾಡುಗಳೂ ಇವೆ. 1918 ರಿಂದ 1948 ರವರೆಗೆ ಮೂವತ್ತು ವರ್ಷ ತಿಮ್ಮಪ್ಪಯ್ಯನವರು ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ಕನ್ನಡವನ್ನು ಬೋಧಿಸುತ್ತಿದ್ದರು. ಅವರ ಸಾಹಿತ್ಯ ಕೃಷಿ ಅವ್ಯಾಹತವಾಗಿ ಸಾಗುತ್ತಿತ್ತು. ಅವರ ಪಾಂಡಿತ್ಯವನ್ನು ಪ್ರತಿಭೆಯನ್ನೂ ನಾಡಿನ ಜನರು ಗುರುತಿಸಿದರು. 1931 ರಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕಾರವಾರದಲ್ಲಿ ನಡೆದಾಗ ಅದರ ಅಧ್ಯಕ್ಷ ಸ್ಥಾನವನ್ನು ತಿಮ್ಮಪ್ಪಯ್ಯನವರು ಸರ್ವಸಮ್ಮತಿಯಿಂದ ಅಲಂಕರಿಸಿದರು. ಅವರು ಮಾಡಿದ ಅಧ್ಯಕ್ಷ ಭಾಷಣವು ಸಾಮಾನ್ಯ ಜನರಿಂದಲೂ ವಿದ್ವಾಂಸರಿಂದಲೂ ಪ್ರಶಂಸಿತವಾಯಿತು.

ತಿಮ್ಮಪ್ಪಯ್ಯನವರ ಮೇರುಕೃತಿ **ನಾಡೋಜ ಪಂಪ**. ಇದು 1934 ರಲ್ಲಿ ಪ್ರಕಟಗೊಂಡಿತು. **ಆದಿಪುರಾಣ ಸಂಗ್ರಹ** ಮತ್ತು **ಸಮಸ್ತ ಭಾರತಸಾರ** ಕನ್ನಡದ ಆದಿಕವಿ ಪಂಪನ ಎರಡು ಮಹಾಕೃತಿಗಳ ಗದ್ಯಾನುವಾದ ರೂಪದಲ್ಲಿ ಬೆಳಕಿಗೆ ಬಂದುವು. 1941 ರಲ್ಲಿ ಲಕ್ಷ್ಮೇಶ್ವರದಲ್ಲಿ ನಡೆದ 'ಆದಿಕವಿ ಪಂಪನ ಸಹಸ್ರ ಸಾಂವತ್ಸರಿಕೋತ್ಸವದ ಅಧ್ಯಕ್ಷ ಸ್ಥಾನವನ್ನು ತಿಮ್ಮಪ್ಪಯ್ಯನವರು ಅಲಂಕರಿಸಿದರು. ನೂರೊಂದು ಎತ್ತುಗಳನ್ನು ಹೂಡಿದ ರಥದಲ್ಲಿ ನಡೆದ ಅವರ ಮೆರವಣಿಗೆ ಹಿಂದೆ ಇಂತ ಉತ್ಸವ ನಡೆದಿಲ್ಲ, ಮುಂದೆ ನಡೆಯುವುದೋ ಇಲ್ಲವೋ ತಿಳಿಯದು ಎಂಬ ಉದ್ಗಾರಗಳಿಗೆ ಕಾರಣವಾಯಿತಂತೆ. ಅವರು ರಚಿಸಿದ ನವನೀತರಾಮಾಯಣದ ಪ್ರಥಮ ಭಾಗವನ್ನು ತಮ್ಮ ತಾಯಿ ಮೂಕಾಂಬಿಕೆ ಅಮ್ಮನವರಿಗೆ ಅರ್ಪಿಸಿದ್ದಾರೆ. ಅರ್ಪಣೆಯ ಪದ್ಯ ಇಂತಿದೆ–

ಪಡಿಗಾಣದಿಂಚರದ ಗಮಕದೊಡ್ಡವಣೆಯಿಂ
ಪಾಡಿ ರಾಮಾಯಣವನೂಡಿದೆ ಮಗಂಗೆ ನಿ
ನ್ನಡಿಗೆ ಪೊಸದೊಂದು ರಾಮಾಯಣಮಂ ಬರೆದು
ಕಾಣಿಕೆಯನೀವೆನೆಂದು ಪೂಣ್ದದನದೇಂ ಮರೆದಪನೆ?

ತಿಮ್ಮಪ್ಪಯ್ಯನವರು ಬರೆದ ಸಂಶೋಧನಾ ಗ್ರಂಥ ಪಾರ್ತಿಸುಬ್ಬ. ಕರ್ನಾಟಕ ಸಂಗೀತಕ್ಕೆ ಪುರಂದರದಾಸರು ಹೇಗೆ ಪಿತಾಮಹ ಎನಿಸಿದ್ದಾರೋ ಹಾಗೆ ಯಕ್ಷಗಾನಕ್ಕೆ ಪಾರ್ತಿಸುಬ್ಬ. ಆ ಮಹಾಕಲಾವಿದನ ಜೀವನ ವೃತ್ತಾಂತ, ಸಾಧನೆ, ಸಿದ್ಧಿ ಇವುಗಳನ್ನೆಲ್ಲ ಹೃದಯಂಗಮವಾಗಿ ನೀಡುವ ಕೃತಿಯನ್ನು ಕೊಟ್ಟು ಕನ್ನಡ ಕಲಾಲೋಕಕ್ಕೆ ಅನುಪಮ ಕಾಣಿಕೆಯನ್ನು ಇತ್ತಿದ್ದಾರೆ ತಿಮ್ಮಪ್ಪಯ್ಯನವರು.

1947 ರಲ್ಲಿ ಅವರ ಗ್ರಂಥರತ್ನ 'ಕವಿರಾಜ ಮಾರ್ಗವಿವೇಕ'ದ ಒಂದನೆಯ ಭಾಗ ಪ್ರಕಟಗೊಂಡಿತು. ಎರಡನೆಯ ಭಾಗ ಅಚ್ಚಾದುದನ್ನು ಅವರು ಕಾಣಲಾಗಲಿಲ್ಲ. 1950 ಜನವರಿ 19 ರಂದು ಅವರನ್ನು ವಿಧಿ ಕರೆದೊಯ್ದು. ಅವರ ಹಿರಿಯ ಪುತ್ರ ಮುಳಿಯ ಕೇಶವ ಭಟ್ಟರು ಸಮಗ್ರ ಕೃತಿಯನ್ನು 1973ರಲ್ಲಿ ಪ್ರಕಟಿಸಿದರು.

ತಿಮ್ಮಪ್ಪಯ್ಯನವರು **ಪಶ್ಚಾತ್ತಾಪ** ಮತ್ತು **ವೀರ ಬಂಕೆಯ** ಎಂಬ ಎರಡು ಕಾದಂಬರಿಗಳನ್ನು, ಹಲವು ಸಂಶೋಧನಾ ಲೇಖನಗಳನ್ನು ಕವಿತೆಗಳನ್ನೂ ಗದ್ಯ ಗ್ರಂಥಗಳನ್ನೂ ಬರೆದಿದ್ದಾರೆ. ಕನ್ನಡಮ್ಮನ ಖಜಾನೆಗೆ ಅವರು ಕೊಟ್ಟಿರುವ ಕೊಡುಗೆ ಅಮೂಲ್ಯ. ಅವರ ಪೂರ್ಣ ಪರಿಚಯವನ್ನು ಮಾಡಿಸುವ 'ನಾಡೋಜ ಮುಳಿಯ ತಿಮ್ಮಪ್ಪಯ್ಯ' ಎಂಬ ಪುಸ್ತಕವನ್ನು ಕಾಂತಾವರ ಕನ್ನಡ ಸಂಘ ಪ್ರಕಟಿಸಿರುವ ಸಂಗತಿ ಕನ್ನಡಿಗರಿಗೆಲ್ಲ ಹರ್ಷವನ್ನು ತಂದಿದೆ.

'ಮುಳಿಯ ತಿಮ್ಮಪ್ಪಯ್ಯ' ಎಂಬ ಕೃತಿಯನ್ನು ರಚಿಸಿದ ಮುಳಿಯ ರಾಘವಯ್ಯನವರು ವಿಜ್ಞಾನಿಗಳು. ಸಿಂಹದ ಹೊಟ್ಟೆಯಲ್ಲಿ ಸಿಂಹವೇ ಹುಟ್ಟುತ್ತದೆ ಎಂಬ ಗಾದೆಗೆ ಇವರು ಸಾಕ್ಷಿ. ಕೇಂದ್ರ ಸರ್ಕಾರದಲ್ಲಿ ನಲವತ್ತು ವರ್ಷಗಳ ಸೇವೆ. ಈಗ ಹಲವು ವಿಶ್ವವಿದ್ಯಾನಿಲಯಗಳ ವಿಜ್ಞಾನ ವಿಭಾಗಗಳಲ್ಲಿ ಜ್ಞಾನದಾನ, ಸಾರ್ಥಕ ಬದುಕಿಗೆ ದೃಷ್ಟಾಂತ. ವಿಜ್ಞಾನಿಗಳಾದರೂ ಸಾಹಿತ್ಯ, ಸಂಗೀತ, ಕಲೆಗಳಲ್ಲಿ ಆಸಕ್ತಿ. ಇಂಥವರ ದರ್ಶನವೇ ನನ್ನಂತಹ ಸಾಮಾನ್ಯನಿಗೆ ಅನುಗ್ರಹ ಸಮಾನ. ಅವರು ಸೂರ್ಯಕಾಂತಿ ಕಲ್ಯಾಣದ ಕಾಣ್ಕೆಯಲ್ಲಿ ಅವರ ತಾಯಿಗೆ ಅರ್ಪಿಸಿರುವ ಎರಡು ಪದ್ಯಪುಷ್ಪಗಳೇ ಸಾಕು, ಅವರ ಮನದ ಉನ್ನತಿಯನ್ನರಿಯಲು–

ಹೆತ್ತಬ್ಬೆ ದೇವಕಿಗೆ
ಮರಿಸಿ ಕವಿಯನು ತಾಯೆ ನಿನ್ನ ನೀ ಮರೆತೆ
ಪುರವೆ ನಿನ್ನಯ ವಿಶ್ವವೆಂದು ನೀನರಿತೆ
ಪರರ ತನುಜರನೆಲ್ಲ ತನ್ನವರೆ ಎಂದು
ಪೊರೆದೆ ಮಕ್ಕಳನೆಲ್ಲ ಭರದಿ ನೀನಂದು.
ಅರಿವೆನ್ನ ಮನದೊಳಗೆ ಮೂಡಲಿಕೆ ಮುನ್ನ
ಗರಿಗೆದರಿ ಲೋಕದೊಳು ವಿಹರಿಸುವ ಮುನ್ನ
ಮರಳದೂರಿಗೆ ತೆರಳ್ದೆ ತೊರೆದು ನೀನೆನ್ನ
ಮರೆವೆನೆಂದರೆ ತಾಯೆ ಮರೆಯಲಾಪೆನೆ ನಿನ್ನ

– ಮುಳಿಯ ರಾಘವಯ್ಯ

ಇಂತಹ ಮಕ್ಕಳನ್ನು ಹಡೆದ ತಾಯಿ ಮತ್ತು ಇವರಿಗೆ ಜನ್ಮಕೊಟ್ಟ ತಂದೆ ಧನ್ಯರು.

ಎಸ್‌ಪಿವಿಜಿಎಂಸಿ ಟ್ರಸ್ಟ್‌ನಿಂದ ಆ.31ರಿಂದ ಸೆ.11ರವರೆಗೆ ಮೈಸೂರು ವಿ.ವಿ.ಮೊಹಲ್ಲಾದ 8ನೇ ಕ್ರಾಸ್‌ನಲ್ಲಿ ಪಾರಂಪರಿಕ ಸಂಗೀತೋತ್ಸವ

ಮೈಸೂರು, ಆ.24–ಮೈಸೂರಿನ ವಿ.ವಿ.ಮೊಹಲ್ಲಾದ ಪ್ರತಿಷ್ಠಿತ ಎಸ್‌ಪಿವಿಜಿಎಂಸಿ ಟ್ರಸ್ಟ್ ವತಿಯಿಂದ 61 ವರ್ಷಗಳಿಂದ ಗಣೇಶ ಉತ್ಸವದ ಸಂದರ್ಭದಲ್ಲಿ ಸಂಗೀತ ಕಛೇರಿಗಳನ್ನು ಏರ್ಪಡಿಸುತ್ತಾ ಬರಲಾಗುತ್ತಿದೆ.



ಅದರಂತೆ ಈ ಬಾರಿಯೂ 61ನೇ ಪಾರಂಪರಿಕ ಸಂಗೀತೋತ್ಸವ ಕಾರ್ಯಕ್ರಮವನ್ನು ಆ.31ರಿಂದ ಸೆ.11ರವರೆಗೆ ವಿ.ವಿ.ಮೊಹಲ್ಲಾದ 8ನೇ ಕ್ರಾಸ್‌ನಲ್ಲಿ ಏರ್ಪಡಿಸಲಾಗಿದೆ.

ಆ.31ರ ಬುಧವಾರ ಸಂಜೆ 6.45ಕ್ಕೆ



ವಿದ್ವಾನ್ ರಂಗಸ್ವಾಮಿ ಅವರಿಂದ ನಾಗಸ್ವರ ವಾದನ ಏರ್ಪಡಿಸಿದ್ದು, ಪಕ್ಕವಾದ್ಯದಲ್ಲಿ ವಿದ್ವಾನ್ ಕೇಶವ ಮೋಹನ್–ವಯೋಲಿನ್, ವಿದ್ವಾನ್ ಆರ್.ನಾಗೇಶ್–ತವಿಲ್ ಮತ್ತು ವಿದ್ವಾನ್ ಸಾಯಿ ಶಿವು–ಮೃದಂಗ ಸಹಕಾರ ನೀಡಲಿದ್ದಾರೆ.

ಸೆ.1ರ ಗುರುವಾರ ಸಂಜೆ 6 ಗಂಟೆಗೆ

ಪಾರಂಪರಿಕ ಸಂಗೀತೋತ್ಸವದ ಉದ್ಘಾಟನಾ ಸಮಾರಂಭ ಏರ್ಪಡಿಸಿದ್ದು, ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿಯ ದಿ ಪ್ರಿಂಟರ್ಸ್ (ಮೈಸೂರು) ನಿರ್ದೇಶಕ ಶಾಂತಕುಮಾರ್ ಕಾರ್ಯಕ್ರಮ ಉದ್ಘಾಟಿಸುವರು. ಎಸ್‌ಪಿವಿಜಿಎಂಸಿ ಟ್ರಸ್ಟ್ ಅಧ್ಯಕ್ಷರಾದ ಜಗನ್ನಾಥ ಶೆಣೈ ಅಧ್ಯಕ್ಷತೆ ವಹಿಸುವರು. ಮಾಜಿ ಶಾಸಕ ವಾಸು ಉಪಸ್ಥಿತರಿರುವರು. ಇದೇ ವೇಳೆ ವಾಣಿಜ್ಯ ತೆರಿಗೆ ಉಪ ಆಯುಕ್ತ ರಮೇಶ್ ನರಸಯ್ಯ ಅವರನ್ನು ಸನ್ಮಾನಿಸಲಾಗುವುದು.

ಅಂದು ಸಂಜೆ 6.45ಕ್ಕೆ



ವಿದ್ವಾನ್ ಟಿ.ಎಂ.ಕೃಷ್ಣ ಅವರಿಂದ ಗಾಯನವಿದೆ. ವಿದುಷಿ ಅಕ್ಕರೈ ಶುಭಲಕ್ಷ್ಮಿ–ವಯೋಲಿನ್, ವಿದ್ವಾನ್ ಕೆ.ಯು.ಜಯಚಂದ್ರರಾವ್–ಮೃದಂಗ ಮತ್ತು ವಿದ್ವಾನ್ ವಾಳೈಪಲ್ಲಿ ಕೃಷ್ಣಕುಮಾರ್–ಘಟಂನಲ್ಲಿ ಸಾಥ್ ನೀಡಲಿದ್ದಾರೆ.

ಸೆ.2ರ ಶುಕ್ರವಾರ ಸಂಜೆ 5.30ರಿಂದ



ಭೀಮಸೇನ ಪ್ರತಿಜ್ಞೆ ಕುರಿತು ವಿದ್ವಾನ್ ಗಣೇಶ ಉಡುಪ, ಜಿ.ದಕ್ಷಿಣಾಮೂರ್ತಿ ಅವರಿಂದ ಕಾವ್ಯವಾಚನವಿದ್ದು, ಸಂಜೆ 6.45ಕ್ಕೆ ವಿದುಷಿಯರಾದ ಅಕ್ಕರೈ ಸಹೋದರಿಯರಿಂದ ದ್ವಂದ್ವ ಗಾಯನವಿದೆ. ವಿದ್ವಾನ್ ವಿಠ್ಠಲ ರಂಗನ್ –ವಯೋಲಿನ್, ವಿದ್ವಾನ್ ಕೆ.ಯು. ಜಯಚಂದ್ರರಾವ್–ಮೃದಂಗ ಮತ್ತು ವಿದ್ವಾನ್ ವಾಳೈಪಲ್ಲಿ ಕೃಷ್ಣಕುಮಾರ್–ಘಟಂ ಸಹಕಾರವಿದೆ.

ಸೆ.3ರ ಶನಿವಾರ ಸಂಜೆ 5.30ರಿಂದ



ದುರ್ಯೋಧನ ವಿಲಾಪ ಕುರಿತು ವಿದುಷಿ ಅನ್ನಪೂರ್ಣ ನಾಗೇಂದ್ರ, ಜಿ.ದಕ್ಷಿಣಾಮೂರ್ತಿ ಅವರಿಂದ ಕಾವ್ಯವಾಚನ ನಡೆಯಲಿದ್ದು, ಸಂಜೆ 6.45ಕ್ಕೆ ವಿದ್ವಾನ್ ಮಲ್ಲಾಡಿ ಸಹೋದರರಿಂದ ದ್ವಂದ್ವ ಗಾಯನ ಏರ್ಪಡಿಸಲಾಗಿದೆ. ವಿದ್ವಾನ್ ಎಂಬಾರ್ ಕಣ್ಣನ್–ವಯೋಲಿನ್, ವಿದ್ವಾನ್ ಅರ್ಜುನ್ ಕುಮಾರ್–ಮೃದಂಗ ಮತ್ತು ವಿದ್ವಾನ್ ಜಿ.ಎಸ್. ರಾಮಾನುಜನ್–ಘಟಂ ಸಹಕಾರ ನೀಡಲಿದ್ದಾರೆ.

ಸೆ.4ರ ಭಾನುವಾರ ಸಂಜೆ 5.30ರಿಂದ



ಅರ್ಧನಾರೀಶ್ವರ ಲೀಲೆ ಕುರಿತು ವಿದ್ವಾನ್ ಖಾಸೀಂ ಮಲ್ಲಿಗೆಮಡುವು, ಮೊರಬದ ಮಲ್ಲಿಕಾರ್ಜುನ ಅವರಿಂದ ಕಾವ್ಯವಾಚನ. ಸಂಜೆ 6.45ಕ್ಕೆ ವಿದ್ವಾನ್ ಅನಿಲ್ ಶ್ರೀನಿವಾಸನ್ ಪಿಯಾನೋ ನುಡಿಸಲಿದ್ದಾರೆ. ಪಂಡಿತ್ ಪ್ರವೀಣ್ ಗೋಡ್ಖಿಂಡಿ–ಬಾನ್ಸುರಿ, ವಿದ್ವಾನ್ ಅನಂತ ಆರ್. ಕೃಷ್ಣನ್–ಮೃದಂಗದಲ್ಲಿ ಸಾಥ್ ನೀಡಲಿದ್ದಾರೆ.

ಸೆ.5ರ ಸೋಮವಾರ ಸಂಜೆ 5.30



ಭಿಕ್ಷಾಟನ ಲೀಲೆ ಕುರಿತು ವಿದುಷಿ ಪದ್ಮಲತಾ ನಾಗೇಶ್, ಮೊರಬದ ಮಲ್ಲಿಕಾರ್ಜುನ ಅವರಿಂದ ಕಾವ್ಯವಾಚನ. ಸಂಜೆ 6.45ಕ್ಕೆ ವಿದುಷಿ ಜಯಂತಿ ಕುಮರೇಶ್ ಅವರಿಂದ ವೀಣಾವಾದನವಿದೆ. ವಿದ್ವಾನ್ ಕುಮರೇಶ್–ವಯೋಲಿನ್, ವಿದ್ವಾನ್ ಅನಂತ ಆರ್. ಕೃಷ್ಣನ್–ಮೃದಂಗ ಮತ್ತು ವಿದ್ವಾನ್ ಗಿರಿಧರ ಉಡುಪ– ಘಟಂ ಸಹಕಾರ ನೀಡಲಿದ್ದಾರೆ.

ಸೆ.6ರ ಮಂಗಳವಾರ ಸಂಜೆ 5.30



ಕಂದರ್ಪ ಹರನಿಂದ ಬೆಂದುದು ಕುರಿತು ಕು. ಧನ್ಯಾ, ಶ್ರೀನಿವಾಸ ಫಣಿ ಅವರಿಂದ ಕಾವ್ಯವಾಚನವಿದ್ದು, ಸಂಜೆ 6.45ಕ್ಕೆ ವಿದ್ವಾನ್ ಅಭಿಷೇಕ್ ರಘುರಾಂ ಅವರಿಂದ ಗಾಯನವಿದೆ. ವಿದ್ವಾನ್ ಎಚ್.ಎನ್. ಭಾಸ್ಕರ್–ವಯೋಲಿನ್, ವಿದ್ವಾನ್ ಮನ್ನಾರ್‌ಗುಡಿ ವಾಸುದೇವನ್–ತವಿಲ್ ಮತ್ತು ವಿದ್ವಾನ್ ಅನಂತ ಆರ್. ಕೃಷ್ಣನ್–ಮೃದಂಗ ಸಾಥ್ ನೀಡಲಿದ್ದಾರೆ.

ಸೆ.7ರ ಬುಧವಾರ ಸಂಜೆ 5.30ರಿಂದ




ಶಂಬರಾಸುರನ ವಧೆ ಕುರಿತು ವಿದುಷಿ ಭಾಗ್ಯಲಕ್ಷ್ಮಿ, ಶ್ರೀನಿವಾಸ ಫಣಿ ಅವರಿಂದ ಕಾವ್ಯವಾಚನವಿದ್ದು, ವಿದುಷಿ ಭಾರ್ಗವಿ ವೆಂಕಟರಾಂ ಅವರಿಂದ ಗಾಯನವಿದೆ. ವಿದ್ವಾನ್ ಎಚ್.ಕೆ. ವೆಂಕಟರಾಂ–ವಯೋಲಿನ್, ವಿದ್ವಾನ್ ಕೆ.ವಿ. ಪ್ರಸಾದ್–ಮೃದಂಗ ಮತ್ತು ವಿದ್ವಾನ್ ಜಿ.ಎಸ್. ರಾಮಾನುಜನ್ – ಘಟಂ ಸಹಕಾರ ನೀಡಲಿದ್ದಾರೆ.

ಸೆ.8ರ ಗುರುವಾರ ಸಂಜೆ 5.30ರಿಂದ



ಅರ್ಜುನನ ತಪಸ್ಸು ಕುರಿತು ವಿದುಷಿ ಶ್ಯಾಮಲಾ ಪ್ರಕಾಶ್, ಶ್ರೀಮತಿ ಎಲ್.ಶೋಭಾ ಆನಂದ್ ಅವರಿಂದ ಕಾವ್ಯವಾಚನ ನಡೆಯಲಿದೆ. ಸಂಜೆ 6.45ರಿಂದ ವಿದುಷಿ ವಾರಿಜಾಶ್ರೀ ವೇಣುಗೋಪಾಲ್ ಅವರಿಂದ ಗಾಯನವಿದ್ದು, ವಿದ್ವಾನ್ ಮತ್ತೂರು ಶ್ರೀನಿಧಿ–ವಯೋಲಿನ್, ವಿದ್ವಾನ್ ಎ.ರಾಧೇಶ್–ಮೃದಂಗ ಮತ್ತು ವಿದ್ವಾನ್ ಶಮಿತ್‌ಗೌಡ–ಘಟಂ ಸಾಥ್ ನೀಡಲಿದ್ದಾರೆ.

ಸೆ.9ರ ಶುಕ್ರವಾರ ಸಂಜೆ 5.30ರಿಂದ



ಕಶ್ಯಪ್, ಶ್ರೀಮತಿ ಎಲ್.ಶೋಭಾ ಆನಂದ್ ಅವರಿಂದ ಕಾವ್ಯವಾಚನ ನಡೆಯಲಿದೆ. ಸಂಜೆ 6.45ಕ್ಕೆ ವಿದ್ವಾನ್ ಲಾಲ್‌ಗುಡಿ ಜಿಜೆಆರ್ ಕೃಷ್ಣನ್ ಅವರಿಂದ ವಯೋಲಿನ್ ವಾದನವಿದೆ. ವಯೋಲಿನ್‌ನಲ್ಲಿ ವಿದ್ವಾನ್ ವಿಠ್ಠಲ್ ರಾಮಮೂರ್ತಿ, ಮೃದಂಗದಲ್ಲಿ ವಿದ್ವಾನ್ ತಿರುವಾರೂರ್ ಭಕ್ತವತ್ಸಲಂ ಮತ್ತು ಖಂಜಿರಾದಲ್ಲಿ ವಿದ್ವಾನ್ ಭಾರ್ಗವ ಹಾಲಂಬಿ ಸಹಕಾರ ನೀಡಲಿದ್ದಾರೆ.

ಸೆ.10ರ ಶನಿವಾರ ಸಂಜೆ 5.30ರಿಂದ



ಭೀಷ್ಮ ಸೇನಾಧಿಪತ್ಯ ಕುರಿತು ವಿದುಷಿ ಶುಭಾ ರಾಘವೇಂದ್ರ, ಡಾ. ಜ್ಯೋತಿ ಶಂಕರ್ ಅವರಿಂದ ಕಾವ್ಯವಾಚನ ಏರ್ಪಡಿಸಲಾಗಿದೆ. ಸಂಜೆ 6.45 ರಿಂದ ವಿದ್ವಾನ್ ಸಿಕ್ಕಿಲ್ ಆರ್. ಗುರುಚರಣ್ ಅವರ ಗಾಯನವಿದೆ. ವಯೋಲಿನ್‌ನಲ್ಲಿ ವಿದ್ವಾನ್ ಕಾರ್ತಿಕ್ ನಾಗರಾಜ್, ಮೃದಂಗದಲ್ಲಿ ವಿದ್ವಾನ್ ಉಮಯಾಳಪುರಂ ಕೆ. ಶಿವರಾಮನ್ ಮತ್ತು ಘಟಂ ಮೂಲಕ ವಿದ್ವಾನ್ ಕಾರ್ತಿಕ್ ಸಾಥ್ ನೀಡಲಿದ್ದಾರೆ.

ಸೆ.11ರ ಭಾನುವಾರ ಬೆಳಗ್ಗೆ 8ಗಂಟೆಗೆ





ವೇದ ವಿದ್ವಾಂಸರಾದ ಚಳ್ಳಕೆರೆ ಸಹೋದರರಿಂದ ಧನ್ವಂತ್ರಿ ಹೋಮ ನೆರವೇರಲಿದೆ. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ ನೆರವೇರಲಿದೆ. ಸಂಜೆ 5.30 ರಿಂದ 6.30 ರವರೆಗೆ ದುರ್ಯೋಧನನ ವಧೆ ಕುರಿತು ವಿದುಷಿ ಸತ್ಯಲಕ್ಷ್ಮೀ ಅನಂತಪದ್ಮನಾಭ, ಡಾ. ಜ್ಯೋತಿಶಂಕರ್ ಅವರಿಂದ ಕಾವ್ಯವಾಚನವಿದೆ. ಸಂಜೆ 6.45ಕ್ಕೆ ವಿದ್ವಾನ್ ಸಂದೀಪ್ ನಾರಾಯಣ್ ಅವರಿಂದ ಗಾಯನವಿದೆ. ವಯೋಲಿನ್‌ನಲ್ಲಿ ವಿದ್ವಾನ್ ಎಚ್.ಎನ್. ಭಾಸ್ಕರ್, ಮೃದಂಗದಲ್ಲಿ ವಿದ್ವಾನ್ ಉಮಯಾಳಪುರಂ ಕೆ. ಸಿವರಾಮನ್ ಮತ್ತು ಖಂಜಿರಾದಲ್ಲಿ ವಿದ್ವಾನ್ ಗುರುಪ್ರಸನ್ನ ಸಹಕಾರ ನೀಡಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಕಾವೇರಿ ಇನ್ಸ್‌ಟಿಟ್ಯೂಟ್ ಆಫ್ ಹೆಲ್ತ್‌ಕೇರ್ ಅಸಿಸ್ಟೆಂಟ್ (ನರ್ಸಿಂಗ್)
ಬೆಳವಾಡಿ, ಮೈಸೂರು. ಎಸ್‌ಎಸ್‌ಎಲ್‌ಸಿ, ಪಿಯುಸಿ ಆದ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಗೆ ಒಂದು ಸುವರ್ಣಾವಕಾಶ. ಇಲ್ಲಿ ಎರಡು ವರ್ಷದ ತರಬೇತಿ ಕೊಡಲಾಗುವುದು. ಡೊನೇಷನ್ ಇಲ್ಲ, ಫೀಸ್ ಮಾತ್ರ, ತರಬೇತಿ ಸಮಯದಲ್ಲಿ ವೇತನ ಇದೆ. ಕಳೆದ 15 ವರ್ಷದಿಂದ ತರಬೇತಿ ಪಡೆದ ವಿದ್ಯಾರ್ಥಿನಿಯರು ಪ್ರಖ್ಯಾತ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಸ್ಟೆಲ್ ವ್ಯವಸ್ಥೆ ಇದೆ. ಕೆಲವೇ ಸೀಟುಗಳು ಬಾಕಿ ಇದೆ. ಸಂಪರ್ಕಿಸಿ
9845331087

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಬೇಕಾಗಿದ್ದಾರೆ. Salary: 13,000 - 21,000 + ESI, PF. ವಿದ್ಯಾರ್ಹತೆ: 10th, PUC, ITI, Diploma and any Degree ಇಂದೇ ಸಂಪರ್ಕಿಸಿ.
9035734821

ಗೌರಿ ಗಣೇಶ ಹಬ್ಬಕ್ಕೆ ಆರ್ಕೇಸ್ಟ್ರಾ ಕಾರ್ಯಕ್ರಮಕ್ಕಾಗಿ ಸಂಪರ್ಕಿಸಿ

PRK ಮ್ಯೂಸಿಕ್ ಆರ್ಕೇಸ್ಟ್ರಾ, ಮೈಸೂರು
9902639553

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000
9740733021 / 9535028750

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC
Sales & Service
Contact: Srinivas
9379699229

ಜಮೀನು ಮಾರಾಟಕ್ಕಿದೆ
1) 7.30 ಎಕರೆ ತೆಂಗಿನ ತೋಟ, ಮೈಸೂರಿನಿಂದ 50 km. ಎಕರೆಗೆ 35 ಲಕ್ಷ.
2) 4.20 ಎಕರೆ ಕೆಂಪು ಮಣ್ಣಿನ ಜಮೀನು, ಬೋರ್‌ವೆಲ್ ಇದೆ, ಮೈಸೂರಿನಿಂದ 26 km. ಎಕರೆಗೆ 45 ಲಕ್ಷ
Brokers Excuse
7022360170

AFFOTDABL HOME LOAN
ಮುಡಾ, ರೆವಿನ್ಯೂ, ಎ ಖಾತೆ, ನಗರ ಸಭಾ, ಪಂಚಾಯಿತಿ ಖಾತೆ 9 & 11ಎ, 11ಬಿ ಖಾತೆ
ಮನೆ ತೆಗೆದುಕೊಳ್ಳುವುದಕ್ಕೆ, ಕಟ್ಟುವುದಕ್ಕೆ, ಬ್ಯಾಲೆನ್ಸ್ ಟ್ರಾನ್ಸ್‌ಫರ್, ಪ್ಲಾಟ್ ಪರ್ಚೆಸ್, ವ್ಯಾಪಾರ ಮಾಡುತ್ತಿದ್ದಲ್ಲಿ ಮತ್ತು ಪರ್ಸನಲ್ ಲೋನ್‌ಗಳಿಗಾಗಿ ಸಂಪರ್ಕಿಸಿ.
Ph: 9448375325
* ಎಲ್ಲಾ ಷರತ್ತುಗಳು ಅನ್ವಯಿಸುತ್ತವೆ.

FOR SALE
A) 30x40 12 Lakhs 30x50 15 L sites available attch Brahmins E blk layout
B) 30x40 30x50 sites new RT NAGAR
C) 30x40 University Layout
D) 12 x36 House near Vijaya Bank circle Kuvempu Nagar
PRAKRUTHI PROPERTIES
90359 90359 / 95386 90359

ಶಿಕ್ಷಕಿಯರು ಬೇಕಾಗಿದ್ದಾರೆ
(ಇಂಗ್ಲೀಷ್ ಮೀಡಿಯಂ ಶಾಲೆ) ವಾಹನ ಸೌಲಭ್ಯವಿದೆ.
Social Teacher - 2
D.Ed-02, NST - 02
Spoken English - 02
ಸಂಪರ್ಕಿಸಿ:
9663577578 / 8147472526

FARM SITES / VILLA PLOTS AVAILABLE FOR JUST 375/ Sq.Ft
Dimensions 85x70, 85x140 off Ahad Garden, Mahadevapura Road Cross 9 km from Arnold School, Ring Road, Mysore
8217375125

ಸುವರ್ಣ ಯಾತ್ರ
1) ಕಾಶಿ ಪ್ರವಾಸ : 15/09/22 – 7 ದಿನಗಳು
2) ನೇಪಾಳ ಪ್ರವಾಸ: 15/09/22–8 ದಿನಗಳು
3) ಶಿರಡಿ ಪ್ರವಾಸ : 09/09/22 – 3 ದಿನಗಳು
4) ಗುಜರಾತ್ ಪ್ರವಾಸ: 27/10/22–8 ದಿನಗಳು
5) ರಾಜಸ್ಥಾನ ಪ್ರವಾಸ: 06/10/22 – 9 ದಿನಗಳು
8970949434
9019462508

ಗೌರಿಗಣೇಶ ಹಬ್ಬದ ಕಾರ್ಯಕ್ರಮಗಳಿಗಾಗಿ ಸಂಪರ್ಕಿಸಿ

ಕೆ.ರವಿಕುಮಾರ್ ಬಿ.ಕಾಂ ಗಾಯಕ ಹಾಗೂ ಆಕಾಶವಾಣಿ, ದೂರದರ್ಶನ ತುಲವಾದಕ ಅರ್ಪಿಸುವ: ಮೈಸೂರು ರವಿ ಮೆಲೋಡಿಸ್ ಆರ್ಕೇಸ್ಟ್ರ, ಸುಗಮ ಸಂಗೀತ, ಹಳೆಯ ಚಲನ ಚಿತ್ರಗೀತೆಗಳು ಹಾಗೂ ವಾದ್ಯ ಸಂಗೀತ. ಸಂಪರ್ಕಿಸಿ:
9448475373 / 7019423711

PART TIME WORK
ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು ಕೊರಿಯರ್ ಸೌಲಭ್ಯವಿದೆ.
9108418233
9743217566

MUDA ಸೈಟು ಮಾರಾಟಕ್ಕಿದೆ
30x40 ಅಳತೆಯ ದಕ್ಷಿಣ ಮುಡಾ ಖಾತ, ಬೋಗಾದಿ 2ನೇ ಹಂತ, ಟೆಲಿಕಾಂ ಲೇ ಔಟ್ ಹತ್ತಿರ. ಹೆಚ್ಚಿನ ಮಾಹಿತಿಗಾಗಿ. ಮಾಲೀಕರು:
8722802003

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ಸ್ಥಳ: ನಜರ್‌ಬಾದ್ (ಜ಼ೂ ಹತ್ತಿರ) ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಕಡ್ಡಾಯ. (12 ಗಂಟೆ ಕೆಲಸ)
9742531666

JOB OPPORTUNITY
Work from home for womens Process executives & non voices executives. Language : kannada + English + Hindi, Salary 9000 to 13900+shift allowence, Qualification: Puc or any Degree age : 18 to 40 years, No marketing No target (Laptops will be provided) Call
9483434327, 9900629071

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್, ಮೈಸೂರು
8050345574

S M GOLD COMPANY
ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5800
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ – (T&C)
9964522225

AFFIDAVIT
I, Sukumar D Jain (New name) residing at 103, 14th Cross, 'A' Block, J.P.Nagar, Mysuru South, Mysuru-570008, Karnataka. I have changed my name from Sukumara Dharmaraj Jain, (former name) to Sukumar D Jain (new name) in all records, deeds & writings and all proceedings, dealings, transactions on my own freewill & sworn in before Notary N.P. Kamaladevi vide affidavit dated 23-8-2022. In future I will be known, called and identified as Sukumar D Jain.
Sd/- Sukumar D Jain

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಮುಡಾ ಅನುಮೋದಿತ ಸೈಟ್ ಮಾರಾಟಕ್ಕೆ
20X30, 30X40 & 30X50
ಪೊಲೀಸ್ ಲೇಔಟ್ ಮತ್ತು ಲಲಿತಾದ್ರಿಪುರ ನಡುವೆ ರಿಂಗ್ ರೋಡ್ ಒಳಗೆ
ತಕ್ಷಣದ ನೋಂದಣಿ ಮತ್ತು ಕೂಡಲೆ ಮನೆ ಕಟ್ಟಬಹುದು ಬ್ಯಾಂಕ್ ಸಾಲ ಲಭ್ಯವಿದೆ
98800 65122 / 77956 09173

ಸೈಟುಗಳು ಮಾರಾಟಕ್ಕಿದೆ
20X40, 30X40, 30X50, 40X60 ಕೇವಲ 20X40 ಕ್ಕೆ 50,000, ಸಾವಿರದಂತೆ ಮುಂಗಡ ಹಣ ಕಟ್ಟಿ ಹಾಗೂ 30X40ಕ್ಕೆ 99 ಸಾವಿರದಂತೆ ಮುಂಗಡ ಹಣ ಕಟ್ಟಿ, 5 ಸಾವಿರದಂತೆ ಪ್ರತಿ ತಿಂಗಳು ಕಂತು ಕಟ್ಟಿ ಸೈಟು ನಿಮ್ಮದಾಗಿ ಸಿಕೊಳ್ಳಿ, ಮೈಸೂರು ಏರ್‌ಪೋರ್ಟ್ ಹತ್ತಿರ
7624811608 / 8660980069

FOR RENT
Commercial Space - 800 Mts, 3 Rooms Office space 1st floor, at krishnamurtypuram, Near Ballal Circle
9341024333

ತಕ್ಷಣ ಬೇಕಾಗಿದ್ದಾರೆ
HOME BASSED
E-CODE GAS SAFE

EDUCATION	WORK TIME	SALARY
SSLC,PUC,DIP Any Degree	4 HOURS	8000/-
	Age Limit	18 to 35

ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲಿ ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

CHANGE OF NAME
I, Vedantha Vijayananda, S/o V.K. Naveen N. R/at No. 04/08, Papanna layout, Main Road, Yaraganahalli, Mysuru-570011, Karnataka, India,have changed my name to Vedhantha Vijayananda vide affidavit dated 24.08.2022 before Notary C.R. Seetharam.
Sd/- Vedhantha Vijayananda

AMAZE


SUNZONE SOLAR SYSTEM
VM Double Road, Kuvempunagar, Mysuru
9845175443

ತಕ್ಷಣ ಬೇಕಾಗಿದ್ದಾರೆ
ಕೆಲಸ ಖಾಲಿ ಇದೆ ಮಾರ್ಕೆಟಿಂಗ್ ಅಲ್ಲ, ಶಿವಮೊಗ್ಗ, ಬೆಂಗಳೂರು, ತುಮಕೂರು, ಮೈಸೂರಿನಲ್ಲಿ ಕೆಲಸ ಮಾಡಲು ಆಸಕ್ತಿ ಇರುವ ಯುವಕ ಯುವತಿಯರನ್ನು 5ನೇ, 7ನೇ, 10ನೇ, 12ನೇ, ಬಿಕಾಂ, ಡಿಪ್ಲೊಮಾ, ಡಿಗ್ರಿ (ವಿದ್ಯಾರ್ಹತೆ ಯಿಲ್ಲದವರು) ವಸತಿ ಊಟ ದೊಂದಿಗೆ
ಸಂಬಳ +ಓಟಿ 18,000/-65,000/-
96069 34030

IMMEDIATE HIRING IN MYSORE
Accountant Required
Qualifications - ITI, Diploma, Any Degree. Accountant, Front Office, Core Cutting Boy.
* Salary: 15,000-35,000
* Age Limit: Below 35, Applicable for Male Candidates Only.
9880151303 / 6366638189

ಮನೆ ಭೋಗ್ಯಕ್ಕಿದೆ
20x30ರಲ್ಲಿ ಮೊದಲನೆ ಮಹಡಿ ಹಾಲ್, 2ರೂಂ, ಅಡುಗೆ ಮನೆ. (Veg ಮಾತ್ರ) ಆಂದೋಲನ ಸರ್ಕಲ್ ಹತ್ತಿರ. ಸಂಪರ್ಕಿಸಿ
9611321651 / 8884839139
(BROKER EXCUSE)

HOUSE FOR RENT
Only girls 1st Floor (with furnished) Hall + Kitchen + 1 bedroom + bathroom. Advance: Rs. 25,000. Rent: Rs. 6,000. Near Hootagalli Water Tank.
Mob: 8310008208

WANTED
Qualified PHARMACIST WANTED
BHANAVI PHARMA
Kuvempunagar, Mysore.
Mob: 9916155463

WANTED
One Female Office Assistant to our Audit Office. Qualification: PUC plus computer knowledge is essential. Preferably residing in Hebbal surrounding areas. Contact: Nagaraje Gowda
Auditor & Tax Consultant
No. 240, Vijayanagar Rly. Colony Main Road, near Surya Bakery, Hebbal, Mysore.
Mob: 9740285064

MUDA ALLOTTED SITE FOR SALE
* 45x65 Commercial site for sale in Vidyaranyapuram, Mysore. * 80x120 Site for sale in Vijayanagar 2nd Stage, Mysore.
Mob: 99004 64111

Building For Rent
In Temple Road, near Vidyashram College, Mysore. 2800 sq.ft. (ground floor) and 2300 sq.ft. (1st Floor). Rs. 40 / sq.ft. rent.
For more details please contact: H. Murali
Mob: 9880344263

LAPTOP REPAIR
We undertake repair of
1. Laptop chip level
2. Motherboard Chip level
3. LED / LCD monitor
4. All power supply units
Contact for used / new laptops and desktop computers
9663579654 / 9902955544

ಇಂದೇ ಸಂಪರ್ಕಿಸಿ
ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ, ಸರಸ್ವತಿಪುರಂ, ನಂಜನಗೂಡು, ಎನ್.ಆರ್.ಮೊಹಲ್ಲಾ, ಮುಂತಾದ ಏರಿಯಾಗಳಲ್ಲಿನ ಕಂಪನಿಗಳಿಗೆ, Office ಗಳಿಗೆ, Showroom ಗಳಿಗೆ ಕೆಲಸ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ. Any Qualification (ESI+PF+OT) ಯೊಂದಿಗೆ ಸಂಬಳ: 14,000 – 36,000/– ಸಂಪರ್ಕಿಸಿ
9663704915
7892878915

MAHATMA GANDHI FIRST GRADE COLLEGE
(Recognised by University of Mysuru)
KSRTC Tower, Sathagalli Bus Depot, Mysuru.
Admission Open 2022-23 for B.Com. and BBA
Fully furnished campus with experienced teaching faculties. For Enquiry:
Ph: 0821-2420374, 9343828203, 8095385968

ಬೇಕಾಗಿದ್ದಾರೆ
ಮನೆಯಲ್ಲಿ ಇದ್ದು ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಹೋಮ್ ನರ್ಸ್, ಹುಡುಗರು & ಹುಡುಗಿಯರು, ಅಡುಗೆ ಮಾಡುವವರು ಬೇಕಾಗಿದ್ದಾರೆ. ಸಂಬಳ 21,000.
ಸಂಪರ್ಕಿಸಿ: ಲಕ್ಷ್ಮಿ
Mob: 8152863106

SITES FOR SALE
20x30 & 30x40
Just Rs. 2300 / sq.ft.
Bank loan upto 80%, near Gurur Bus Stop, Ramabainagar, Mysore. DTCP Approved (Corporation limits). 1.5 kms from JP Nagar Ring Road.
8660105902

FOR SALE
30x40 Duplex, Vijayanagar 2nd Stage.
Mob: 9741628964

ತಕ್ಷಣ ಬೇಕಾಗಿದ್ದಾರೆ
20-40 ವಯಸ್ಸುಳ್ಳ CSC ಕಂಪ್ಯೂಟರ್ ಸೆಂಟರ್‌ಗೆ ಆನ್‌ಲೈನ್ ಮತ್ತು ಕಂಪ್ಯೂಟರ್ ಜ್ಞಾನವುಳ್ಳ ಪದವಿ/ಪಿಯುಸಿ, ಇಂಗ್ಲಿಷ್ ಜ್ಞಾನವುಳ್ಳ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ:
8660592055 / 9483096959

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ, ಹೆಬ್ಬಾಳ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ಸಂಬಳ: 15,000/- (8 Hours) ವಯೋಮಿತಿ: 45 ವರ್ಷದ ಒಳಗೆ, ESI ಮತ್ತು PF ಸೌಲಭ್ಯ ಇರುತ್ತದೆ. ಸಂಪರ್ಕಿಸ ಬೇಕಾದ ಸಂಖ್ಯೆಗಳು
9620667819
9880727819

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ Govt. Registered A.W.G ಕಂಪನಿಗೆ ಕನ್ನಡಬಲ್ಲ Freshers + Experience ಆದ 328 ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ:– SSLC, PUC, Dip, Degree, JOC, M.B.A etc.. ವಯೋಮಿತಿ: 18 to 34 years ತಿಂಗಳಿಗೆ : 27,000–35000 (ಉಚಿತ ವಸತಿ ಸೌಲಭ್ಯವಿದೆ). ಸ್ವಾತಿಗೌಡ:
9900163228
7349699460

WANTED
Service Technician
ITI holder / 2nd PUC, for Home Appliances, Authorised Service Center & Kent RO Water Purifier Service Center. Contact:
9900237315, 9845963421

HOUSE FOR SALE
30x40 MUDA, Brand New 3 BHK Duplex House, fully furnished, N/F site & E/F Door, near Christ Public School, Dattagalli. Price: Rs. 1.38 Cr. *Contact:*
8660105902

HOUSE FOR RENT
Single king size bedroom, 2nd floor with Balcony, Gokulam, Mysore.
Contact:
Mob: 99002-37315

HOUSE FOR SALE
30x40, 3 BHK, Duplex. Srirampura, Somanathanagar. 20x30, GF + FF, Vijayanagar 4th Stage.
7022759977, 9448425692

FOR RENT
40x60 site, 3 bedroom house at Vijayanagar 1st Stage.
Rent: Rs. 20,000.
Mob: 9741213137

airtel WANTED
SALES EXECUTIVE
Salary : 12,000/- Incentive up to 8,000/-, Contact:
9972728134

ದಾಖಲಾತಿ ಕಳೆದಿದೆ
ನಿವೇಶನ ಸಂಖ್ಯೆ 77-Y, ಹೂಟಗಳ್ಳಿ, ಇಂಡಸ್ಟ್ರಿಯಲ್ ಏರಿಯಾ, ಮೈಸೂರು ಈ ಸ್ವತ್ತಿನ ಕೆಐಎಡಿಬಿ ಮೂಲ ಅಲಾಟ್‌ಮೆಂಟ್ ಪತ್ರ ಕಳೆದಿದ್ದು, ಸಿಕ್ಕವರು ಸಂಪರ್ಕಿಸಿ:
9880410581

WANTED
Delivery Boys with own Auto.
Bharath Gas Distribution
Contact:
Mob: 9019638198

Job Opening
* Customer Relation
* Telecaller
* MD Assistant
For a reputed company. Any Degree / MBA. Computer knowledge must. (Female only).
Mob: 9035440657

HOUSE FOR RENT
2 bedroom ground floor & first floor house at Kanaka Layout, Vijayanagar 4th Stage, available for rent.
Mob: 9538072720

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಣಿತೋರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಮೈಸೂರು ನಗರದ ದೇವೇಗೌಡ ಸರ್ಕಲ್ ಹತ್ತಿರವಿರುವ MNC ಕಂಪನಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿಗಾರ್ಡ್‌ಗಳು ಹಾಗೂ ಹೌಸ್ ಕೀಪಿಂಗ್ ಕೆಲಸ ಮಾಡಲು ಹುಡುಗ, ಹುಡುಗಿಯರು ತಕ್ಷಣ ಬೇಕಾಗಿದ್ದಾರೆ.
9035050652
9035050656

ಬೇಕಾಗಿದ್ದಾರೆ
ವಯಸ್ಸಾದವರನ್ನು ರೋಗಿಗಳನ್ನು ನೋಡಿಕೊಳ್ಳಲು ಅನುಭವವಿರುವ / ಇಲ್ಲದಿರುವ ಯುವತಿಯರು / ಯುವಕರು ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಯಾವುದೇ ಶುಲ್ಕ ಇರುವುದಿಲ್ಲ. ಸಂಬಳ, ಉಚಿತ ಊಟ, ವಸತಿಯೊಂದಿಗೆ 12,000 ರಿಂದ 15,000. ಕೂಡಲೇ ಸಂಪರ್ಕಿಸಿ.
8951603018
8147031728

ಬರವಣಿಗೆ ಕೆಲಸ
ಮನೆಯಲ್ಲೇ ಕುಳಿತು ಕೈ ಬರವಣಿಗೆಯ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ 1 ಫಾರಂಗೆ 30 ರೂ. ಪಡೆಯಿರಿ. ಟೆಲಿಕಾಲರ್ ಬೇಕಾಗಿದ್ದಾರೆ.
97318-91409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970


Thank You Jesus for prayers granted.
-Padma

ಮನೆ ಬಾಡಿಗೆಗೆ ಇದೆ
8 ಚದರದ ಸಿಂಗಲ್ ಬೆಡ್ ರೂಂ ಇರುವ ಔಟ್‌ಹೌಸ್ ವಿಳಾಸ, 211, 12ನೇ ಮುಖ್ಯರಸ್ತೆ, 9ನೇ ಕ್ರಾಸ್, ಕೆ.ಹೆಚ್.ರಸ್ತೆ, ಸರಸ್ವತಿಪುರಂ, ಮೈಸೂರು–09
9449011353

NEWLY BUILT HOUSES FOR SALE
1) 30x40 2BHK (MUDA) Well Furnished with Borewell, Near VTU Engg. College. Price 80 Lakhs
2) 30x40 2BHK (MUDA) Well Furnished with Borewell at Vasanta Nagar MUDA Layout. Price: 80 Lakhs.
3) 20x30 Duplex (MUDA) Well Furnished 3BHK at LBS-1. Price 60 Lakhs
9886378344

ಸುವರ್ಣಾವಕಾಶ
ನಿವೃತ್ತಿ, ಸ್ವಯಂ ನಿವೃತ್ತಿ, ಗೃಹಣಿಯರಿಗೆ, ಸ್ವಯಂ ಉದ್ಯಮದಾರರಿಗೆ, ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part time - Full Time ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. Fixed Salary / PF-ESI, Age:- above 30 years
9008799156
8861611395

40x30 ನಿವೇಶನ ಮಾರಾಟಕ್ಕಿದೆ
ಕರ್ನಾಟಕ ಗೃಹ ಮಂಡಳಿ ಬಡಾವಣೆ, ಚಾಮಲಾಪುರ ಹುಂಡಿ, ನಂಜನಗೂಡು.
9902357291
9741767804

ನೇರ ನೇಮಕಾತಿ
ಮೈಸೂರಿನ ಪ್ರಖ್ಯಾತ ಕಂಪನಿಯಲ್ಲಿ ರಿಸಪ್ಷನಿಸ್ಟ್, ಅಡ್ಮಿನ್ ಆಫೀಸ್ ವರ್ಕ್ ಮತ್ತು ಫ್ಯಾಕ್ಟರಿಗಳಲ್ಲಿ ಕೆಲಸ ಮಾಡಲು ಯುವಕ – ಯುವತಿಯರು ಬೇಕಾಗಿದ್ದಾರೆ. 7th, 10th, PUC, ITI, and any Degree ಪಾಸ್ ಅಥವಾ ಫೈಲ್ ಆದವರಿಗೆ telecaller, Receptionist Executives, Housekeeping and Office works ಉಚಿತ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ. ಸಂಬಳ 10450 ರಿಂದ 37350. ಮೊದಲು ಬಂದವರಿಗೆ ಆದ್ಯತೆ.
6362292620 / 7899099833

ಬಂಧನ ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ.
www.bhandhana.com
ಡಾ.ಗುರೂಜಿ
6361740552
Lady Receptionist ಬೇಕಾಗಿದ್ದಾರೆ

ಸ್ಥಿರ ಆಸ್ತಿ ಮಾರಾಟಕ್ಕಿದೆ
ಇತ್ತೀಚೆಗೆ ಕಟ್ಟಿರುವ 2BHK 3 ಮನೆಗಳು 35x52 ನಿವೇಶನದಲ್ಲಿದೆ. 1ನೇ ಮತ್ತು 2ನೇ ಫ್ಲೋರ್‌ನಲ್ಲಿದೆ. 3 ಕಾರುಗಳು ನಿಲ್ಲಿಸಲು ಅವಕಾಶವಿದೆ. ಬನ್ನೂರು ರಿಂಗ್ ರಸ್ತೆ ಮತ್ತು ಬನ್ನೂರು ಮುಖ್ಯರಸ್ತೆಗೆ ಹತ್ತಿರವಿದೆ. ನಂದಿನಿ ಮಿಗಾ ಡೈರಿ ಪಕ್ಕ, 1ನೇ ಕ್ರಾಸ್, ಆಲನಹಳ್ಳಿ, ಶ್ರೀ ಸಾಯಿನಗರ, ಮೈಸೂರು–11. ದಲ್ಲಾಳಿಗಳು ಕ್ಷಮಿಸಿ
9379187729
9620525747

'ನೆಲೆ' ವೃದ್ಧಾಶ್ರಮ
ಹಿರಿಯ ನಾಗರೀಕರಿಗೆ ಹಾಗೂ ಹಾಸಿಗೆ ಹಿಡಿದವರಿಗೆ ವಸತಿ (Single / Double room) ಸಸ್ಯಹಾರ ಊಟ, ವೈದ್ಯಕೀಯ ತಪಾಸಣೆ, ನರ್ಸಿಂಗ್ ಸೌಲಭ್ಯ ಹಾಗೂ ಆಂಬುಲೆನ್ಸ್ ಸೌಲಭ್ಯ ದೊರೆಯುತ್ತದೆ. ದಾಖಲಾತಿಗಾಗಿ ಸಂಪರ್ಕಿಸಿ. ಡಾ.ಕಾಂತರಾಜು.ಸಿ.ಕೆ
9845058023

ಮನೆ ಬಾಡಿಗೆಗೆ ಇದೆ
2 ಮನೆ Single Bedroom, 1 Room Bachelors, Near Marimallappa College, Divans Road. Contact:
9448546024

ಬೇಕಾಗಿದ್ದಾರೆ
GWF (NGO) ಸಂಸ್ಥೆಯೊಂದರಲ್ಲಿ Office Work ಮಾಡಲು 20 ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ:– SSLC, PUC, ITI, Diploma, Any Degree (Pass/Fail) ಸ್ಥಳ: ವಿಜಯನಗರ, (Water Tank) ಮೈಸೂರು. ಸಂಬಳ: 7,500 to 10,000/- ಸಂಪರ್ಕಿಸಿ
7795708156
7619219839

ಮೈಸೂರು ನಗರದಲ್ಲಿ ಮನೆ ಹಾಗೂ ಕಮರ್ಷಿಯಲ್ ಬಿಲ್ಡಿಂಗ್ ಬೇಕಾಗಿದೆ.
ಕೆ.ಆರ್.ಪೇಟೆಯಲ್ಲಿ 2 ಸೈಟು ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ:
9731135888 / 9743464818

ಆದಿಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ
BA, B.Sc, B.Com, MA, M.Com, M.Sc, MBA, MBBS, BE, M.Tech, B.Ed, D.Ed, M.Ed
ವಿವಾಹ ನೋಂದಣಿಗೆ ಕರೆ ಮಾಡಿ
(2nd Marriage Also)
9164743059

ಬೇಕಾಗಿದ್ದಾರೆ
ಲಾಂಡ್ರಿಯಲ್ಲಿ ಇಸ್ತ್ರಿ ಕೆಲಸ ಮಾಡಲು ಸಮಯ: ಬೆಳಿಗ್ಗೆ 9.00 ರಿಂದ ಸಂಜೆ 7.00 ರವರೆಗೆ ಸಂಬಳ: 10,000–12,000 ರೂ.ಗಳು. ವಿಳಾಸ: ಹೋಂ ಕ್ರೌನ್ ಅಪಾರ್ಟ್‌ಮೆಂಟ್ ಹತ್ತಿರ, ವಿಜಯನಗರ 3ನೇ ಹಂತ, SJCE ಕಾಲೇಜ್ ಕಾಂಪೌಂಡ್ ಹಿಂಭಾಗ, ಮೈಸೂರು.
9035010382

WANTED TEACHERS
Sai Nanlanda Central School, K.R.Nagar-571602.
1) B.A./M.A, with B.Ed. (Social & English)
2) B.Sc./ M.Sc With B.Ed.
3) BCA, MCA / M.Sc in Computer
Free Accomodation
nalandakrn@gmail.com,
Web : www.sainalanda.com
8722093456 / 8722073456

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 7 ರಲ್ಲಿ

ಮಡಿಕೇರಿ ಚಲೋಗೆ ಕಾಂಗ್ರೆಸ್ಸಿಗರಿಂದಲೇ ವಿರೋಧ

'ಮಡಿಕೇರಿ ಚಲೋ' ತಡೆಯಿರಿ ಎಂದು ಹೈಕಮಾಂಡ್‌ಗೆ ಪತ್ರ ಬರೆದಿದ್ದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಎ.ಹುಸೇನ್

ಮಡಿಕೇರಿ,ಆ.24– ಮೊಟ್ಟೆ ಎಸೆದ ಪ್ರಕರಣವನ್ನು ವಿರೋಧಿಸಿ ಕಾಂಗ್ರೆಸ್ ಪಕ್ಷ ಆ.26 ರಂದು ಹಮ್ಮಿಕೊಂಡಿರುವ ಮಡಿಕೇರಿ ಚಲೋಗೆ ಸ್ವ-ಪಕ್ಷೀಯರಿಂದಲೇ ವಿರೋಧ ವ್ಯಕ್ತವಾಗಿದ್ದು, ಕಾರ್ಯಕ್ರಮವನ್ನು ತಡೆಯುವಂತೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಎ. ಹುಸೇನ್ ಅವರು ಪಕ್ಷದ ಹೈಕಮಾಂಡ್‌ಗೆ ಪತ್ರ ಬರೆದಿರುವುದು ಬೆಳಕಿಗೆ ಬಂದಿದೆ.

ಆ.26 ರಂದು ಮಡಿಕೇರಿಗೆ ನಾನು ಬರುತ್ತಿದ್ದೇನೆ, ನೀವು ಬರಬೇಕು. ಅವತ್ತು ಎಸ್ಪಿ ಕಚೇರಿಗೆ ಮುತ್ತಿಗೆ ಹಾಕುವುದಾಗಿ ವಿಧಾನ ಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಘರ್ಜಿಸುತ್ತಿದ್ದರೆ, ಮತ್ತೊಂದೆಡೆ ಎಐಸಿಸಿ ಅಧ್ಯಕ್ಷೆ ಸೋನಿಯಾಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು ಮತ್ತು ಕರ್ನಾಟಕ ಉಸ್ತುವಾರಿಗಳು, ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರುಗಳಿಗೆ ಪತ್ರ ಬರೆದು ಮಡಿಕೇರಿ ಚಲೋ ಕಾರ್ಯಕ್ರಮ ಬೇಡ, ಅದನ್ನು ತಡೆಯಿರಿ ಎಂದು ವಿನಂತಿಸಿದ್ದಾರೆ. ಈ ಸಂಬಂಧ ಅವರು ಬರೆದಿರುವ ಪತ್ರದ ಸಾರಾಂಶವನ್ನು ಇಲ್ಲಿ ಪ್ರಕಟಿಸಲಾಗಿದೆ.

ಕೊಡಗು ಜಿಲ್ಲೆಯಲ್ಲಿ ವಿರೋಧ ಪಕ್ಷದ ನಾಯಕ ಮತ್ತು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಾಹನದ ಮೇಲೆ ಮೊಟ್ಟೆ ಎಸೆದ ಘಟನೆಯನ್ನು ನಾನು ಖಂಡಿಸುತ್ತೇನೆ. ಇದು ಬಿಜೆಪಿಯ ಸಂಸ್ಕೃತಿಯನ್ನು ಬಯಲು ಮಾಡಿದೆ. ಕೊಡಗು ಜಿಲ್ಲೆ ತನ್ನ ಶೌರ್ಯ ಮತ್ತು ಭಾರತೀಯ ಸೇನೆಯ ಸೇವೆಯಲ್ಲಿ ಹೆಸರುವಾಸಿಯಾಗಿದೆ. ಸುಂದರ ಪ್ರಕೃತಿಯಿಂದ ಪ್ರವಾಸೋದ್ಯಮ ತಾಣವಾಗಿಯೂ ಗಮನ ಸೆಳೆದಿದೆ.

ಇದನ್ನು ದಕ್ಷಿಣ ಭಾರತದ ಸ್ಕಾಟ್ಲೆಂಡ್ ಎಂದೂ ಕರೆಯುತ್ತಾರೆ. ಹವಾಮಾನ ಬದಲಾವಣೆ ಸಮಸ್ಯೆಗಳಿಂದ ಕೊಡಗು ಜಿಲ್ಲೆ ಪರಿಸರ ವಿಕೋಪಕ್ಕೆ ಒಳಗಾಗುತ್ತದೆ. ಅಲ್ಲದೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಭೂಕುಸಿತಗಳು ಮತ್ತು ಪ್ರವಾಹಗಳನ್ನು ನಾವು ನೋಡುತ್ತೇವೆ.

ನಾನು 9 ವರ್ಷಗಳ ಕಾಲ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಮತ್ತು ನಂತರ ಪ್ರಧಾನ ಕಾರ್ಯದರ್ಶಿಯಾಗಿ ನನ್ನ ಸಂಘಟನಾ ಪಯಣವನ್ನು ಪ್ರಾರಂಭಿಸಿದೆ. ಇದು ಕೋಮು ಸೂಕ್ಷ್ಮ ಜಿಲ್ಲೆಯಾಗಿದ್ದು, ಎಸ್‌ಡಿಪಿಐ ಮತ್ತು ಬಲಪಂಥೀಯ ಸಂಘಟನೆಗಳು ಮುಂಚೂಣಿಯಲ್ಲಿವೆ. ಈ ಹಿಂದೆ ಟಿಪ್ಪು ಜಯಂತಿ ಆಚರಣೆ ಸಂದರ್ಭದಲ್ಲಿ ಕುಟ್ಟಪ್ಪ ಎಂಬ ವ್ಯಕ್ತಿ ಸಾವನ್ನಪ್ಪಿದ ಪ್ರತಿಭಟನೆ ರಾಜ್ಯಕ್ಕೆ ಹರಡಿತು. ಇದು ನಮ್ಮ ಸೋಲಿಗೆ ಒಂದು ಕಾರಣವಾಗಿತ್ತು.

ಅಲ್ಪಸಂಖ್ಯಾತ– ಅಮಾನುಷ– ಆರೋಪಗಳು ಪ್ರತಿಯೊಬ್ಬ ರಾಜಕಾರಣಿಯ ಸಾರ್ವಜನಿಕ ಜೀವನದ ಅವಿಭಾಜ್ಯ ಅಂಗವಾಗಿವೆ. ಕೊಡಗು ಜಿಲ್ಲೆಯ ಸೋಮವಾರಪೇಟೆ ಪಟ್ಟಣದಲ್ಲಿ ಮಾಜಿ ಮುಖ್ಯಮಂತ್ರಿ ಆರ್.ಗುಂಡೂರಾವ್ ಅವರ ಮೇಲೆ ಕಲ್ಲು ತೂರಾಟ ನಡೆಸಿದ ನಿದರ್ಶನಗಳಿವೆ. ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಹಾಗೂ ಧರಂಸಿಂಗ್ ಅವರ ಮೇಲೂ ದಾಳಿಯಾಗಿದೆ.

ಆಗಸ್ಟ್ 26 ರಂದು ಕರೆದಿರುವ ಕೊಡಗು ಚಲೋ ಪ್ರತಿಭಟನೆಯನ್ನು ಕೈಬಿಡುವಂತೆ ನಮ್ಮ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವರಿಕೆ ಮಾಡಿಕೊಡಬೇಕೆಂದು ನಾನು ಪಕ್ಷದ ವರಿಷ್ಠರಲ್ಲಿ ವಿನಂತಿಸುತ್ತೇನೆ.

ಏಕೆಂದರೆ ಇದು ಸಾರ್ವತ್ರಿಕ ಚುನಾವಣೆಗೆ ಮುಂಚಿತವಾಗಿ ಪಕ್ಷವು ತೆಗೆದುಕೊಳ್ಳುವ ದೊಡ್ಡ ಅಪಾಯವಾಗಿದೆ. ಕೊಡಗಿನ ಜನರ ಮುಂದೆ ಕಾಂಗ್ರೆಸ್ ಸರ್ಕಾರದ ಸಾಧನೆಗಳನ್ನು ಮತ್ತು ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೈಗೊಂಡ ಪರಿಹಾರ ಕ್ರಮಗಳನ್ನು ಎತ್ತಿ ತೋರಿಸುವ ಬೃಹತ್ ಸಾರ್ವಜನಿಕ ಸಭೆಯನ್ನು ಆಯೋಜಿಸಬೇಕು ಎಂದು ನಾನು ಭಾವಿಸುತ್ತೇನೆ.

ಕಳೆದ ವಿಪತ್ತುಗಳ ಸಮಯದಲ್ಲಿ ನಮ್ಮ ಕಾಂಗ್ರೆಸ್ ಸರ್ಕಾರದ ಪ್ರಯತ್ನಗಳು ಮತ್ತು ಪ್ರಸ್ತುತ ಬಿಜೆಪಿ ಆಡಳಿತದ ಬದ್ಧತೆಯನ್ನು ಹೋಲಿಸಲು ನಾವು ಕೊಡಗಿನ ಜನರ ಮೇಲೆ ಪ್ರಭಾವ ಬೀರಬಹುದು. ಇದೇ ವೇಳೆ ಮಡಿಕೇರಿಯಲ್ಲಿ ಬಿಜೆಪಿ ವತಿಯಿಂದ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಕೋವಿಡ್ ಸಂಕ್ರಾಮಿಕ ರೋಗದಿಂದಾಗಿ ಪ್ರವಾಸೋದ್ಯಮವು ಆರ್ಥಿಕ ಹಿಂಜರಿತದಿಂದ ಹೊರಬರುತ್ತಿದೆ. ಪ್ರವಾಸಿ ಋತುವಿನಲ್ಲಿ ವಿಶೇಷವಾಗಿ ಕೊಡಗು ಮತ್ತು ಚಿಕ್ಕಮಗಳೂರಿಗೆ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಆಗಮಿಸುತ್ತಾರೆ.

ಪ್ರವಾಸೋದ್ಯಮ ಕೊಡಗು ಜಿಲ್ಲೆಯ ಅವಿಭಾಜ್ಯ ಅಂಗವಾಗಿದ್ದು, ಉದ್ಯೋಗದ ಮೂಲವಾಗಿದೆ, ಬೊಕ್ಕಸಕ್ಕೆ ಅತ್ಯಧಿಕ ತೆರಿಗೆಯನ್ನು ನೀಡುತ್ತದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸಿಗರಲ್ಲಿ ಈ ಸುಂದರ ಜಿಲ್ಲೆಯ ಚಿತ್ರಣವನ್ನು ರಕ್ಷಿಸುವುದು ನಮ್ಮ ಜವಾಬ್ದಾರಿಯಾಗಿದೆ.

–ಎಸ್.ಎ.ಹುಸೇನ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ

ಬಿಜೆಪಿಯ 'ಜನ ಜಾಗೃತಿ ಸಮಾವೇಶ' ಮುಂದೂಡಿಕೆ



ಮಡಿಕೇರಿ,ಆ.24– ಜಿಲ್ಲೆಯಲ್ಲಿ ಆ.26ರಂದು ಜಿಲ್ಲಾ ಬಿಜೆಪಿಯಿಂದ ಆಯೋಜಿಸಲಾಗಿದ್ದ 'ಜನ ಜಾಗೃತಿ ಸಮಾವೇಶ'ವನ್ನು ಕಾನೂನನ್ನು ಗೌರವಿಸಿ, ನಿಷೇಧಾಜ್ಞೆ ಹಿನ್ನೆಲೆಯಲ್ಲಿ ಮುಂದೂಡಿರುವುದಾಗಿ ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ ಹೇಳಿದ್ದಾರೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆದ ಪ್ರಕರಣ ಮುಗಿದ ಅಧ್ಯಾಯವೆಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿ ಸಿದ್ದರಾಮಯ್ಯ ಅವರ ವಿರುದ್ಧ ಬಿಜೆಪಿ ಸಂವಿಧಾನಬದ್ಧವಾಗಿ ಪ್ರತಿಭಟನೆ ಮತ್ತು ಕಪ್ಪು ಬಾವುಟವನ್ನು ಪ್ರದರ್ಶಿಸಿದೆ. ಅವರ ಕಾರಿನ ಮೇಲೆ ಮೊಟ್ಟೆ ಎಸೆದ ಪ್ರಕರಣಕ್ಕೂ ಬಿಜೆಪಿಗೂ ಯಾವುದೇ ಸಂಬಂಧವಿಲ್ಲ. ಈಗಾಗಲೆ ಬಂಧಿತ ಆರೋಪಿ ಸಂಪತ್, ತಾನು ಕಾಂಗ್ರೆಸ್ಸಿಗನಾಗಿದ್ದು, ಸಿದ್ದರಾಮಯ್ಯ ಅವರ ಹಿಂದೂ ವಿರೋಧಿ ಧೋರಣೆಗಳಿಂದ ತಾನು ಈ ಕೃತ್ಯವೆಸಗಿರುವುದಾಗಿ ತಿಳಿಸಿದ್ದಾನೆಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್ ಕಾರ್ಯಕರ್ತ: ಮೊಟ್ಟೆ ಎಸೆದ ಆರೋಪಿ ಸೋಮವಾರಪೇಟೆ ಪಟ್ಟಣ ಪಂಚಾಯಿತಿ ಚುನಾವಣೆಯ ವಾರ್ಡ್‌ವೊಂದರ ಕಾಂಗ್ರೆಸ್ ಅಭ್ಯರ್ಥಿಗೆ ಸೂಚಕನಾಗಿದ್ದ ಮಾತ್ರವಲ್ಲದೇ ಆತನೇ ಬೂತ್ ಏಜೆಂಟ್ ಆಗಿ ಕರ್ತವ್ಯ ನಿರ್ವಹಿಸಿದ್ದಾನೆ ಎಂದು ರಾಬಿನ್ ದೇವಯ್ಯ ಆರೋಪಿಸಿದರು. ಹೀಗಿದ್ದರೂ ಆತ ಬಿಜೆಪಿ ಕಾರ್ಯಕರ್ತನೆಂದು ಹೇಳಿಕೆ ನೀಡುವುದು ಹಾಸ್ಯಾಸ್ಪದವಾಗಿದೆ. ಆರ್‌ಎಸ್‌ಎಸ್ ಸಮಾವೇಶದಲ್ಲಿ ಅಪ್ಪಚ್ಚು ರಂಜನ್ ಅವರೊಂದಿಗೆ ಸಂಪತ್ ಇರುವ ಚಿತ್ರವನ್ನು, ಕೇಸರಿ ಶಾಲು ಹೊದ್ದ ಫೋಟೋಗಳನ್ನು ಕಾಂಗ್ರೆಸ್ ಬಿಡುಗಡೆ ಮಾಡಿದೆ ಆದರೆ, ಕೇಸರಿ ಶಾಲು ಮತ್ತು ಬಿಜೆಪಿಗೂ ಸಂಬಂಧವಿಲ್ಲ. ಆರ್‌ಎಸ್‌ಎಸ್‌ನಲ್ಲಿ ಇರುವವರು ಇತರೆ ಬೇರೆ ಬೇರೆ ರಾಜಕೀಯ ಪಕ್ಷಗಳಲ್ಲಿದ್ದಾರೆ. ಕಾಂಗ್ರೆಸ್‌ನ ಸಿಂಧ್ಯಾ, ಉಗ್ರಪ್ಪ ಅವರುಗಳು ಆರ್‌ಎಸ್‌ಎಸ್‌ನಲ್ಲಿ ಇದ್ದವರೆಂದು ರಾಬಿನ್ ದೇವಯ್ಯ ಸ್ಪಷ್ಟಪಡಿಸಿದರು.

ಕಾಂಗ್ರೆಸ್ ಮುಖಂಡ ಎ.ಎಸ್.ಪೊನ್ನಣ್ಣ ಅವರು ಸಿದ್ದರಾಮಯ್ಯ ಜಿಲ್ಲೆಗೆ ಆಗಮಿಸಿದ ಸಂದರ್ಭ ನಡೆದ ಪ್ರತಿಭಟನೆ ಹೊರಗಿನ ಗೂಂಡಾಗಳಿಂದ ನಡೆದಿದೆ ಎನ್ನುತ್ತಾರೆ ಅದೇ ಮತ್ತೊಂದೆಡೆ ಹಿಂದೂ ಕಾರ್ಯಕರ್ತರ ಮೇಲೆ ಪ್ರತಿಭಟನೆಗೆ ಸಂಬಂಧಿಸಿದಂತೆ ದೂರು ನೀಡುತ್ತಾರೆ. ಮುಂದಿನ ಚುನಾವಣೆಯನ್ನು ದೃಷ್ಟಿ ಯಲ್ಲಿರಿಸಿಕೊಂಡು ಪೊನ್ನಣ್ಣ ಅವರು ಸಿದ್ದರಾಮಯ್ಯ ಅವರನ್ನು ಮೆಚ್ಚಿಸಲು ಈ ರೀತಿ ಹೇಳಿಕೆ ನೀಡುತ್ತಿದ್ದಾರೆಯೇ ಎಂದು ರಾಬಿನ್ ದೇವಯ್ಯ ಪ್ರಶ್ನಿಸಿದರು.

ಮೊಟ್ಟೆ ಎಸೆತ ಪ್ರಕರಣದಲ್ಲಿ ಎಸ್ಪಿ ಬಲಿಪಶು ಮಾಡಬೇಡಿ

ವಿರಾಜಪೇಟೆ, ಆ.24– ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕೊಡಗಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅವರ ಕಾರಿನ ಮೇಲೆ ಮೊಟ್ಟೆ ಎಸೆದವರನ್ನು ಪೊಲೀಸರು ಬಂಧಿಸಿದ್ದಾರೆ. ಆದರೂ ಈ ಪ್ರಕರಣದಲ್ಲಿ ನಿಷ್ಠಾವಂತ ಪೋಲಿಸ್ ವರಿಷ್ಠಾಧಿಕಾರಿಯನ್ನು ಬಲಿಪಶು ಮಾಡುತ್ತಿರುವುದು ಸರಿಯಲ್ಲ. ಅವರನ್ನು ಜಿಲ್ಲೆಯಿಂದ ವರ್ಗಾವಣೆ ಮಾಡಿದರೆ ಕೊಡಗು ಮಾಜಿ ಸೈನಿಕರು ಹಾಗೂ ಇತರ ಸಂಘ ಸಂಸ್ಥೆಗಳು ಸೇರಿ ಹೋರಾಟ ನಡೆಸುತ್ತೇವೆ ಎಂದು ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷ ಚೇಂದ್ರಿಮಾಡ ಗಣೇಶ್ ನಂಜಪ್ಪ ಎಚ್ಚರಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯರ ಕಾರಿನ ಮೇಲೆ ಮೊಟ್ಟೆ ಎಸೆದಿರುವುದನ್ನು ನಾವು ಖಂಡಿಸುತ್ತೇವೆ. ಮೊಟ್ಟೆ ಎಸೆದಿರುವವರನ್ನು ಕೂಡಲೇ ಪೊಲೀಸರು ಬಂಧಿಸಿದ್ದಾರೆ. ಆದರೂ ರಾಜಕೀಯ ಪಕ್ಷಗಳ ದೊಂಬರಾಟದಲ್ಲಿ ಜಿಲ್ಲೆಯ ನಿಷ್ಠಾವಂತ ಪೊಲೀಸ್ ವರಿಷ್ಠಾಧಿಕಾರಿ ಮಲ್ಚಿರ ಅಯ್ಯಪ್ಪ ಅವರ ವರ್ಗಾವಣೆಗೆ ಯತ್ನಿಸುತ್ತಿರುವುದು ಸರಿಯಲ್ಲ ಎಂದರು.

ಸೇನೆಯಲ್ಲಿ ಕರ್ತವ್ಯ ನಿರ್ವಹಿಸಿದ ಅಧಿಕಾರಿಗೆ ಜಾತಿ–ಧರ್ಮ, ಮತ–ಬೇಧವಿಲ್ಲದೆ ಎಲ್ಲರೂ ಭಾರತೀಯರು ಎಂಬ ರೀತಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇತ್ತೀಚಿಗೆ ಕೊಡವರ ಕುಲದೇವತೆ ಕಾವೇರಿ ಮಾತೆ ಹಾಗೂ ಕೊಡವ ಹೆಣ್ಣು ಮಕ್ಕಳ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿದ ಪ್ರಕರಣದಲ್ಲಿ ನಿಷ್ಪಕ್ಷಪಾತ ತನಿಖೆ ನಡೆಸಿ ನ್ಯಾಯ ಒದಗಿಸಿ ಕೊಟ್ಟಿರುವುದು ಉದಾಹರಣೆಯಾಗಿದೆ. ಆದ್ದರಿಂದ ರಾಜಕೀಯ ಧುರೀಣರು ಜಿಲ್ಲಾ ವರಿಷ್ಠಾಧಿಕಾರಿಗಳ ವರ್ಗಾವಣೆಯ ಪ್ರಸ್ತಾಪವನ್ನು ಕೈಬಿಟ್ಟು ಜಿಲ್ಲೆಯ ಸಮಸ್ಯೆಗಳ ಬಗ್ಗೆ ಗಮನ ಹರಿಸುವಂತಾಗಲಿ ಎಂದರು.

ಮಾಜಿ ಸೈನಿಕರ ಸಂಘದ ಮಾಜಿ ಅಧ್ಯಕ್ಷ ಕಾವಡಿಚಂಡ ಯು.ಗಣಪತಿ ಮಾತನಾಡಿ, ಘಟನೆಯನ್ನು ತೀವ್ರವಾಗಿ ಖಂಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಚಪ್ಪಂಡ ಹರೀಶ್, ಮಾಜಿ ಅಧ್ಯಕ್ಷ ಪುಗ್ಗೆರ ನಂದಾ, ನಿರ್ದೇಶಕ ತೋರೆರ ರಾಜ ಪೂವಯ್ಯ ಉಪಸ್ಥಿತರಿದ್ದರು.



ಡಾ.ಸುಪರ್ಣಾ ಕೃಷ್ಣಾನಂದರಿಗೆ ಶ್ರೇಷ್ಠ ವೈದ್ಯೆ ರಾಜ್ಯ ಪ್ರಶಸ್ತಿ ಪ್ರದಾನ

ಮಡಿಕೇರಿ,ಆ.24–ಸೋಮವಾರಪೇಟೆ ತಾಲೂಕಿನ ವೈದ್ಯೆ ಡಾ.ಸುಪರ್ಣಾ ಕೃಷ್ಣಾನಂದ ಅವರು ರಾಜ್ಯ ಸರ್ಕಾರದ ಶ್ರೇಷ್ಠ ವೈದ್ಯೆ ಪ್ರಶಸ್ತಿಗೆ ಭಾಜನರಾಗಿದ್ದಾರೆ. ವೈದ್ಯರ ದಿನಾಚರಣೆ ಅಂಗವಾಗಿ ಇಂದು ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ವಿಶೇಷ ಸಾಧನೆ ತೋರಿದ ವೈದ್ಯರುಗಳಿಗೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡಿದರು.

ಡಾ.ಸುಪರ್ಣಾ ಕೃಷ್ಣಾನಂದ, ಆಲೂರು ಸಿದ್ದಾಪುರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರಾಗಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಸರ್ಕಾರಿ ಆಸ್ಪತ್ರೆಯನ್ನು ಯಾವುದೇ ಖಾಸಗಿ ಆಸ್ಪತ್ರೆಗೂ ಕಡಿಮೆಯಿಲ್ಲ ಎನ್ನುವಂತೆ ನಿರ್ವಹಿಸುವುದರೊಂದಿಗೆ ರೋಗಿಗಳೊಡನೆ ಉತ್ತಮ ಬಾಂಧವ್ಯ ಇಟ್ಟುಕೊಂಡು ಉತ್ತಮ ಸೇವೆ ನೀಡುತ್ತಿದ್ದಾರೆ. ಈ ವೇಳೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಸುಧಾಕರ್ ಉಪಸ್ಥಿತರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ನಾಗಮಂಗಲ, ಆ.24– ತಾಲೂಕಿನ ಬೆಳ್ಳೂರು ಉಪ ವಿಭಾಗ ವ್ಯಾಪ್ತಿಯ ವಡೇರಹಳ್ಳಿ 66/11ಕೆವಿಎ ವಿದ್ಯುತ್ ಪ್ರಸರಣ ಘಟಕದಲ್ಲಿ ವಡೇರಹಳ್ಳಿ ಎನ್‌ಜೆವೈ ಮಾರ್ಗದ ಸಮರ್ಪಕ ನಿರ್ವಹಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಆ. 25ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಸದರಿ ಮಾರ್ಗದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಳ್ಳೂರು ಸೆಸ್ಕ್ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ.

ನಾಗಮಂಗಲ ಪಟ್ಟಣದಲ್ಲಿ ವಿದ್ಯುತ್ ಕಂಬಗಳನ್ನು ಬದಲಾಯಿಸುವ ಕಾಮಗಾರಿಯನ್ನು ತುರ್ತಾಗಿ ಹಮ್ಮಿಕೊಂಡಿರುವುದರಿಂದ ನಾಗಮಂಗಲ 66/11ಕೆವಿಎ ವಿದ್ಯುತ್ ಪ್ರಸರಣ ಘಟಕದಿಂದ ಹೊರ ಹೋಗುವ ಟಿ.ಬಿ.ಅರ್ಬನ್, ಎ.ಸಿ.ಹಳ್ಳಿ, ಬೆಳ್ಳೂರು ಮತ್ತು ರೂರಲ್ ಐಪಿ, ಮುಳಕಟ್ಟೆ ಐಪಿ ಮಾರ್ಗಗಳಡಿ ಬರುವ ನಾಗಮಂಗಲ, ಟಿ.ಬಿ. ಬಡಾವಣೆ, ಅಂಚೆಚಿಟ್ಟನಹಳ್ಳಿ, ತುಪ್ಪದಮಡು, ಹುಲಿಕೆರೆ ಗ್ರಾಪಂಗಳ ವ್ಯಾಪ್ತಿಯ ಗ್ರಾಮಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ನಾಗಮಂಗಲ ಸೆಸ್ಕ್ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ.

ಶಿಕ್ಷಕ ಕೆ.ಆರ್.ಪ್ರಕಾಶ್ ನಿಧನ



ಭಾರತೀನಗರ, ಆ.24– ಇಲ್ಲಿನ ಶ್ರೀಚಾಮ್‌ಶುಗರ್ ಶಾಲೆಯ ಮುಖ್ಯ ಶಿಕ್ಷಕ ಕೆ.ಆರ್.ಪ್ರಕಾಶ್(57) ಬುಧವಾರ ರಾತ್ರಿ ಅನಾರೋಗ್ಯದಿಂದ ನಿಧನರಾದರು. ಇವರು ಮಂಡ್ಯದ ಶಂಕರನಗರದ ನಿವಾಸಿಯಾಗಿದ್ದು, ಕಳೆದ 30 ವರ್ಷಗಳಿಂದ ಶ್ರೀಚಾಮ್‌ಶುಗರ್ ಶಾಲೆಯಲ್ಲಿ ಶಿಕ್ಷಕರಾಗಿ ಹಾಗೂ ಕಳೆದ ಐದಾರು ವರ್ಷಗಳಿಂದ ಮುಖ್ಯಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದರು.

ಮೃತರು ತಂದೆ ರಾಮಣ್ಣ ತಾಯಿ ಗೌರಮ್ಮ, ಇಬ್ಬರು ಸಹೋದರರು, ಸಹೋದರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಬೆಳಗ್ಗೆ 11 ಗಂಟೆಗೆ ಮಂಡ್ಯದ ಸುಭಾಷ್‌ನಗರದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. **ಸಂತಾಪ:** ಮೃತರ ನಿಧನಕ್ಕೆ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕ ಎಂ.ಶ್ರೀನಿವಾಸ್, ಉಪಾಧ್ಯಕ್ಷ ಆರ್.ಮಣಿ ಸೇರಿದಂತೆ ಶ್ರೀಚಾಮ್ ಶುಗರ್ ಶಾಲೆಯ ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸಂತಾಪ ಸೂಚಿಸಿದ್ದಾರೆ.

ಹೇಮಾವತಿ



ಕೆ.ಆರ್.ಪೇಟೆ, ಆ.24– ತಾಲೂಕು ಕೇಂದ್ರದಲ್ಲಿ ಸರ್ಕಾರಿ ಕಟ್ಟಡಗಳ ನಿರ್ಮಾಣಕ್ಕೆ ಭೂಮಿ ದಾನವಾಗಿ ನೀಡಿದ ತಾಲೂಕಿನ ಕೊಡುಗೈ ದಾನಿ ಹೊಸಹೊಳಲಿನ ದಿವಂಗತ ದುಂಡಶೆಟ್ಟಿ, ಲಕ್ಷ್ಮಮ್ಮ ಅವರ ವಂಶಸ್ಥರಾದ ಹೆಚ್.ಕೆ.ರಂಗಶೆಟ್ಟರ ಪತ್ನಿ ಹೇಮಾವತಿ(85) ಅವರು ಬುಧವಾರ ಸಂಜೆ ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಸಂಸ್ಕಾರವು ಹೊಸಹೊಳಲು ಗ್ರಾಮದಲ್ಲಿ ಗುರುವಾರ ಬೆಳಗ್ಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೃತರ ನಿಧನಕ್ಕೆ ತಾಲೂಕಿನ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ನಿವೇಶನ, ವಸತಿ ರಹಿತ ಫಲಾನುಭವಿಗಳ ಆಯ್ಕೆಗೆ ಸೂಚನೆ



ಕೆ.ಆರ್.ಪೇಟೆ, ಆ.24– ತಾಲೂಕಿನಾದ್ಯಂತ ನಿವೇಶನ ಹಾಗೂ ವಸತಿ ರಹಿತ ಫಲಾನುಭವಿಗಳನ್ನು ಆಯ್ಕೆ ಮಾಡಲು ಅಧಿಕಾರಿಗಳು ಸೂಕ್ತ ಕ್ರಮ ವಹಿಸಬೇಕು ಎಂದು ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ಕೆ.ಸಿ.ನಾರಾಯಣಗೌಡ ಸೂಚನೆ ನೀಡಿದರು.

ತಾಲೂಕಿನ ಚಿಕ್ಕೋನಹಳ್ಳಿಯ ರೇಷ್ಮೆ ತರಬೇತಿ ಕೇಂದ್ರದಲ್ಲಿ ಮಳೆಹಾನಿ ಪರಿಹಾರ ಕ್ರಮ ಹಾಗೂ ಇನ್ನಿತರ ವಿಷಯಗಳ ಕುರಿತು ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಸಾವಿರಾರು ಮಂದಿ ಬಡವರು ಸರ್ಕಾರಿ ಭೂಮಿಯಲ್ಲಿ ಮನೆ ಕಟ್ಟಿಕೊಂಡು ಹತ್ತಾರು ವರ್ಷಗಳಿಂದ ವಾಸಿಸುತ್ತಿದ್ದಾರೆ. ಅವರಿಂದ 94ಸಿ ಅಡಿಯಲ್ಲಿ ಅರ್ಜಿ ಪಡೆದು ಹಕ್ಕು ಪತ್ರ ನೀಡಲು ಕಂದಾಯ ಇಲಾಖೆ ಹಾಗೂ ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದರು.

ಪ್ರತಿ ಪಂಚಾಯಿತಿ ವ್ಯಾಪ್ತಿಯಲ್ಲಿ ವಸತಿ ರಹಿತರಿಗೆ ನಿವೇಶನ ನೀಡಲು ಭೂಮಿ ಗುರುತಿಸಲಾಗಿದೆ. ಜಿಲ್ಲಾಧಿಕಾರಿಗಳು ಭೂಮಿಯನ್ನು ಮಂಜೂರು ಮಾಡಿರುತ್ತಾರೆ. ಈ ಭೂಮಿಯನ್ನು ತಾಲೂಕಿನ ನಿವೇಶನ ಹಾಗೂ ವಸತಿ ರಹಿತರಿಗೆ ವಿತರಿಸಲು ಉದ್ದೇಶಿಸಲಾಗಿದೆ. ಹಾಗಾಗಿ, ಫಲಾನುಭವಿಗಳನ್ನು ಆಯ್ಕೆ ಮಾಡಲು ಕೂಡಲೇ ವಿಶೇಷ ಗ್ರಾಮಸಭೆ ನಡೆಸಬೇಕು. ಅರ್ಹರ ಪಟ್ಟಿಯನ್ನು ಸೆ.10 ರೊಳಗೆ ನೀಡಬೇಕು ಎಂದು ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಸತೀಶ್ ಅವರಿಗೆ ಸೂಚಿಸಿದರು.

ಕೆ.ಆರ್.ಪೇಟೆ ತಾಲೂಕಿಗೆ ಸಂಬಂಧಿಸಿದ ಲೋಕೋಪಯೋಗಿ, ಸಣ್ಣ ನೀರಾವರಿ, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಗಳು ಕೈಗೊಂಡಿರುವ ರಸ್ತೆ, ಕೆರೆ ಹಾಗೂ ಇನ್ನಿತರ ಅಭಿವೃದ್ಧಿ ಕಾಮಗಾರಿಗಳಿಗೆ ಮಂಜೂರಾಗಿರುವ ಅನುದಾನ ಹಾಗೂ ಕಾಮಗಾರಿಗಳ ಸ್ಥಿತಿಗತಿಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ವಹಿಸಬೇಕು ಎಂದರು. ಜಿಲ್ಲಾಧಿಕಾರಿ ಎಸ್.ಅಶ್ವತಿ ಮಾತನಾಡಿ, ಬೆಳೆಹಾನಿ ಸಂಬಂಧ ಪರಿಹಾರ ನೀಡಲು ವಿವರವನ್ನು ಪರಿಹಾರ ಪೋರ್ಟಲ್‌ನಲ್ಲಿ ಭರ್ತಿ ಮಾಡಬೇಕಿದ್ದು, ಆ. 27ರೊಳಗಾಗಿ ವಿವರವನ್ನು ಭರ್ತಿ ಮಾಡಿ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಶ್ರೀನಿವಾಸ್, ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಕೆ.ಜಿ.ತಮ್ಮಣ್ಣ, ಎಸ್‌ಪಿ ಎನ್.ಯತೀಶ್, ಜಿಪಂ ಉಪ ಕಾರ್ಯದರ್ಶಿ ಸರಸ್ವತಿ, ಪಾಂಡವಪುರ ಉಪವಿಭಾಗಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ, ತಹಸೀಲ್ದಾರ್ ಎಂ.ವಿ.ರೂಪಾ, ಡಿಡಿಪಿಐ ಎಸ್.ಟಿ.ಜವರೇಗೌಡ, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ರಾಜಮೂರ್ತಿ, ಹೆಚ್‌ಎಲ್‌ಬಿಸಿ ಇಇ ಕಿಜರ್‌ಅಹಮದ್, ತಾಲೂಕು ಆರೋಗ್ಯಾಧಿಕಾರಿ ಡಾ.ಶಿವಕುಮಾರ್, ಬಿಇಓ ಆರ್.ಎಸ್. ಸೀತಾರಾಂ, ಕೃಷಿ ಸಹಾಯಕ ನಿರ್ದೇಶಕ ಟಿ.ಎಸ್. ಮಂಜುನಾಥ್, ಬಿಸಿಎಂ ಅಧಿಕಾರಿ ವೆಂಕಟೇಶ್, ಕುಂಭಮೇಳದ ಸಂಚಾಲಕ ಅಂಚಿ ಸಣ್ಣಸ್ವಾಮೀಗೌಡ, ಜಿಪಂ ಮಾಜಿ ಉಪಾಧ್ಯಕ್ಷ ಎಸ್.ಅಂಬರೀಶ್, ಸಚಿವರ ಆಪ್ತ ಕಾರ್ಯದರ್ಶಿ ಹೆಚ್.ಜಿ.ಪ್ರಭಾಕರ್ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ರಾಸುಗಳಿಗೆ ಕಡ್ಡಾಯ ಜೀವವಿಮೆ ಮಾಡಿಸಲು ಸಲಹೆ



ಮಂಡ್ಯ, ಆ.24– ರೈತರು ತಮ್ಮ ರಾಸುಗಳಿಗೆ ಜೀವ ವಿಮೆ ಮಾಡಿಸುವ ಮೂಲಕ ಆಕಸ್ಮಿಕವಾಗಿ ಜರುಗುವ ರಾಸುಗಳ ಜೀವ ಹಾನಿಯಿಂದ ಉಂಟಾಗುವ ಆರ್ಥಿಕ ನಷ್ಟದ ಹೊರೆ ಕಡಿಮೆ ಮಾಡಿಕೊಳ್ಳಬೇಕು ಎಂದು ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರ ಸಲಹೆ ನೀಡಿದರು.

ತಾಲೂಕಿನ ಕೊತ್ತತ್ತಿ ಹಾಲು ಉತ್ಪಾದಕರ ಸಹಕಾರ ಸಂಘದ ನಂದಿನಿ ಸಭಾಂಗಣದಲ್ಲಿ ಬುಧವಾರ ಮನ್‌ಮುಲ್‌ನಿಂದ ನಡೆದ 2022–23ನೇ ಸಾಲಿನ ಜಾನುವಾರು ವಿಮಾ ಯೋಜನೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ಹಾಲು ಉತ್ಪಾದಕರು ಕಡ್ಡಾಯವಾಗಿ ತಮ್ಮ ರಾಸುಗಳಿಗೆ ಆರೋಗ್ಯ ವಿಮೆ ಮಾಡಿಸಬೇಕು ಎಂದು ತಿಳಿಸಿದರು. ರಾಸುಗಳಿಗೂ ಆರೋಗ್ಯ ಸಮಸ್ಯೆಗಳುಂಟಾಗಿ ಮೃತಪಟ್ಟರೆ ತಮ್ಮ ಭವಿಷ್ಯಕ್ಕೆ ಮಾರಕವಾಗಲಿದ್ದು, ಆ ಬಗ್ಗೆ ಎಚ್ಚರವಹಿಸಿ ಪ್ರತಿಯೊಬ್ಬ ಹಾಲು ಉತ್ಪಾದಕರು ಕಡ್ಡಾಯವಾಗಿ ತಮ್ಮ ರಾಸುಗಳಿಗೆ ಆರೋಗ್ಯ ವಿಮೆ ಮಾಡಿಸಬೇಕು. ಜೊತೆಗೆ, ಅಕ್ಕ ಪಕ್ಕದ ರೈತರಿಗೂ ಹೇಳಿ ರಾಸು ವಿಮೆ ಮಾಡಿಸಲು ಅರಿವು ಮೂಡಿಸಬೇಕು ಎಂದರು.

ಮನ್‌ಮುಲ್ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಡಾ.ಪಿ.ಆರ್.ಮಂಜೇಶ್ ಮಾತನಾಡಿ, ಹಳ್ಳಿಗಾಡಿನ ಹೈನುಗಾರರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ರಾಸುವಿಮೆ ಎಂಬ ಮಹತ್ವದ ಯೋಜನೆ ಜಾರಿಗೊಳಿಸಲಾಗಿದೆ. ರೈತರು ಕಡ್ಡಾಯವಾಗಿ ರಾಸು ವಿಮೆ ಮಾಡಿಸಬೇಕು ಎಂದು ಸಲಹೆ ನೀಡಿದರು. ಮನ್‌ಮುಲ್ ಉಪಾಧ್ಯಕ್ಷ ಎಂ.ಎಸ್. ರಘು ನಂದನ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ವ್ಯವಸ್ಥಾಪಕ ಪ್ರಭಾಕರ್, ಉಪವ್ಯವಸ್ಥಾಪಕ ಡಾ.ಮಂಜೇಶ್‌ಗೌಡ, ಮುಖಂಡ ಎಸ್.ತಮ್ಮಣ್ಣ, ಡೇರಿ ಅಧ್ಯಕ್ಷ ರಮೇಶ್, ಉಪಾಧ್ಯಕ್ಷ ಜಗದೀಶ್, ವಿಸ್ತರಣಾಧಿಕಾರಿಗಳಾದ ಪ್ರತಾಪ್, ರಶ್ಮಿ ಹಾಜರಿದ್ದರು.

ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ

ಗಣೇಶ ಪ್ರತಿಷ್ಠಾಪನೆ ಅನುಮತಿಗೆ ಏಕಗವಾಕ್ಷಿ ಸಮಿತಿ ರಚನೆ



ಚಾಮರಾಜನಗರ, ಆ.24–ಗೌರಿ–ಗಣೇಶ ಹಬ್ಬದಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪಿಸುವ ಉತ್ಸವ ಆಯೋಜಕರಿಗೆ ಪರವಾನಗಿ ನೀಡುವ ನಿಟ್ಟಿನಲ್ಲಿ ತಾಲೂಕು ಮಟ್ಟದಲ್ಲಿ ಏಕಗವಾಕ್ಷಿ ಸಮಿತಿ ರಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಮಾಹಿತಿ ನೀಡಿದರು.

ತಮ್ಮ ಕಚೇರಿ ಸಭಾಂಗಣದಲ್ಲಿಂದು ಗೌರಿ ಗಣೇಶ ಹಬ್ಬದ ಹಿನ್ನೆಲೆ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಈ ಹಿಂದಿನ ಎರಡು ವರ್ಷಗಳಲ್ಲಿ ಕೋವಿಡ್ ಹಿನ್ನೆಲೆಯಲ್ಲಿ ಗಣೇಶೋತ್ಸವಕ್ಕೆ ಸರ್ಕಾರ ನಿರ್ಬಂಧ ವಿಧಿಸಿತ್ತು. ಈ ಬಾರಿ ನಿರ್ಬಂಧಗಳಿಲ್ಲದಿದ್ದರೂ ಸರ್ಕಾರದ ಕೆಲ ಷರತ್ತು ಹಾಗೂ ಮಾರ್ಗಸೂಚಿ ಅನುಸರಿಸಬೇಕು. ಹೀಗಾಗಿ ಉತ್ಸವ ಆಯೋಜಕರಿಗೆ ಆಯಾ ತಾಲೂಕಿನ ತಹಸೀಲ್ದಾರ್ ನೇತೃತ್ವದಲ್ಲಿ ಏಕಗವಾಕ್ಷಿ ಯೋಜನೆಯಡಿ ಪರವಾನಗಿ ನೀಡಲು ತಾಲೂಕು ಮಟ್ಟದಲ್ಲಿ ಸಮಿತಿ ರಚಿಸಲಾಗಿದೆ. ಸಮಿತಿಯಲ್ಲಿ ಜಿಲ್ಲೆಯ ನಗರ, ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಸದಸ್ಯ ಕಾರ್ಯದರ್ಶಿಯಾಗಿದ್ದು, ತಾಪಂ ಇಓ, ಪೊಲೀಸ್ ವೃತ್ತ ನಿರೀಕ್ಷಕರು, ಲೋಕೋಪಯೋಗಿ ಇಲಾಖೆ ಎಇಇ, ಚೆಸ್ಕಾಂ ಎಇಇ ಹಾಗೂ ತಾಲೂಕು ಅಗ್ನಿಶಾಮಕ ಠಾಣಾಧಿಕಾರಿಗಳನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ ಎಂದರು.

ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ವಾರ್ಡ್ ಮಟ್ಟದಲ್ಲಿ ವಿವಿಧ ಇಲಾಖೆಗಳ ಪ್ರತಿನಿಧಿಗಳನ್ನೊಳಗೊಂಡ ಏಕಗವಾಕ್ಷಿ ವ್ಯವಸ್ಥೆ ರಚಿಸಬೇಕು. ಆಯೋಜಕರು ನಿಗದಿತ ನಮೂನೆಯಲ್ಲಿ ಉತ್ಸವಕ್ಕೆ ಮುನ್ನ ಅರ್ಜಿ ಸಲ್ಲಿಸಬೇಕು. ಸಮಿತಿಗೆ ಸ್ವೀಕೃತವಾಗುವ ಅರ್ಜಿಗಳನ್ನು ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಜಂಟಿ ತಪಾಸಣೆ ನಡೆಸಿ 3 ದಿನದೊಳಗೆ ಪರವಾನಗಿ ನೀಡಲಿದ್ದು, ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸುವ ಬಗ್ಗೆ ಆಯೋಜಕರು ಮುಚ್ಚಳಿಕೆ ನೀಡಬೇಕಿದೆ ಎಂದರು.

ಜಿಪಂ ಉಪ ಕಾರ್ಯದರ್ಶಿ ಗುಡೂರು ಭೀಮಸೇನ, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಪಟ್ಟಣ ಪೊಲೀಸ್ ಠಾಣಾಧಿಕಾರಿ ತಿಮ್ಮರಾಜು, ಗಣೇಶ ಪ್ರತಿಷ್ಠಾಪನೆ ಮಂಡಳಿ ಅಧ್ಯಕ್ಷ ಮನೋಜ್ ಪಟೇಲ್, ಪ್ರಧಾನ ಕಾರ್ಯದರ್ಶಿ ನಾಗರಾಜು, ಉಪಾಧ್ಯಕ್ಷ ನಟರಾಜು, ವಿರಾಟ್ ಶಿವು, ಗೌರವ ಕಾರ್ಯದರ್ಶಿ ಸುದರ್ಶನಗೌಡ, ಕಾರ್ಯದರ್ಶಿ ಚಂದ್ರಶೇಖರ ರಾವ್, ತಾಲೂಕು ಅರಾಧನಾ ಸಮಿತಿ ಸದಸ್ಯ ರಮೇಶ್‌ನಾಯಕ್, ಖಜಾಂಚಿ ಚಿಕ್ಕರಾಜು, ವಿವಿಧ ಅಧಿಕಾರಿಗಳು ಸಭೆಯಲ್ಲಿದ್ದರು.

> ❝ ಪರಿಸರ ಮಾಲಿನ್ಯ ಉಂಟಾಗದಂತೆ ಆಯೋಜಕರು ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಅವಶ್ಯವಿರುವೆಡೆ ಸಿ.ಸಿ ಕ್ಯಾಮೆರಾ ಅಳವಡಿಸಬೇಕು. ಹೈ–ಟೆನ್ಷನ್ ವಿದ್ಯುತ್ ತಂತಿ ಹಾದುಹೋಗಿರುವ ಪ್ರದೇಶದಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಅವಕಾಶವಿಲ್ಲ. ಒಟ್ಟಿನಲ್ಲಿ ಗಣೇಶೋತ್ಸವವನ್ನು ಶಾಂತಿ, ಸೌಹಾರ್ದತೆ ಆಚರಿಸಲು ಎಲ್ಲರೂ ಸಹಕರಿಸಬೇಕು.
>
> –ಚಾರುಲತಾ ಸೋಮಲ್, ಜಿಲ್ಲಾಧಿಕಾರಿ

ಕೊಳ್ಳೇಗಾಲದಲ್ಲಿ ಕಾಂಗ್ರೆಸ್ ಸ್ವಾತಂತ್ರ್ಯ ನಡಿಗೆ



ಕೊಳ್ಳೇಗಾಲ, ಆ.24– ಕೊಳ್ಳೇಗಾಲ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಾಂಗ್ರೆಸ್‌ನಿಂದ ಹಮ್ಮಿಕೊಂಡಿದ್ದ ಸ್ವಾತಂತ್ರ್ಯ ನಡಿಗೆ ಪಾದಯಾತ್ರೆಗೆ ಮಾಜಿ ಶಾಸಕ ಎ.ಆರ್. ಕೃಷ್ಣಮೂರ್ತಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ರಾಷ್ಟ್ರೀಯ ಕಾಂಗ್ರೆಸ್ ನಾಯಕಿ ಸೋನಿಯಾಗಾಂಧಿ ಆದೇಶದಂತೆ ಪ್ರತಿ ಜಿಲ್ಲೆಯಲ್ಲೂ ಕನಿಷ್ಠ 75 ಕಿ.ಮೀ ಪಾದಯಾತ್ರೆ ನಡೆಸಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದೇಶ ಹಾಗೂ ಬಿಜೆಪಿ ದುರಾಡಳಿತದ ಬಗ್ಗೆ ಮನೆ ಮನೆಗೆ ತಿಳಿಸಲು ಪಾದಯಾತ್ರೆ ನಡೆಸಲಾಗುತ್ತಿದೆ. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಎಲ್ಲರೂ ಕೈಜೋಡಿಸುವ ಮೂಲಕ ಭ್ರಷ್ಟ ಬಿಜೆಪಿ ಸರ್ಕಾರ ಕಿತ್ತೊಗೆಯಲು ಪಣ ತೊಡಬೇಕು ಎಂದು ಕೋರಿದರು.

ಪಟ್ಟಣದ ಮುಡಿಗುಂಡ ಸೇತುವೆ ಬಳಿಯಿಂದ ಆರಂಭವಾದ ಪಾದಯಾತ್ರೆಯಲ್ಲಿ ನೂರಾರು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹೆಜ್ಜೆ ಹಾಕುವ ಮೂಲಕ ಕ್ಷೇತ್ರ ಸೇರಿದಂತೆ ನಗರದ ಪ್ರಮುಖ ವಾರ್ಡ್‌ಗಳಲ್ಲಿ ಪಕ್ಷ ಹಾಗೂ ರಾಷ್ಟ್ರ ಧ್ವಜ ಹಿಡಿದು ಸಂಚರಿಸಿದರು. ಮಾಜಿ ಶಾಸಕರಾದ ಎಸ್. ಬಾಲರಾಜು, ಎಸ್.ಜಯಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಂಟೇಶ್, ಮುಖಂಡರಾದ ಡಿಎನ್.ನಟರಾಜು, ಕೆಎಂಎಫ್ ನಿರ್ದೇಶಕ ನಂಜುಂಡಸ್ವಾಮಿ, ಉಪ್ಪಾರ ಅಭಿವೃದ್ಧಿ ನಿಗಮ ಮಾಜಿ ರಾಜ್ಯಾಧ್ಯಕ್ಷ ಮಧುವನಹಳ್ಳಿ ಶಿವಕುಮಾರ್, ಕೊಪ್ಪಾಳಿ ಮಹದೇವ ನಾಯಕ, ನಗರಸಭೆ ಅಧ್ಯಕ್ಷೆ ಸುಶೀಲಾ, ಮಾಜಿ ಸದಸ್ಯ ಮುಡಿಗುಂಡ ಶಾಂತರಾಜು, ಪುಟ್ಟೇಗೌಡ, ಮುಖಂಡ ಅನ್ಸರ್, ಮಾಂಬಳ್ಳಿ ಮೋಹನ್, ಚಿನ್ನಸ್ವಾಮಿ ಮಾಳಿಗೆ ಇನ್ನಿತರರಿದ್ದರು.

ಇಂದು, ನಾಳೆ ಜಿಲ್ಲೆಯಲ್ಲಿ ವೀರ ಸಾವರ್ಕರ್ ರಥಯಾತ್ರೆ

ಚಾಮರಾಜನಗರ, ಆ.24– ಜಿಲ್ಲೆಯಲ್ಲಿ ಆ.25,26ರಂದು ವೀರ ಸಾವರ್ಕರ್ ರಥ ಸಂಚರಿಸಲಿದೆ ಎಂದು ಬಿಜೆಪಿ ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೂರ್ಯಕುಮಾರ್ ತಿಳಿಸಿದರು. ವೀರಸಾವರ್ಕರ್ ಅವರು ದೇಶಕ್ಕೆ ಸಲ್ಲಿಸಿದ ಸೇವೆ ಅಪಾರ. ಇವರು 50 ವರ್ಷಕ್ಕೂ ಹೆಚ್ಚು ಕಾಲ ಸೆರೆವಾಸ ಅನುಭವಿಸಿದ್ದಾರೆ. ಇವರ ವಿಚಾರಧಾರೆಗಳನ್ನು ಪ್ರತಿಯೊಬ್ಬರೂ ತಿಳಿಯುವ ನಿಟ್ಟಿನಲ್ಲಿ ರಾಜ್ಯಾದ್ಯಂತ ರಥಯಾತ್ರೆ ಆಯೋಜಿಸಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಆ.25ರಂದು ಬೇಗೂರಿಗೆ ಆಗಮಿಸುವ ರಥಯಾತ್ರೆಯು, ಬಳಿಕ ಗುಂಡ್ಲುಪೇಟೆ, ತೆರಕಣಾಂಬಿ ಮೂಲಕ ಉಡಿಗಾಲ ತಲುಪಿ ವಾಸ್ತವ್ಯ ಹೂಡಲಿದೆ. 26ರಂದು ಚಾಮರಾಜನಗರಕ್ಕೆ ಆಗಮಿಸಿ ಪ್ರಮುಖ ಬೀದಿಗಳಲ್ಲಿ ಸಂಚರಿಸಲಿದೆ. ನಂತರ ಸಂತೇಮರಹಳ್ಳಿ, ಯಳಂದೂರು, ಕೊಳ್ಳೇಗಾಲ, ಹನೂರು, ಕೌದಳ್ಳಿ ಮೂಲಕ ಸಾಗಿ ರಾಮಾಪುರದಲ್ಲಿ ಸಂಚಾರ ಅಂತ್ಯಗೊಳ್ಳಲಿದೆ. ಪ್ರತಿಯೊಬ್ಬರೂ ರಥಯಾತ್ರೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು. ಆ ಮೂಲಕ ವೀರ ಸಾವರ್ಕರ್‌ಗೆ ಗೌರವ ಸಲ್ಲಿಸಬೇಕು ಎಂದರು.


ಸುದ್ದಿಗೋಷ್ಠಿಯಲ್ಲಿ ಯುವ ಮೋರ್ಚಾ ಮಂಡಲ ಅಧ್ಯಕ್ಷ ಆನಂದ್ ಭಗೀರಥ, ಜಿಲ್ಲಾ ಉಪಾಧ್ಯಕ್ಷ ಶಿವು, ವಿಭಾಗ ಸಂಚಾಲಕ ಅಶ್ವಿನ್ ಇದ್ದರು.

ಕಮಲಮ್ಮ ನಿಧನ



ಚಾಮರಾಜನಗರ, ಆ.24–ತಾಲೂಕಿನ ಆಲೂರು ಹೊಮ್ಮ ಗ್ರಾಮದ ಲೇ.ಮಾರನಾಯಕರ ಪತ್ನಿ ಕಮಲಮ್ಮ (82) ಬುಧವಾರ ಸಂಜೆ ನಿಧನರಾದರು. ಮೃತರು ಐವರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಗ್ರಾಮದ ಮೃತರ ತೋಟದಲ್ಲಿ ಗುರುವಾರ ಮಧ್ಯಾಹ್ನ 12 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.


ರೈಲಿಗೆ ಸಿಲುಕಿ ಯುವಕ ಆತ್ಮಹತ್ಯೆ



ಚಾಮರಾಜನಗರ, ಆ.24– ರೈಲಿಗೆ ಸಿಲುಕಿ ಯುವಕ ನೋರ್ವ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬುಧವಾರ ಸಂಜೆ ತಾಲೂಕಿನ ಬೇಡರಪುರ–ಪಣ್ಯದಹುಂಡಿ ರೈಲ್ವೆ ಮಾರ್ಗದಲ್ಲಿ ನಡೆದಿದೆ.

ತಾಲೂಕಿನ ಬದನಗುಪ್ಪೆ ಗ್ರಾಮದ ರಘು(22) ಆತ್ಮಹತ್ಯೆ ಮಾಡಿಕೊಂಡವರು. ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ. ಬೇಡರಪುರ ಹಾಗೂ ಪಣ್ಯದಹುಂಡಿ ನಡುವಿನ ರೈಲು ಮಾರ್ಗದಲ್ಲಿ ನಗರದಿಂದ ಮೈಸೂರಿಗೆ ತೆರಳುತ್ತಿದ್ದ ರೈಲಿಗೆ ತಲೆಕೊಟ್ಟು ರಘು ಆತ್ಮಹತ್ಯೆ ಶರಣಾಗಿದ್ದಾರೆ. ಸಾವಿಗೂ ಮುನ್ನ ಅವರು ವಾಟ್ಸ್ ಆಪ್ ಸ್ಟೇಟಸ್‌ನಲ್ಲಿ ರಿಪ್ ಮಿ ಎಂದು ಬರೆದುಕೊಂಡಿದ್ದರು ಎಂದು ಸ್ಥಳೀಯರು ತಿಳಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಮೈಸೂರು ರೈಲ್ವೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಇಂದು ಹನೂರಲ್ಲಿ ಕಾಂಗ್ರೆಸ್ ಪಾದಯಾತ್ರೆ



ಹನೂರು, ಆ.24–75ನೇ ಸ್ವಾತಂತ್ರ್ಯ ಅಮೃತಮಹೋತ್ಸವ ಅಂಗವಾಗಿ ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ದೊಡ್ಡಿಂದವಾಡಿ ಗ್ರಾಮದಿಂದ ಹನೂರು ಪಟ್ಟಣದವರಗೆ ಆ.25ರಂದು ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶಾಸಕ ಆರ್.ನರೇಂದ್ರ, ಸ್ವಾತಂತ್ರ್ಯ ಅಮೃತ ಮಹೋತ್ಸವ ಹಿನ್ನೆಲೆ ಪಕ್ಷದ ವರಿಷ್ಠರ ಆದೇಶದಂತೆ ಹನೂರು ಹಾಗೂ ರಾಮಪುರ ಬ್ಲಾಕ್ ಕಾಂಗ್ರೆಸ್‌ನಿಂದ ಪಾದಯಾತ್ರೆಯನ್ನು ದೊಡ್ಡಿಂದವಾಡಿಯಿಂದ ಹನೂರು ಪಟ್ಟಣದವರೆಗೆ ಆಯೋಜಿಸಲಾಗಿದೆ. ಜೊತೆಗೆ ಕೊಡಗಿನಲ್ಲಿ ವಿಪಕ್ಷದ ನಾಯಕ ಸಿದ್ದರಾಮಯ್ಯನವರ ಕಾರಿಗೆ ಮೊಟ್ಟೆ ಎಸೆದಿರುವುದನ್ನು ಖಂಡಿಸಿ ಪ್ರತಿಭಟಿಸಲಾಗುತ್ತಿದೆ. ಪಾದಯಾತ್ರೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಾಜಿ ಸಚಿವ ಚೆಲುವರಾಯಸ್ವಾಮಿ, ಚಾ.ನಗರ ಉಸ್ತುವಾರಿ ಮಂಜುಳಾ ಮಾನಸ, ಶಾಸಕರಾದ ಯತೀಂದ್ರ ಸಿದ್ದರಾಮಯ್ಯ, ಸಿ.ಪುಟ್ಟರಂಗಶೆಟ್ಟಿ, ಮಾಜಿ ಶಾಸಕರಾದ ಎಸ್.ಜಯಣ್ಣ, ಎ.ಆರ್.ಕೃಷ್ಣಮೂರ್ತಿ, ಎಸ್.ಬಾಲರಾಜು, ಕೆಪಿಸಿಸಿ ಸದಸ್ಯರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಪಾಲ್ಗೊಳ್ಳುವರು ಎಂದರು.

ಮೈಸೂರು ನಗರ ಪಾಲಿಕೆಯ ಮಾಮೂಲಿ ಚಾಳಿ!

ದಸರಾ ಸಮೀಪಿಸಿದರೂ ರಸ್ತೆಗಳು ಹೊಂಡಮಯ; ಇನ್ನೂ ಎಚ್ಚೆತ್ತುಕೊಳ್ಳದ ಅಧಿಕಾರಿ ವರ್ಗ





ಮೈಸೂರು, ಆ.24(ಎಸ್‌ಬಿಡಿ)– ಮೈಸೂರು ದಸರಾ ಮಹೋತ್ಸವಕ್ಕೆ ಕೇವಲ ಇನ್ನೊಂದು ತಿಂಗಳು ಬಾಕಿ ಇದ್ದು, ರಸ್ತೆ ದುರಸ್ತಿಗೆ ಮಾತ್ರ ಇನ್ನೂ ಕಾಲ ಕೂಡಿಬಂದಿಲ್ಲ. ಈ ಬಾರಿ ಅತ್ಯಂತ ಅದ್ದೂರಿಯಾಗಿ ದಸರಾ ಆಚರಿಸಲು ಸರ್ಕಾರ ನಿರ್ಧರಿಸಿದೆ. ಮುಖ್ಯಮಂತ್ರಿಗಳಾದಿಯಾಗಿ ಎಲ್ಲಾ ನಾಯಕರ ಹೇಳಿಕೆಗಳು ದಸರಾ ವೈಭವದ ಬಗ್ಗೆ ನಿರೀಕ್ಷೆ ಹೆಚ್ಚಿಸಿವೆ. ಆದರೆ ಛಿದ್ರ ಛಿದ್ರವಾಗಿರುವ ನಗರದ ರಸ್ತೆಗಳ ದುರಸ್ತಿಗೆ ಯಾರೂ ಗಮನಹರಿಸಿಲ್ಲ. ಇನ್ನೊಂದು ತಿಂಗಳಲ್ಲಿ ನವರಾತ್ರಿ ಉತ್ಸವ ಆರಂಭ(ಸೆ.26)ವಾಗಲಿದೆ. ಅದರೆ ಕೆಲವೆಡೆ ತೇಪೆ ಕಾರ್ಯ ಬಿಟ್ಟರೆ ರಸ್ತೆ ಕಾಮಗಾರಿ ಇನ್ನೂ ಆರಂಭವಾಗಿಲ್ಲ. ಈ ಬಾರಿಯೂ ಗಂಡಾ'ಗುಂಡಿ'ಯೊಂದಿಗೆ ದಸರಾ ಆಚರಣೆ ಮಾಡುವುದು ಖಚಿತ ಎಂದು ಸಾರ್ವಜನಿಕರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ತಾತ್ಕಾಲಿಕವಾಗಿ ತೇಪೆ?: ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ನಗರದ ಪ್ರಮುಖ ರಸ್ತೆಗಳ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುವುದು ಎಂದು ಹೇಳಿ ತಿಂಗಳುಗಳೇ ಕಳೆದಿವೆ. ಜನಪ್ರತಿನಿಧಿಗಳು ನಿತ್ಯ ಗುದ್ದಲಿ ಪೂಜೆ ನೆರವೇರಿಸುತ್ತಿದ್ದಾರೆಯೇ ಹೊರತು ಕಾಮಗಾರಿ ಆರಂಭವಾಗಿಲ್ಲ. ತಿಂಗಳ ಹಿಂದೆ ಕಾಮಗಾರಿಗೆ ಮಳೆ ಅಡ್ಡಿಯ ನೆಪ ಹೇಳಲಾಗಿತ್ತು. ಈಗ ಮತ್ತೆ ಮಳೆ ಸುರಿಯುತ್ತಿರುವುದರಿಂದ ಹಳೆಯ ಕಾರಣವೇ ಚಲಾವಣೆಯಾಗಿ ಇನ್ನೂ 10–15 ದಿನ ಕಾಮಗಾರಿ ಮುಂದೂಡಬಹುದು. ಹೀಗಾದರೆ ಹಳೆಯ ಸಂಪ್ರದಾಯದಂತೆ ಈ ಬಾರಿಯೂ ತೇಪೆಯೇ ಗತಿ. ನವರಾತ್ರಿ ಹೊಸ್ತಿಲಲ್ಲಿ ಎಲ್ಲೆಡೆ ತರಾತುರಿಯಿಂದ ರಸ್ತೆ ಗುಂಡಿ ಮುಚ್ಚಿ ನಮ್ಮನ್ನು ಮಂಕು ಮಾಡಬಹುದು ಎಂದು ಕಿಡಿಕಾರಿದ್ದಾರೆ.

ರಾಜಮಾರ್ಗದಲ್ಲೇ ಅಪಾಯ: ಅರಮನೆ ಅಂಗಳದಿಂದ ಬನ್ನಿಮಂಟಪ ದವರೆಗೆ ನಡೆಯುವ ವಿಜಯದಶಮಿ ಮೆರವಣಿಗೆ ದಸರೆಯ ಪ್ರಮುಖ ಆಕರ್ಷಣೆ. ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿ ಪ್ರತಿಷ್ಠಾಪಿತ ಚಿನ್ನದ ಸಂಬಾರಿ ಹೊತ್ತು ಸಾಗುವ 'ಅಭಿಮನ್ಯು', ಆತನೊಂದಿಗೆ ಹೆಜ್ಜೆ ಹಾಕುವ ಗಜಪಡೆ, ಕಲಾ ಪ್ರದರ್ಶನ, ಸ್ತಬ್ಧಚಿತ್ರಗಳನ್ನೊಳಗೊಂಡ ಅತ್ಯಾಕರ್ಷಕ ಮೆರವಣಿಗೆ ಕಣ್ತುಂಬಿಕೊಳ್ಳುವುದೇ ಪುಣ್ಯ. ಆದರೆ ಮೆರವಣಿಗೆ ಸಾಗುವ ರಾಜಮಾರ್ಗವೇ ಅಧ್ವಾನವಾಗಿದೆ. ಹೈವೇ ವೃತ್ತದಲ್ಲಿ



ರಸ್ತೆ ಸಂಪೂರ್ಣ ಹಾಳಾಗಿದೆ. ಈ ಅಪಾಯಕಾರಿ ಗುಂಡಿಗಳಿಂದ ನಿತ್ಯ ಜನ ನೋವು ಅನುಭವಿಸುವಂತಾಗಿದೆ. ಆಗಾಗ್ಗೆ ಈ ವೃತ್ತಕ್ಕೆ ಕೊಳಚೆ ನೀರು ಹರಿದು ಬಂದು ರಾಡಿಯಾಗುತ್ತದೆ. ಹಾಗೆಯೇ ಮಳೆ ಬಂದಾಗಲೆಲ್ಲಾ ತಿಲಕ್‌ನಗರ ಸಿಗ್ನಲ್ ಬಳಿ ಕೆರೆಯಂತಾಗುತ್ತದೆ. ರಘುಲಾಲ್ ಮೆಡಿಕಲ್ಸ್ ಬಳಿಯೂ ಕೊಳಚೆ ನೀರು ರಾಜ ಮಾರ್ಗಕ್ಕೆ ಹರಿದು ಬರುತ್ತದೆ. ಪ್ರಧಾನಿ ಮೋದಿ ಭೇಟಿ ಹಿನ್ನೆಲೆಯಲ್ಲಿ ಅಭಿವೃದ್ಧಿಪಡಿಸಿದ್ದ ರಸ್ತೆಯೂ ನಗರ ಬಸ್ ನಿಲ್ದಾಣದ ಬಳಿ ಕಿತ್ತುಬಂದಿದೆ.

ಜನರ ಹಿಡಿಶಾಪ: ನಗರದ ಪ್ರಮುಖ ರಸ್ತೆಗಳೇ ದುಃಸ್ಥಿತಿಯಲ್ಲಿರುವಾಗ ಬಡಾವಣೆಗಳ ರಸ್ತೆಗಳು ಹೇಗಿರಬೇಕು? ಎಲ್ಲಾ ಬಡಾವಣೆಗಳ ರಸ್ತೆಗಳೂ ಹದಗೆಟ್ಟು ಹೋಗಿವೆ. ದಸರಾ ಮಹೋತ್ಸವದ ಅಂಗವಾಗಿ ವಾರ್ಡ್ ದಸರಾ, ಮನೆ ಮನೆ ದಸರಾ ಇನ್ನಿತರ ಕಾರ್ಯಕ್ರಮಗಳನ್ನು ನಡೆಸುವ ಪದ್ಧತಿ ಇದೆ. ಈ ಬಾರಿ ಇಂತಹ ಕಾರ್ಯಕ್ರಮಗಳನ್ನು ನಡೆಸುವುದಾದರೂ ಹೇಗೆ? ಆ ವೇಳೆ ಜನರ ಪ್ರಶ್ನೆಗಳಿಗೆ ಹೇಗೆ ಉತ್ತರಿಸುವುದು? ಎನ್ನುವ ಚಿಂತೆ ಪಾಲಿಕೆ ಸದಸ್ಯರನ್ನು ಕಾಡುತ್ತಿದೆ. ವಾರ್ಡ್‌ಗಳಲ್ಲಿ ಗುಂಡಿ ಮುಚ್ಚಲು ತಲಾ 10 ಲಕ್ಷ ರೂ. ನೀಡಲಾಗಿತ್ತು. ಆನೆ ಹೊಟ್ಟೆಗೆ ಗಂಜಿ ನೀಡಿದಂತೆ ಆ ಹಣ ಯಾವುದಕ್ಕೂ ಸಾಕಾಗಿಲ್ಲ ಎಂದು ಕಾರ್ಪೊರೇಟರ್‌ಗಳು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.


ಈಗಲಾದರೂ ಮುಂದಾಗಲಿ: ರಸ್ತೆಗಳ ಕಾಮಗಾರಿಗಳ ಗುತ್ತಿಗೆ ನೀಡಲಾಗಿದ್ದು, ಕೇವಲ 15 ದಿನಗಳಲ್ಲಿ ಕಾಮಗಾರಿ ಮುಗಿಸಬಹುದು ಎಂದು ಅಧಿಕಾರಿಯೊಬ್ಬರು ಹೇಳಿದ್ದರು. ಸದ್ಯ ಮಳೆ ಸುರಿಯುತ್ತಿದ್ದು, ಬಿಡುವು ನೀಡಿದ ತಕ್ಷಣವೇ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಬೇಕಿದೆ. ಇನ್ನೂ ವಿಳಂಬ ಮಾಡಿದರೆ 'ಹಬ್ಬ ಮುಗಿದ ಮೇಲೆ ಒಬ್ಬಟ್ಟು ತಟ್ಟಿದಂತೆ' ದಸರಾ ಮುಗಿದ ಮೇಲೆ ಡಾಂಬರೀಕರಣ ಮಾಡಬೇಕಾಗುತ್ತದೆ. ಈ ಬಗ್ಗೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಗಮನಹರಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಕಾಟಾಚಾರದ ಕಾಮಗಾರಿಗಳು: ಹೇಳುವವರು, ಕೇಳುವವರೇ ಇಲ್ಲ!

ಚಾಮರಾಜ ಕ್ಷೇತ್ರ ವ್ಯಾಪ್ತಿಯಲ್ಲಿ ಶಾಸಕ ನಾಗೇಂದ್ರ ಕೋಟ್ಯಾಂತರ ರೂ. ವೆಚ್ಚದ ಚರಂಡಿ, ರಸ್ತೆ ಕಾಮಗಾರಿಗೆ ಚಾಲನೆಯನ್ನೇನೋ ನೀಡಿದ್ದಾರೆ. ಆದರೆ ನಿರ್ವಹಣೆ ಲೋಪದಿಂದ ಕಳಪೆ ಕಾಮಗಾರಿ ನಡೆಯುತ್ತಿದೆ ಎಂಬ ವ್ಯಾಪಕ ದೂರುಗಳು ಕೇಳಿ ಬರುತ್ತಿವೆ. ಮುಖ್ಯ ಗುತ್ತಿಗೆದಾರ ಸಬ್ ಕಂಟ್ರಾಕ್ಟರ್‌ಗಳಿಗೆ ಕಾಮಗಾರಿ ಹಂಚಿದ್ದಾರೆ. ಅವರು ಮೀಟರ್ ಆಧಾರದಲ್ಲಿ ಸಣ್ಣಪುಟ್ಟ ಗುತ್ತಿಗೆದಾರರಿಗೆ ಹರಿದು ಹಂಚಿದ್ದಾರೆಂದು ದೂರಲಾಗುತ್ತಿದ್ದು, ಹೀಗಾಗಿ ಎಲ್ಲೆಡೆ ಕಾಮಗಾರಿ ಅಧ್ವಾನವಾಗಿದೆ. ಯಾರೂ ಕೇಳುವವರು, ಹೇಳುವವರು ಇಲ್ಲದಂತಾಗಿದೆ. ನಗರಪಾಲಿಕೆ 'ಅಭಿವೃದ್ಧಿ ಅಧಿಕಾರಿ' ಹುದ್ದೆಗಳು ಕೇವಲ ಅಲಂಕಾರಿಕವಾಗಿರಬಹುದು ಎಂದು ಜನಪ್ರತಿನಿಧಿಗಳೇ ದೂರುತ್ತಿದ್ದಾರೆ. ಆದರೆ ಕಾಮಗಾರಿ ನಡೆಯುವಲ್ಲಿ ನಿವಾಸಿಗಳು, ಅದರಲ್ಲೂ ಮಹಿಳೆಯರು, ಮಕ್ಕಳು ಓಡಾಡಲು ಆಗದೆ ಹಿಡಿಶಾಪ ಹಾಕುತ್ತಿದ್ದಾರೆ. ಗೊತ್ತುಗುರಿ ಇಲ್ಲದ ಇಂತಹ ಕಾಮಗಾರಿಗಳು ಯಾವಾಗ ಮುಗಿಯುತ್ತವೆಯೋ ಎಂದು ಪರಿತಪಿಸುವಂತಾಗಿದೆ.

ಮೈಸೂರಲ್ಲಿ ಅಬ್ಬರಿಸಿದ ಮಳೆ

ಮೈಸೂರು, ಆ.24(ಎಂಕೆ)– ಮೈಸೂರಿನಲ್ಲಿ ಕೆಲ ದಿನಗಳ ಕಾಲ ಬಿಡುವು ನೀಡಿದ್ದ ಮಳೆ ಮತ್ತೆ ಅಬ್ಬರಿಸಿದೆ. ಬುಧವಾರ ಸುರಿದ ಧಾರಾಕಾರ ಮಳೆಯಿಂದಾಗಿ ಐದಾರು ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿದೆ.



ಸಂಜೆ ಶುರುವಾದ ಮಳೆ ರಾತ್ರಿ 9ರವರೆಗೂ ನಗರದೆಲ್ಲೆಡೆ ಬಿರುಸಾಗಿ ಸುರಿಯಿತು. ಬನ್ನಿಮಂಟಪ, ಹನುಮಂತ ನಗರದಲ್ಲಿ ಐದಾರು ಮನೆಗಳಿಗೆ ನೀರು ನುಗ್ಗಿ ನಿವಾಸಿಗಳು ಪರದಾಡುವಂತಾಗಿದೆ. ನಗರದ ಪ್ರಮುಖ ರಸ್ತೆಗಳು ತುಂಬಿ ಹರಿದ ಪರಿಣಾಮ ವಾಹನ ಸವಾರರು, ಪಾದಚಾರಿಗಳ ಸಂಚಾರಕ್ಕೆ ತೊಂದರೆಯುಂಟಾಯಿತು. ಕೆಲ ಬಡಾವಣೆಗಳಲ್ಲಿ ಗಂಟೆಗೂ ಹೆಚ್ಚು ಕಾಲ ವಿದ್ಯುತ್ ವ್ಯತ್ಯಯ ಉಂಟಾಗಿದ್ದು, ವಿದ್ಯುತ್ ಕಂಬ ಹಾಗೂ ಮರಗಳು ಮುರಿದು ಬಿದ್ದಿರುವ ಕುರಿತು ಯಾವುದೇ ಮಾಹಿತಿ ತಿಳಿದು ಬಂದಿಲ್ಲ ಎಂದು ಪಾಲಿಕೆ ಕಂಟ್ರೋಲ್ ಸಿಬ್ಬಂದಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ದಾದಾಪೀರ್ ಜೈಮನ್, ತಮ್ಮಣ್ಣ ಬೀಗರಾಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ನವದೆಹಲಿ: 2022ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಕಟವಾಗಿದ್ದು, ಈ ಬಾರಿ ಇಬ್ಬರು ಕನ್ನಡಿಗರಿಗೆ ಪ್ರಶಸ್ತಿ ದೊರೆತಿದೆ.

ಕೇಂದ್ರ ಸಾಹಿತ್ಯ ಅಕಾಡೆಮಿ 2022ರ ಯುವ ಸಾಹಿತ್ಯ ಪ್ರಶಸ್ತಿಗೆ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯ ದಾದಾಪೀರ್ ಜೈಮನ್ ಅವರು ಭಾಜನರಾಗಿದ್ದಾರೆ. ಶಿರಸಿ ಸಿದ್ದಾಪುರದ ತಮ್ಮಣ್ಣ ಬೀಗಾರ ಅವರು ಬಾಲ ಸಾಹಿತ್ಯ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.



ದಾದಾಪೀರ್ ಜೈಮನ್



ತಮ್ಮಣ್ಣ ಬೀಗಾರ

ದಾದಾಪೀರ್ ಅವರ 'ನೀಲಕುರಿಂಜಿ' ಕಥಾ ಸಂಕಲನಕ್ಕೆ ಯುವ ಸಾಹಿತ್ಯ ಪ್ರಶಸ್ತಿ ಬಂದಿದ್ದರೆ, ತಮ್ಮಣ್ಣ ಬೀಗಾರ ಅವರ 'ಬಾವಲಿ ಗುಹೆ' ಮಕ್ಕಳ ಕಾದಂಬರಿಗೆ ಬಾಲ ಸಾಹಿತ್ಯ ಪ್ರಶಸ್ತಿ ಸಂದಿದೆ. 'ನೀಲಕುರಿಂಜಿ'ಯನ್ನು ರಾಯಚೂರು ಜಿಲೆಯ ಕೆ. ಗುಡುದಿನ್ನಿಯ ವೈಷ್ಣವಿ ಪ್ರಕಾಶನವು ಪ್ರಕಟಿಸಿದೆ. 'ಬಾವಲಿ ಗುಹೆ'ಯನ್ನು ಬೆಂಗಳೂರಿನ ಅಭಿನವ ಪ್ರಕಾಶನ ಪ್ರಕಟಿಸಿದೆ. ಯುವ ಸಾಹಿತ್ಯ ಪ್ರಶಸ್ತಿಯ ಜ್ಯೂರಿಗಳಾಗಿ ಸ.ಉಷಾ, ನಗರಗೆರೆ ರಮೇಶ್ ಹಾಗೂ ಎನ್.ಎಸ್. ಗುಂಡೂರ ಕೆಲಸ ನಿರ್ವಹಿಸಿದ್ದರೆ, ಬಾಲಸಾಹಿತ್ಯ ಪ್ರಶಸ್ತಿಗೆ ಶಿವಲಿಂಗಪ್ಪ ಹಂದಿಹಾಳು, ಲೋಹಿತ್ ನಾಯ್ಕರ್ ಹಾಗೂ ಎಂ.ಹೆಚ್. ನಾಗರಾಜ್ ಅವರು ಜ್ಯೂರಿಗಳಾಗಿದ್ದರು.

ಮಡಿಕೇರಿ ಚಲೋ, ಬಿಜೆಪಿ ಸಮಾವೇಶ ಮುಂದೂಡಲ್ಪಟ್ಟರೂ ಕೊಡಗಲ್ಲಿ ಕಟ್ಟೆಚ್ಚರ

- ಎಡಿಜಿಪಿ ಅಲೋಕ್‌ಕುಮಾರ್ ನೇತೃತ್ವದಲ್ಲಿ ಭಾರೀ ಬಂದೋಬಸ್ತ್
- ಆ.26ರ ಮಧ್ಯರಾತ್ರಿವರೆಗೆ ಮದ್ಯ ಮಾರಾಟ ನಿಷಿದ್ಧ



ಮಡಿಕೇರಿ,ಆ.24– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕಾರಿನ ಮೇಲೆ ಮೊಟ್ಟೆ ಎಸೆದ ಪ್ರಕರಣವನ್ನು ಖಂಡಿಸಿ ಕಾಂಗ್ರೆಸ್ ಹಮ್ಮಿಕೊಂಡಿದ್ದ ಮಡಿಕೇರಿ ಚಲೋ ಮತ್ತು ಪೂರ್ವ ನಿಗದಿತ ಬಿಜೆಪಿ ಜನಜಾಗೃತಿ ಸಮಾವೇಶವನ್ನು ಮುಂದೂಡಿದ್ದರೂ ಜಿಲ್ಲೆಯಲ್ಲಿ ಒಂದು ರೀತಿಯ ಬಿಗುವಿನ ವಾತಾವರಣವಿದ್ದು, ಬುಧವಾರ ಮುಂಜಾನೆಯಿಂದ 144 ಸೆಕ್ಷನ್‌ನಡಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಅಲ್ಲದೆ ಕಾನೂನು ಮತ್ತು ಸುವ್ಯವಸ್ಥೆ ಎಡಿಜಿಪಿ ಅಲೋಕ್ ಕುಮಾರ್ ಕೊಡಗಿನಲ್ಲಿ ಬೀಡುಬಿಟ್ಟಿದ್ದು, ವಿಪಕ್ಷ ನಾಯಕ ಸಿದ್ದರಾಮಯ್ಯರು ಜಿಲ್ಲೆಗೆ ಭೇಟಿ ನೀಡಿದ ವೇಳೆ ನಡೆದ ಘಟನಾವಳಿಗಳ ಹಿನ್ನೆಲೆಯಲ್ಲಿ ಉಂಟಾಗಿದ್ದ ಅಹಿತಕರ ಬೆಳವಣಿಗೆಗಳ ಅವಲೋಕನ ನಡೆಸುತ್ತಿದ್ದಾರೆ. ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಎಲ್ಲಾ ಪೊಲೀಸ್ ಠಾಣೆಗಳ ವೃತ್ತ ನಿರೀಕ್ಷಕರು, ಡಿವೈಎಸ್‌ಪಿ ಮತ್ತು ಅಧಿಕಾರಿಗಳ ಸಭೆ ನಡೆಸಿದ ಅಲೋಕ್ ಕುಮಾರ್, ಅಹಿತಕರ ಘಟನೆಗಳಿಗೆ ಆಸ್ಪದ ನೀಡದಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಚೆಕ್‌ಪೋಸ್ಟ್‌ಗಳಲ್ಲಿ ಬಿಗಿ ತಪಾಸಣೆ ನಡೆಸಬೇಕು. ಪ್ರವಾಸಿಗರಿಗೆ ತೊಂದರೆಯಾಗದ ರೀತಿಯಲ್ಲಿ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ. ಜಿಲ್ಲೆಯಲ್ಲಿ ಶಾಂತಿ ಕಾಪಾಡಲು 15 ಕೆಎಸ್‌ಆರ್‌ಪಿ ತುಕಡಿಗಳ ಸಾವಿರ ಮಂದಿ ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡಲಾಗಿದೆ.



ಐಜಿಪಿ ಪ್ರವೀಣ್ ಮಧುಕರ್ ಪವಾರ್, ಮೊಟ್ಟೆ ಎಸೆತ ಪ್ರಕರಣ ತನಿಖೆ ನಡೆಸುತ್ತಿರುವ ಅಡಿಷನಲ್ ಎಸ್‌ಪಿ ಸುಂದರ್‌ರಾಜ್ ಮಡಿಕೇರಿಯಲ್ಲೇ ಮೊಕ್ಕಾಂ ಹೂಡಿದ್ದಾರೆ. ಸಾರ್ವಜನಿಕ ಆಸ್ತಿಪಾಸ್ತಿ ಸಹಿತ ಜೀವ ರಕ್ಷಣೆಗೂ ಪೊಲೀಸ್ ಇಲಾಖೆ ಕಟಿಬದ್ಧವಾಗಿದೆ.

ಚೆಕ್‌ಪೋಸ್ಟ್ ತಪಾಸಣೆ: ಕೊಡಗು ಜಿಲ್ಲೆಗೆ ಗಡಿ ಹೊಂದಿಕೊಂಡಿರುವ ಕೊಪ್ಪ, ಕೊಡ್ಲಿಪೇಟೆ, ಕುಟ್ಟ, ಮಾಕುಟ್ಟ, ಸಂಪಾಜೆ, ಕರಿಕೆ ಮತ್ತಿತರ ಕಡೆಗಳಲ್ಲಿ ಈಗಾಗಲೇ ಚೆಕ್‌ಪೋಸ್ಟ್‌ಗಳನ್ನು ತೆರೆದು, ಬಿಗಿ ತಪಾಸಣೆ ನಡೆಸಲಾಗುತ್ತಿದೆ. ಕೊಡಗು ಜಿಲ್ಲೆ ಪ್ರಸಿದ್ಧ ಪ್ರವಾಸಿತಾಣವಾಗಿರುವ ಪಟ್ಟಿಯಲ್ಲಿರುವ ಕಾರಣ ಸ್ಥಳೀಯರು ಹಾಗೂ ಪ್ರವಾಸಿಗರಿಗೆ ತೊಂದರೆಯಾಗದಂತೆ ವಿಶೇಷ ಗಮನ ಹರಿಸಲು ಸೂಚನೆ ನೀಡಲಾಗಿದೆ. ಇದರೊಂದಿಗೆ ಆ.24ರ ಮಧ್ಯ ರಾತ್ರಿ 12 ಗಂಟೆಯಿಂದ ಆ.26ರ ಮಧ್ಯರಾತ್ರಿ 12 ಗಂಟೆಯವರೆಗೆ ಜಿಲ್ಲೆಯಾದ್ಯಂತ ಮದ್ಯ ಮಾರಾಟವನ್ನು ನಿಷೇಧಿಸಲಾಗಿದೆ.

ನಕಲಿ ಅಂಕಪಟ್ಟಿ ಜಾಲ: ಇಬ್ಬರ ಬಂಧನ

ಬೆಂಗಳೂರು: ಶೇಷಾದ್ರಿಪುರಂ ಪೊಲೀಸರು ಡಿಗ್ರಿ ಹಾಗೂ ಪಿಯುಸಿ ಮಾರ್ಕ್ ಕಾರ್ಡ್‌ಗಳನ್ನ ನಕಲಿ ಮಾಡಿ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಆರೋಪಿಗಳನ್ನು, ಅಯೂಬ್ ಪಾಷ ಅಲಿಯಾಸ್ ಅಯೂಬ್ ಹಾಗೂ ಖಲೀಲ್ ವುಲ್ಲಾ ಬೇಗ್ ಅಲಿಯಾಸ್ ಖಲೀಲ್ ಎಂದು ಗುರುತಿಸಲಾಗಿದೆ ಆರೋಪಿಗಳು ನಕಲಿ ಸರ್ಟಿಫಿಕೇಟ್‌ಗಳನ್ನು 10 ರಿಂದ 30 ಸಾವಿರಕ್ಕೆ 10ನೇ ತರಗತಿ, ಪಿಯುಸಿ ಹಾಗೂ ಡಿಗ್ರಿ ಅಂಕಪಟ್ಟಿಗಳನ್ನು ಹೀಗೆ ಮಾರಾಟ ಮಾಡುತಿದ್ದರು ಎನ್ನಲಾಗಿದೆ ಯಾರಿಗೆ ಅವಶ್ಯಕತೆ ಇರುತ್ತೋ ಅವರಿಗೆ ಅಸಲಿ ತಲೆ ಮೇಲೆ ಹೊಡೆದಂತೆ ನಕಲಿ ದಾಖಲೆಗಳ ಸೃಷ್ಟಿಸುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ಮಾರ್ಕ್ಸ್ ಕಾರ್ಡ್ ಜಾಲ ಭೇದಿಸಿದ್ದಾರೆ. ಸದ್ಯ 6 ಮಂದಿ ಮಾರ್ಕ್ ಕಾರ್ಡ್‌ಗಳನ್ನು ಪಡೆದಿರುವ ಫಲಾನುಭವಿಗಳ ಪತ್ತೆ ಮಾಡಿದ್ದಾರೆ. ಮೂಲತಃ ಚಿಕ್ಕಬಳ್ಳಾಪುರದ ಆರೋಪಿಗಳು ಶೇಷಾದ್ರಿಪುರಂ ಠಾಣೆ ವ್ಯಾಪ್ತಿಯಲ್ಲಿ ವಾಸವಾಗಿದ್ದರು. ಸಿಸಿಬಿಯಲ್ಲಿ 2003ರಲ್ಲಿ ಒಂದು ಕೇಸ್ ದಾಖಲಾಗಿತ್ತು. ಇಬ್ಬರನ್ನು ಹೆಚ್ಚಿನ ವಿಚಾರಣೆಗೆ ಪೊಲೀಸರು ಒಳಪಡಿಸಿದ್ದಾರೆ. ಬಂಧಿತರಿಂದ 38 ನಕಲಿ ಅಂಕಪಟ್ಟಿಗಳ ವಶಪಡಿಸಿಕೊಂಡಿದ್ದು, ಸದ್ಯ ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿದ್ದರಾಮಯ್ಯರ ಕಾರಿನ ಮೇಲೆ ಮೊಟ್ಟೆ ಎಸೆತ ಖಂಡಿಸಿ ಮೈಸೂರಲ್ಲಿ ಪ್ರತಿಭಟನೆ

ಮೈಸೂರು,ಆ.24(ಎಂಟಿವೈ)–ಕೊಡಗಿನಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದ ಪ್ರಕರಣ ಖಂಡಿಸಿ, ನಗರ ಕಾಂಗ್ರೆಸ್ ಸಮಿತಿ ಕಾರ್ಯಕರ್ತರು ಮೈಸೂರಿನ ಡಾ.ಅಂಬೇಡ್ಕರ್ (ಎಫ್‌ಟಿಎಸ್) ವೃತ್ತದಲ್ಲಿ ಪ್ರತಿಭಟಿಸಿದರು.

ಬುಧವಾರ ಬೆಳಗ್ಗೆ ವೃತ್ತದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಮುಂದೆ ಪ್ರತಿಭಟನೆ ಆರಂಭಿಸಿದ ಕಾಂಗ್ರೆಸ್ ಕಾರ್ಯಕರ್ತರು, ಬಿಜೆಪಿ ಸರ್ಕಾರ ಹಾಗೂ ಮುಖಂಡರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದ ಆಡಳಿತ ಚುಕ್ಕಾಣಿ ಕೋಮುವಾದಿಗಳ ಕೈಯ್ಯಲ್ಲಿದೆ. ವಿಪಕ್ಷ ನಾಯಕರಾಗಿ ಜನರ ಸಮಸ್ಯೆ ಅರಿಯಲು ಹೋದ ಸಂದರ್ಭದಲ್ಲಿ ಮೊಟ್ಟೆ ಎಸೆದಿರುವುದು ಖಂಡನೀಯ. ಆರ್‌ಎಸ್‌ಎಸ್, ಭಜರಂಗ ದಳದ ಕೈವಾಡದಿಂದ ಈ ಘಟನೆ ನಡೆದಿದೆ. ಈ ರೀತಿಯ ಬೆಳವಣಿಗೆ ಪ್ರಜಾಪ್ರಭುತ್ವ ವಿರೋಧಿ. ವಿಪಕ್ಷ ನಾಯಕರಿಗೇ ರಕ್ಷಣೆ ಇಲ್ಲವೆಂದರೆ ಜನಸಾಮಾನ್ಯರಿಗೆ ಹೇಗೆ ರಕ್ಷಣೆ ಕೊಡಲು ಸಾಧ್ಯ. ರಾಜ್ಯದಲ್ಲಿ ಆಂತರಿಕ



ಭದ್ರತಾ ವ್ಯವಸ್ಥೆ ವಿಫಲವಾಗಿದೆ. ಸರ್ಕಾರ ಕೋಮುವಾದಿ ಪ್ರಚೋದನೆಗೆ ಬೆಂಬಲ ನೀಡುತ್ತಿದೆ. ಹಿಂದೂ–ಮುಸಲ್ಮಾನರಲ್ಲಿ ಧರ್ಮದ ವಿಷ ಬೀಜ ಬಿತ್ತಿ, ಕೋಮು ಸಂಘರ್ಷ ಸೃಷ್ಟಿಸುತ್ತಿದೆ. ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿರುವ ಗೃಹ ಸಚಿವರು ಕೂಡಲೇ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಸಿದ್ದರಾಮಯ್ಯ ಮಾಂಸಾಹಾರ ಸೇವಿಸಿ ದೇವಾಲಯಕ್ಕೆ ಭೇಟಿ ನೀಡಿದ್ದಾರೆಂದು ಸಂಸದ ಪ್ರತಾಪ್ ಸಿಂಹ ಸುಳ್ಳು ಹೇಳುತ್ತಿದ್ದಾರೆ. ಅಂದು ಅವರು ಅಕ್ಕಿರೊಟ್ಟಿ, ಕಡಲೆಕಾಳು ಸಾಂಬಾರ್ ಸೇವಿಸಿ, ದೇವಸ್ಥಾನ ಪ್ರವೇಶ ಮಾಡಿದ್ದರು. ಆಡಳಿತ ವೈಫಲ್ಯ ಹಾಗೂ ಕೊಡಗಿನ ಅತಿವೃಷ್ಟಿ ಹಾನಿಯನ್ನು ಸಮರ್ಪಕವಾಗಿ ನಿರ್ವಹಿಸದಿರುವುದನ್ನು ಮುಚ್ಚಿಕೊಳ್ಳಲು ಈ ರೀತಿಯ ಷಡ್ಯಂತ್ರ ರೂಪಿಸಿದ್ದಾರೆ. ಸಿದ್ದರಾಮಯ್ಯ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುವುದು ಸರಿಯಲ್ಲ. ಪ್ರತಾಪ್‌ಸಿಂಹ ಆರೋಪಗಳನ್ನು ಮಾಡುವ ಬದಲು ಅಭಿವೃದ್ಧಿ ಕಡೆಗೆ ಗಮನ ಹರಿಸಲಿ ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ನಗರ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್, ಅಜೀಜ್ ಸೇಠ್ ಬ್ಲಾಕ್ ಅಧ್ಯಕ್ಷ ಎಕ್ಬಾಲ್, ಎಸ್‌ಸಿ ಘಟಕದ ಉಪಾಧ್ಯಕ್ಷ ಉಮೇಶ್ ಚಂದ್ರ, ಹೆಚ್.ಎಂ.ಅಂಕಯ್ಯ, ವಿಶ್ವರಾಜ್, ಉದಯ್‌ಕುಮಾರ್, ಇರ್ಫಾನ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮೂರನೇ ಪುಟದಿಂದ

ಮೈಸೂರು ಮೇಯರ್

ಮಹಿಳೆ (BCA Women)ಗೆ ಮೀಸಲಾಗಿದೆ. ಅದರಂತೆ ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರು, ಅಧಿಸೂಚನೆ ಹೊರಡಿಸಿ ಚುನಾವಣಾ ವೇಳಾಪಟ್ಟಿ ಪ್ರಕಟಿಸಲಿದ್ದಾರೆ.

ಇದರಿಂದಾಗಿ ಮೈಸೂರಲ್ಲಿ ಮೇಯರ್ ಮತ್ತು ಉಪ ಮೇಯರ್ ಹುದ್ದೆ ಅಲಂಕರಿಸಲು ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳಲ್ಲಿ ರಾಜಕೀಯ ಚಟುವಟಿಕೆಗಳು ಗರಿಗೆದರುತ್ತಿದ್ದು, ಈ ಬಾರಿಯ ದಸರಾ ನಾಡಹಬ್ಬಕ್ಕೆ ಹೊಸ ಮೇಯರ್, ಉಪ ಮೇಯರ್ ಆಯ್ಕೆಯಾಗುವುದು ಖಚಿತವಾಗಿದೆ.

ಐದು ತಿಂಗಳು ವಿಳಂಬ: 2022ರ ಫೆಬ್ರವರಿ 24ಕ್ಕೆ ಮೈಸೂರು ಮಹಾನಗರ ಪಾಲಿಕೆ ಮೇಯರ್ ಸುನಂದಾ ಪಾಲನೇತ್ರ ಹಾಗೂ ಉಪ ಮೇಯರ್ ಅನ್ವರ್ ಬೇಗ್ ಅಧಿಕಾರಾವಧಿ ಮುಕ್ತಾಯವಾಗಿದ್ದು, ಸರ್ಕಾರ ಮೀಸಲಾತಿ ಪ್ರಕಟಿಸುವುದು ವಿಳಂಬವಾಗಿದ್ದರಿಂದಾಗಿ ಹಂಗಾಮಿಯಾಗಿ ಸ್ಥಾನಗಳಲ್ಲಿ ಮುಂದುವರಿಯುತ್ತಿದ್ದಾರೆ.

ಹಾಗಾಗಿ ಅವರು, ನೂತನ ಮೇಯರ್, ಉಪ ಮೇಯರ್ ಆಯ್ಕೆಯಾಗುವವರೆಗೆ ಯಾವುದೇ ಸಭೆ ನಡೆಸುವುದು, ಪ್ರಮುಖ ನಿರ್ಣಯ ಕೈಗೊಳ್ಳುವುದಕ್ಕೆ ಅವಕಾಶವಿರಲಿಲ್ಲ. 2022–23ನೇ ಸಾಲಿನ ಬಜೆಟ್‌ಗೆ ಒಪ್ಪಿಗೆ ಪಡೆಯಬೇಕಾಗಿದ್ದ ಕಾರಣ, ಮುಖ್ಯಮಂತ್ರಿಗಳಿಂದ ವಿಶೇಷ ಅನುಮತಿ ಪಡೆದು, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಏಪ್ರಿಲ್ ತಿಂಗಳಲ್ಲಿ ಬಜೆಟ್ ಸಭೆ ನಡೆಸಿದ್ದರು. ಮೀಸಲಾತಿ ಪ್ರಕಟವಾಗುತ್ತಿದ್ದಂತೆಯೇ ಇದೀಗ ಮೂರೂ ಪಕ್ಷಗಳಲ್ಲಿ ಮೇಯರ್ ಮತ್ತು ಉಪ ಮೇಯರ್‌ಗಾದಿ ಹಿಡಿಯಲು ಆಯಾ ವರ್ಗದ ಪಾಲಿಕೆ ಸದಸ್ಯರು ಬಿರುಸಿನ ರಾಜಕೀಯ ಚಟುವಟಿಕೆ ಆರಂಭಿಸಿದ್ದಾರೆ. ಸದ್ದಿಲ್ಲದೇ ಕೆಲವರು ತಮಗೆ ಅನುಕೂಲವಾಗುವಂತೆ ಮೀಸಲಾತಿ ನಿಗದಿಪಡಿಸಲು ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ಮೂಲಕ ಸರ್ಕಾರದ ಮಟ್ಟದಲ್ಲಿ ತೀವ್ರ ಲಾಬಿ ನಡೆಸಿದ್ದರಲ್ಲದೇ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮೇಲೂ ಒತ್ತಡ ತಂದಿದ್ದನ್ನು ಇಲ್ಲಿ ಸ್ಮರಿಸಬಹುದು. ಮತ್ತೊಂದೆಡೆ 2022ರ ದಸರಾ ಮಹೋತ್ಸವ ಮುಗಿಯುವವರೆಗೆ ಮೈಸೂರು ಮಹಾನಗರ ಪಾಲಿಕೆ ಮೇಯರ್, ಉಪ ಮೇಯರ್ ಸ್ಥಾನಗಳಿಗೆ ಮೀಸಲಾತಿ ಪ್ರಕಟಿಸಬಾರದೆಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮೂಲಕ ಕೆಲವರು ಒತ್ತಡ ಹಾಕಿದ್ದರು ಎಂದು ಮೂಲಗಳು ತಿಳಿಸಿವೆ. ಮಹಾಪೌರರ ಚುನಾವಣೆಗೆ ಮೀಸಲಾತಿ ಪಟ್ಟಿ ಸಿದ್ಧಪಡಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಂಕಿತಕ್ಕೆ ಕಳುಹಿಸುತ್ತಿದ್ದಂತೆಯೇ ಯಡಿಯೂರಪ್ಪ ರಂಗ ಪ್ರವೇಶ ಮಾಡಿದ್ದರಿಂದ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜು ಅವರ ಸ್ಥಿತಿ ಅಡಿಕೆ ಕತ್ತರಿಯಲ್ಲಿ ಸಿಲುಕಿದಂತಾಗಿತ್ತು ಎಂದು ಕೆಲವರು ಹೇಳುತ್ತಿದ್ದರು. ಮೀಸಲಾತಿ ವಿಳಂಬವಾದ ಕಾರಣ ಸುನಂದಾ ಪಾಲನೇತ್ರ ಅವರಿಗೆ 5 ತಿಂಗಳು ಹೆಚ್ಚುವರಿ ಅಧಿಕಾರ ಸಿಕ್ಕಂತಾಗಿದೆ. ಆದರೆ ನಾಡಹಬ್ಬ ದಸರಾ ಮಹೋತ್ಸವ ಮುಗಿಯುವವರೆಗೆ ಅಧಿಕಾರದಲ್ಲಿ ಮುಂದುವರಿಯಲು ಇನ್ನೊಂದು ತಿಂಗಳು ಅವರಿಗೆ ಅವಕಾಶ ನೀಡಬೇಕಾಗಿತ್ತು ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಭಾರೀ ಪೈಪೋಟಿ ಸಾಧ್ಯತೆ....

'ಕೈ' ಹಿಡಿಯಬಹುದೆಂಬ ನಿರೀಕ್ಷೆ ಸುಳ್ಳಾಗಿತ್ತು. ಜೆಡಿಎಸ್ ಸದಸ್ಯರು ಶಾಂತಕುಮಾರಿಗೆ ಬೆಂಬಲ ನೀಡಿದ ಪರಿಣಾಮ ಸುನಂದಾ ಪಾಲನೇತ್ರ ವಿಜಯಿಯಾಗಿದ್ದರು. ಇದಕ್ಕಾಗಿ ಬಿಜೆಪಿ ಹಾಗೂ ಜೆಡಿಎಸ್ ನಡುವೆ ಒಪ್ಪಂದವಾಗಿತ್ತು ಎನ್ನಲಾಗಿದೆಯಾದರೂ ಈವರೆಗೂ ಅಧಿಕೃತವಾಗಿ ಘೋಷಿಸಿಲ್ಲ. ಆದರೂ ಈ ಬಾರಿಯೂ ಬಿಜೆಪಿ–ಜೆಡಿಎಸ್ ಸ್ನೇಹ ಮುಂದುವರೆಯುವ ಸಾಧ್ಯತೆ ಇದ್ದು, ಜೆಡಿಎಸ್ ಮೇಯರ್ ಪಟ್ಟವೇರಬಹುದು ಎನ್ನಲಾಗುತ್ತಿದೆ.

ಅಭ್ಯರ್ಥಿ ಆಯ್ಕೆಯೂ ಜಟಿಲ: ಮೈತ್ರಿ ಯಶಸ್ವಿಯಾಗಿ ಜೆಡಿಎಸ್‌ಗೆ ಮೇಯರ್ ಹಾಗೂ ಬಿಜೆಪಿಗೆ ಉಪಮೇಯರ್ ಎಂದಾದರೆ ಅಭ್ಯರ್ಥಿ ಆಯ್ಕೆಯೂ ಉಭಯ ಪಕ್ಷಗಳಿಗೆ ಜಟಿಲವಾಗುತ್ತದೆ. ಜೆಡಿಎಸ್‌ನಲ್ಲಿ ಕೆ.ವಿ.ಶ್ರೀಧರ್, ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ, ಭಾಗ್ಯ ಮಾದೇಶ್, ಅಶ್ವಿನಿ ಅನಂತು, ಎಂ.ಡಿ.ನಾಗರಾಜ್ ಪ್ರಮುಖ ಆಕಾಂಕ್ಷಿಗಳಾಗಿದ್ದಾರೆ. ಇನ್ನುಳಿದ ಎಲ್ಲಾ ಸದಸ್ಯರೂ ಆಕಾಂಕ್ಷಿಗಳಾಗಬಹುದು. ಇನ್ನು ರಾಜಕೀಯ ಬೆಳವಣಿಗೆಯಲ್ಲಿ ಬಿಜೆಪಿಗೆ ಮತ್ತೆ ಮೇಯರ್ ಸ್ಥಾನ ಲಭಿಸುವಂತಾದರೆ ಶಿವಕುಮಾರ್, ಬಿ.ವಿ.ಮಂಜುನಾಥ್ ಹೆಸರು ಮುಂಚೂಣಿಗೆ ಬರಬಹುದು. ಉಳಿದ ಸದಸ್ಯರೂ ಪ್ರಯತ್ನ ನಡೆಸುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಏನಾದರೂ ಕಾಂಗ್ರೆಸ್ ಮತ್ತೆ ಜೆಡಿಎಸ್‌ನೊಂದಿಗೆ ಬಾಂಧವ್ಯ ಗಿಟ್ಟಿಸಿ ಮೇಯರ್ ಸ್ಥಾನ ಪಡೆದರೆ ಹಿರಿಯ ಸದಸ್ಯೆ ಶಾಂತಕುಮಾರಿ, ಎಂ.ಶಿವಕುಮಾರ್, ರಜನಿ ಅಣ್ಣಯ್ಯ ಪ್ರಬಲ ಆಕಾಂಕ್ಷಿಗಳಾಗಿ ಒತ್ತಡ ತರಬಹುದು.

ಉಪ ಮೇಯರ್‌ಗೂ ಪೈಪೋಟಿ: ಎಲ್ಲಾ ಪಕ್ಷಗಳಲ್ಲೂ ಬಿಸಿಎ ಮಹಿಳೆ ಮೀಸಲಾತಿಗೆ ಒಳಪಡುವ ಹಲವು ಸದಸ್ಯರಿದ್ದಾರೆ. ಬಿಜೆಪಿಯಿಂದ ಗೀತಾ ಯೋಗಾನಂದ, ಚಂಪಕಾ, ಛಾಯಾದೇವಿ, ರೂಪಾ, ಸೌಮ್ಯಾ ಉಮೇಶ್, ಕಾಂಗ್ರೆಸ್‌ನಿಂದ ಪುಟ್ಟನಿಂಗಮ್ಮ, ಹಾಸಿರಾ ಸೀಮಾ, ಶೋಭಾ ಸುನಿಲ್, ಜೆಡಿಎಸ್‌ನಿಂದ ಕೆ.ನಿರ್ಮಲಾ, ರೇಷ್ಮಾಬಾನು ಸೇರಿದಂತೆ ಹಲವು ಸದಸ್ಯರು ಉಪಮೇಯರ್ ಸ್ಥಾನಕ್ಕೆ ಸ್ಪರ್ಧಿಸಲು ಅರ್ಹರಿದ್ದಾರೆ. ಹಾಗಾಗಿ ಉಪ ಮೇಯರ್ ಅಭ್ಯರ್ಥಿಯನ್ನು ಸುಲಭವಾಗಿ ಆಯ್ಕೆ ಮಾಡಲಾಗದು. ಒಟ್ಟಾರೆ ಯಾವ ಪಕ್ಷಗಳು ಮೈತ್ರಿ ಮಾಡಿಕೊಂಡರು, ಯಾವ ಪಕ್ಷಕ್ಕೆ ಮೇಯರ್ ಅಥವಾ ಉಪ ಮೇಯರ್ ಸ್ಥಾನ ಸಿಕ್ಕರೂ ಅಭ್ಯರ್ಥಿ ಆಯ್ಕೆ ಮಾಡುವುದು ದೊಡ್ಡ ಸವಾಲಾಗಿ ಪರಿಣಮಿಸಲಿದೆ. ಎಲ್ಲಾ ಪಕ್ಷಗಳೂ ಆಂತರಿಕ ಅಸಮಾಧಾನವನ್ನು ಶಮನ ಮಾಡಲು ಹರಸಾಹಸ ಮಾಡಬೇಕಾಗುತ್ತದೆ. ಪಕ್ಷಗಳ ದೊಡ್ಡ ನಾಯಕರೇ ಮೇಯರ್ ಚುನಾವಣಾ ಅಖಾಡಕ್ಕಿಳಿದು ಕ್ಷಣ ಕ್ಷಣದ ಬೆಳವಣಿಗೆಯನ್ನೂ ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಸಾರ್ವತ್ರಿಕ ಚುನಾವಣಾ ವರ್ಷವಾಗಿರುವುದರಿಂದ ಮೈಸೂರು ಮಹಾನಗರ ಪಾಲಿಕೆ ಮೇಯರ್ ಚುನಾವಣೆ ಎಲ್ಲಾ ಪಕ್ಷಗಳಿಗೂ ಮಹತ್ವದ್ದಾಗಿದೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಮೂರನೇ ಪುಟದಿಂದ

ಇದು ಅತ್ಯಂತ ಭ್ರಷ್ಟ ಸರ್ಕಾರ

ಯಾರಿಗೂ ರ್‍ಯಾಂಕಿಂಗ್ ಕೊಡೋಕೆ ಆಗಲ್ಲ ಎಂದರು. **ಪ್ರಧಾನಿಗೆ ಪತ್ರ:** ಇದೀಗ ಪ್ರಧಾನಿ ನರೇಂದ್ರ ಮೋದಿಗೆ ಮತ್ತೊಂದು ಪತ್ರ ಬರೆಯಲು ಗುತ್ತಿಗೆದಾರರ ಸಂಘ ಮುಂದಾಗಿದೆ. ಸ್ವಾತಂತ್ರ್ಯ ದಿನಾಚರಣೆ ವೇಳೆ ಭ್ರಷ್ಟಾಚಾರದ ಬಗ್ಗೆ ಪ್ರಧಾನಿ ಮೋದಿ ಪ್ರಸ್ತಾಪಿಸಿದ್ದರು. ದೇಶಕ್ಕೆ ಭ್ರಷ್ಟಾಚಾರ ದೊಡ್ಡ ಮಾರಕ, ಶತ್ರು ಎಂದಿರುವ ಮೋದಿ ಅವರ ಮಾತನ್ನೇ ಉಲ್ಲೇಖಿಸಿ ಅಭಿನಂದನೆ ಪತ್ರ ಬರೆಯಲು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಮುಂದಾಗಿದ್ದಾರೆ. ಗುತ್ತಿಗೆದಾರರು ದೂರು ನೀಡಿ ಒಂದೂವರೆ ವರ್ಷವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ಕೆಂಪಣ್ಣ ಪ್ರಸ್ತಾಪಿಸಲಿದ್ದಾರೆ. ಈ ಮೂಲಕ ಮತ್ತೊಮ್ಮೆ ರಾಜ್ಯ ಸರ್ಕಾರದ ವಿರುದ್ಧದ 40 ಪರ್ಸೆಂಟ್ ಕಮಿಷನ್ ಆರೋಪವನ್ನು ಮತ್ತೆ ಮುಂಚೂಣಿಗೆ ತರಲು ಗುತ್ತಿಗೆದಾರರ ಸಂಘ ಮುಂದಾಗಿದೆ.

ಸಿದ್ದರಾಮಯ್ಯ ಭೇಟಿ: ಈ ಮಧ್ಯೆ, ವಿಪಕ್ಷ ನಾಯಕ ಸಿದ್ದರಾಮಯ್ಯ ಅವರನ್ನೂ ಭೇಟಿ ಮಾಡಿರುವ ಗುತ್ತಿಗೆದಾರರ ಸಂಘದ ನಿಯೋಗ ಚರ್ಚೆ ನಡೆಸಿದೆ. ಸಿದ್ದರಾಮಯ್ಯಗೆ ನಾವು ಎಲ್ಲಾ ಮಾಹಿತಿ ಕೊಟ್ಟಿದ್ದೇವೆ. ಸದನದಲ್ಲಿ ಅದನ್ನು ಪ್ರಸ್ತಾಪಿಸುತ್ತೇನೆ ಎಂದು ಭರವಸೆ ನೀಡಿದ್ದಾರೆ. ಆದರೆ ನಾನು ಯಾವುದೇ ದಾಖಲೆಗಳನ್ನು ಸಿದ್ದರಾಮಯ್ಯಗೆ ಕೊಟ್ಟಿಲ್ಲ. ನ್ಯಾಯಾಂಗ ತನಿಖೆ ಮಾಡಿದರೆ ಮಾತ್ರ ದಾಖಲೆ ಕೊಡುತ್ತೇವೆ. ದಾಖಲೆಯನ್ನು ನಾನು ಬಹಿರಂಗಪಡಿಸಿದರೆ ಗುತ್ತಿಗೆದಾರರಿಗೆ ತೊಂದರೆ ಆಗುತ್ತದೆ ಎಂಬ ಭಯ ಇದೆ ಎಂದರು.

ಲೋಕಾಯುಕ್ತಕ್ಕೆ ದೂರು ನೀಡಿ

ಹೈಕೋರ್ಟ್ ಆದೇಶದ ನಂತರ ಲೋಕಾಯುಕ್ತ ಸಂಸ್ಥೆಗೆ ಪೂರ್ಣ ಅಧಿಕಾರ ನೀಡಲಾಗಿದೆ. ಅದೊಂದು ಸ್ವಾಯತ್ತ ಸಂಸ್ಥೆ. ಇದರಲ್ಲಿ ಯಾರೂ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ. ಪುರಾವೆಗಳಿದ್ದರೆ ದೂರು ನೀಡಿ, ತಪ್ಪಿತಸ್ಥರಾಗಿದ್ದರೆ ಅಂತಹವರಿಗೆ ಶಿಕ್ಷೆ ಖಚಿತ ಎಂದರು. ಕೆಂಪಣ್ಣ ಅವರ ಬಗ್ಗೆ ಕಿಡಿಕಾರಿದ ಮುಖ್ಯಮಂತ್ರಿಗಳು, ಇವರು ಗುತ್ತಿಗೆದಾರರ ಒಂದು ಸಂಘದ ಅಧ್ಯಕ್ಷರು, ಇಂತಹ ಹಲವು ಸಂಘಗಳಿವೆ. ಅವರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ನಂತರ ನೀಡಿರುವ ಹೇಳಿಕೆಗೆ ನಾವು ಏನು ಅನ್ನುವುದು.

ಅವರು ಈಗಾಗಲೇ ನಮ್ಮನ್ನು ಭೇಟಿ ಮಾಡಿ, ಪರ್ಸೆಂಟೇಜ್‌ಗೆ ಕಡಿವಾಣ ಹಾಕುವುದಕ್ಕೆ ಸಂಬಂಧಿಸಿದಂತೆ ನೀಡಿದ ಸಲಹೆಗಳನ್ನು ಜಾರಿಗೆ ತರಲಾಗಿದೆ. ಇನ್ನೂ ಯಾವುದಾದರೂ ಸಲಹೆಗಳಿದ್ದರೆ ನೀಡಲಿ. ಅದನ್ನೂ ಸರಿಪಡಿಸುತ್ತೇವೆ.

ರಾಜಕೀಯ ಪ್ರೇರಿತ, ಉದ್ದೇಶಪೂರ್ವಕವಾಗಿ ಆರೋಪ ಮಾಡಿದರೆ ಅದಕ್ಕೆ ಬೆಲೆ ಇಲ್ಲ. ಅವರ ಬಳಿ ಪುರಾವೆ ಮತ್ತು ದಾಖಲೆಗಳಿದ್ದರೆ, ಈಗ ಎಸಿಬಿ ಮುಂದೆ ಅಲ್ಲ, ಲೋಕಾಯುಕ್ತದ ಮುಂದೆ ದೂರು ನೀಡಲಿ ಎಂದರು. ಈ ಹಿಂದೆ ಗುತ್ತಿಗೆದಾರರಿಂದ ಆರೋಪ ಕೇಳಿ ಬಂದ ನಂತರ, ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಪರಿಶೀಲನಾ ಸಮಿತಿ ರಚಿಸಲಾಗಿದ್ದು ಹೀಗಾಗಿ ಎಲ್ಲಾ ವ್ಯವಹಾರಗಳನ್ನು ಅದು ಪರಿಶೀಲಿಸಲಿದೆ ಎಂದು ವಿವರ ನೀಡಿದರು. ಈ ರೀತಿ ವಿನಾಕಾರಣ ಆರೋಪ ಮಾಡುವ ಬದಲು ನಿರ್ದಿಷ್ಟ ಪ್ರಕರಣಗಳಿದ್ದರೆ ಹೇಳಲಿ, ಅದನ್ನು ಬಿಟ್ಟು ಏನೋ ಹೇಳಿದರೆ ಅದಕ್ಕೆ ತೂಕ ಬರುವುದಿಲ್ಲ ಎಂದರು. ಕಮಿಷನ್ ಆರೋಪ ಕುರಿತು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆಯುವುದಾಗಿ ಗುತ್ತಿಗೆದಾರರ ಸಂಘ ಹೇಳಿರುವ ಕುರಿತು ಪ್ರತಿಕ್ರಿಯಿಸಿದ ಅವರು,ದೇಶದ ಪ್ರಧಾನಮಂತ್ರಿಗಳಿಗೆ ಪತ್ರ ಬರೆಯುವ ಹಕ್ಕು ಪ್ರತಿಯೊಬ್ಬರಿಗೂ ಇದೆ.ಆದರೆ ದೂರು ನೀಡುವಾಗ ಸಾಮಾನ್ಯ ಹೇಳಿಕೆ ಸಾಲದು,ನಿರ್ದಿಷ್ಟ ಪ್ರಕರಣದ ದಾಖಲೆ ಬೇಕು ಎಂದರು.

40% ಅಲ್ಲ 50% ಕಮಿಷನ್ ಸರ್ಕಾರ!

ಪ್ರಧಾನಿಗಳಿಗೆ ಪತ್ರ ಬರೆದು ಒಂದು ವರ್ಷ ಆದರೂ ಅವರೂ ಯಾವುದೇ ಕ್ರಮ ಕೈಗೊಂಡಿಲ್ಲ. ನಾವು ನ್ಯಾಯಾಂಗ ತನಿಖೆ ನಡೆಸುವುದಾದರೆ ದಾಖಲಾತಿ ಕೊಡಲು ತಯಾರಾಗಿದ್ದೇವೆ. ಒಂದು ವೇಳೆ ನಮ್ಮಿಂದ ಇದನ್ನು ಸಾಬೀತು ಮಾಡಲು ಆಗದೆ ಹೋದರೆ ಯಾವುದೇ ರೀತಿಯ ಕಾನೂನು ಕ್ರಮ ಎದುರಿಸಲು ಸಿದ್ಧರಿದ್ದೇವೆ ಎಂದು ಹೇಳಿದ್ದಾರೆ. ನಾನು ಕೂಡ ಹೈಕೋರ್ಟ್‌ನ ಹಾಲಿ ನ್ಯಾಯಾಧೀಶರ

ಉಸ್ತುವಾರಿಯಲ್ಲಿ ನ್ಯಾಯಾಂಗ ತನಿಖೆ ಮಾಡಿ ಎಂದು ಒತ್ತಾಯ ಮಾಡಿದ್ದೆ. ಸರ್ಕಾರ ಇದಕ್ಕೆ ಒಪ್ಪುತ್ತಾ ಇಲ್ಲ. ಭ್ರಷ್ಟಾಚಾರ ಎಲ್ಲಾ ಕಾಲದಲ್ಲೂ ಆಮೆ ವೇಗದಲ್ಲಿ ಇತ್ತು, ಈಗ ಶರವೇಗದಲ್ಲಿ ನಡೆಯುತ್ತಿದೆ ಎಂದು ಗುತ್ತಿಗೆದಾರರ ಸಂಘದವರು ಹೇಳಿದ್ದಾರೆ. ಗುತ್ತಿಗೆದಾರರಿಗೆ ಜಲಸಂಪನ್ಮೂಲ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಹಾಗೂ ಬಿಬಿಎಂಪಿಯಿಂದ ಸುಮಾರು 22,000 ಕೋಟಿಗೂ ಅಧಿಕ ಹಣ ಬಿಡುಗಡೆಯಾಗಬೇಕಿದೆಯಂತೆ. ಈ ಬೃಹತ್ ಬಾಕಿ ಮೊತ್ತವನ್ನು ಆದ್ಯತೆ ಮೇಲೆ ತಕ್ಷಣ ಬಿಡುಗಡೆ ಮಾಡಬೇಕು ಎಂದು ಒತ್ತಾಯ ಮಾಡಿದ್ದಾರೆ. ಇನ್ನೊಂದು ವಿಚಾರವೆಂದರೆ ಅನುದಾನ ಮೀಸಲಿಡದೆ ಟೆಂಡರ್ ಕರೆಯುತ್ತಾರೆ. ಇದರಿಂದ ಕಾಮಗಾರಿ ಹಣ ಬಿಡುಗಡೆ ಆಗುವುದು ಹೇಗೆ ಎಂದು ಅವರು ಪ್ರಶ್ನಿಸಿದ್ದಾರೆ. ನಾವು ಸರ್ಕಾರದ ಮೇಲೆ ನ್ಯಾಯಾಂಗ ತನಿಖೆ ನಡೆಸುವಂತೆ ಒತ್ತಡ ಹಾಕುತ್ತೇವೆ. ಒಂದು ವೇಳೆ ಸರ್ಕಾರ ನಮ್ಮ ಆಗ್ರಹಕ್ಕೆ ಬೆಲೆ ಕೊಡದೆ ಹೋದರೆ ಈ ವಿಚಾರವನ್ನು ಜನರ ಬಳಿಗೆ ತೆಗೆದುಕೊಂಡು ಹೋಗುತ್ತೇವೆ.

ಮುನಿರತ್ನ ಅವರ ಹೆಸರು ಪ್ರಸ್ತಾಪ ಮಾಡಿದ್ದಾರೆ. ಇದರ ಜೊತೆಗೆ ನೀರಾವರಿ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಇಲಾಖೆ, ಬೆಂಗಳೂರು ನಗರಾಭಿವೃದ್ಧಿ ಇಲಾಖೆಗಳಲ್ಲೂ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಅವರು ಹೇಳಿದ್ದಾರೆ.

ನರೇಂದ್ರ ಮೋದಿ ಅವರು ಚುನಾವಣಾ ಭಾಷಣದಲ್ಲಿ ಸಿದ್ದರಾಮಯ್ಯ ಅವರ ಸರ್ಕಾರ 10% ಕಮಿಷನ್ ಸರ್ಕಾರ ಎಂದು ಆರೋಪ ಮಾಡಿದಾಗ ಎಲ್ಲರೂ ಅದಕ್ಕೆ ಪ್ರಚಾರ ನೀಡಿದರು. ಯಾರು ಅವರ ಬಳಿ ದಾಖಲೆ ಕೇಳಿಲ್ಲ. ಈಗ ಗುತ್ತಿಗೆದಾರರ ಸಂಘದವರು ಸರ್ಕಾರದ ಭ್ರಷ್ಟಾಚಾರವನ್ನು ಸಾಬೀತು ಮಾಡಲು ಸಿದ್ಧರಿದ್ದಾರೆ. ತನಿಖೆ ಆಗಬೇಕೋ ಬೇಡವೋ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಮತ್ತೊಮ್ಮೆ ಆಪರೇಷನ್ ಕಮಲ

ವೀರಭದ್ರಯ್ಯ (ಮಧುಗಿರಿ), ಜಿ.ಟಿ.ದೇವೇಗೌಡ(ಚಾಮುಂಡೇಶ್ವರಿ), ಎ.ಟಿ.ರಾಮಸ್ವಾಮಿ (ಅರಕಲಗೂಡು), ವೆಂಕಟರಾವ್ ನಾಡಗೌಡ(ಸಿಂಧನೂರು), ರಾಜ ವೆಂಕಟಪ್ಪನಾಯಕ್ (ಮಾನ್ವಿ), ಕೃಷ್ಣಾರೆಡ್ಡಿ(ಚಿಂತಾಮಣಿ), ಡಾ.ಶ್ರೀನಿವಾಸಮೂರ್ತಿ (ನೆಲಮಂಗಲ), ನಿಸರ್ಗ ನಾರಾಯಣಸ್ವಾಮಿ(ದೇವನಹಳ್ಳಿ) ಸೇರಿದಂತೆ ಬಹುತೇಕ ಹಳೇ ಮೈಸೂರು ಭಾಗದ ಮೈಸೂರು, ಮಂಡ್ಯ, ಹಾಸನ ತುಮಕೂರು, ಬೆಂಗಳೂರು ಜಿಲ್ಲೆಯ 12-13ಕ್ಕೂ ಹೆಚ್ಚು ಜೆಡಿಎಸ್ ಶಾಸಕರಿಗೆ ಬಿಜೆಪಿ ನಾಯಕರು ದುಂಬಾಲು ಬಿದ್ದಿದ್ದಾರೆ.

ಮಾಜಿ ಮುಖ್ಯಮಂತ್ರಿ ಎಚ್ ಡಿ ಕುಮಾರಸ್ವಾಮಿ ಅವರ ವಿರುದ್ಧ ವಚನಭ್ರಷ್ಟತೆಯ ಆರೋಪ ಹೊರಿಸಿ 2008ರಲ್ಲಿ ನಡೆದ ವಿಧಾನ ಚುನಾವಣೆಯಲ್ಲಿ ಬಿಜೆಪಿ ಗಳಿಸಿದ್ದು 110 ಸ್ಥಾನಗಳನ್ನು ಮಾತ್ರ, ಆಗ ಪಕ್ಷೇತರ ಶಾಸಕರ ಬೆಂಬಲದೊಂದಿಗೆ ಅಧಿಕಾರಕ್ಕೆ ಬಂದ ಬಿಜೆಪಿ, ಪಕ್ಷ ಮತ್ತು ಅಧಿಕಾರವನ್ನು ಗಟ್ಟಿ ಮಾಡಲು ಕಾಂಗ್ರೆಸ್, ಜೆಡಿಎಸ್‌ನ 18 ಶಾಸಕರನ್ನು ಆಪರೇಷನ್ ಕಮಲಕ್ಕೆ ಒಳಪಡಿಸಿತ್ತು. ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದ ಬಿಎಸ್ ಯಡಿಯೂರಪ್ಪ ಅವರು ತಮ್ಮ ಸರ್ಕಾರವನ್ನು ಉಳಿಸಿಕೊಳ್ಳಲು ಮೊದಲ ಬಾರಿಗೆ ಆಪರೇಷನ್ ಕಮಲ ನಡೆಸಿದ್ದರು.

2018ರ ವಿಧಾನಸಭೆ ಚುನಾವಣೆಯಲ್ಲಿ ಸರಳ ಬಹುಮತವಾದ 113 ಸ್ಥಾನಗಳು ಗಳಿಸಲು ಬಿಜೆಪಿಗೆ ಸಾಧ್ಯವಾಗಲಿಲ್ಲ. ಗಳಿಸಿದ್ದು 104 ಮಾತ್ರ. ಯಡಿಯೂರಪ್ಪ ಅವರು ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾಗಲು ಮತ್ತೆ ಎರಡನೇ ಬಾರಿಗೆ ಆಪರೇಷನ್ ಕಮಲ ನಡೆಸಬೇಕಾಯಿತು. ಕಾಂಗ್ರೆಸ್ ಮತ್ತು ಜೆಡಿಎಸ್‌ನ 17 ಶಾಸಕರನ್ನು ಆಪರೇಷನ್ ಕಮಲದ ಮೂಲಕ ಬಿಜೆಪಿಗೆ ಸೇರಿಸಿಕೊಂಡು ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿತು.

2023ರ ವಿಧಾನಸಭೆ ಚುನಾವಣೆಯಲ್ಲಿ 113 ಸ್ಥಾನಗಳನ್ನು ಗಳಿಸಲೇಬೇಕು ಎಂದು ಪಣ ತೊಟ್ಟಿರುವ ಬಿಜೆಪಿ ನಾನಾ ತಂತ್ರಗಳನ್ನು ಅನುಸರಿಸುತ್ತಿದೆ. ಅಗತ್ಯವಿರುವ ಸರಳ ಬಹುಮತ ದೊರೆಯುವುದಿಲ್ಲ ಎಂಬುದು ಈಗಾಗಲೇ ನಡೆಸಿರುವ ಸಮೀಕ್ಷೆಗಳ ಮೂಲಕ ಖಾತ್ರಿಯಾಗಿದೆ. ಹೀಗಾಗಿ ಪ್ರಭಾವಿ ಕಾಂಗ್ರೆಸ್-ಜೆಡಿಎಸ್ ಶಾಸಕರನ್ನು ಆಪರೇಷನ್ ಕಮಲಕ್ಕೆ ಒಳಪಡಿಸಲು ಕಾರ್ಯಾಚರಣೆ ನಡೆಸಲಾಗುತ್ತಿದೆ. ಕೇಂದ್ರದ ಬಿಜೆಪಿ ವರಿಷ್ಠರ ನಿರ್ದೇಶನದ ಮೇರೆಗೆ ಸಚಿವರೇ ಈ ಕಾರ್ಯಕ್ಕೆ ಮುಂದಾಗಿದ್ದಾರೆ.

ಹಳೆ ಮೈಸೂರು ಭಾಗದಲ್ಲಿ ಹೆಚ್ಚು ಆಪರೇಷನ್ ಕಮಲ ನಡೆಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಕಾಂಗ್ರೆಸ್ ಮತ್ತು ಜೆಡಿಎಸ್‌ನಲ್ಲಿ ಅಸಮಾದಾನಗೊಂಡಿರುವ ಶಾಸಕರನ್ನು ಗುರುತಿಸಿ ಪ್ರತಿಯೊಬ್ಬರನ್ನು ಪ್ರತ್ಯೇಕವಾಗಿ ಸಂಪರ್ಕಿಸಿ, ತಮ್ಮ ಗುರಿ ಸಾಧನೆಗೆ ಪ್ರಯತ್ನಿಸಲಾಗುತ್ತಿದೆ. ಜೆಡಿಎಸ್ ಕೆಲವು ಶಾಸಕರು ಈ ವಿಚಾರವನ್ನು ತಮ್ಮ ನಾಯಕ ಹೆಚ್.ಡಿ.ಕುಮಾರಸ್ವಾಮಿ ಗಮನಕ್ಕೆ ತಂದಿದ್ದಾರೆ. ಅವರು ಈ ವಿಚಾರ ಗೊತ್ತಿದೆ. ಸುಮ್ಮನಿರಿ ಎಂದು ಹೇಳಿದ್ದಾರೆ. ಇದೇ ರೀತಿ ಕಾಂಗ್ರೆಸ್‌ನಲ್ಲೂ ಕೂಡ ಆಪರೇಷನ್ ಕಮಲ ನಡೆಸಿ, ಖಾತೆ ತೆರೆಯುವ ಗುರಿ ಹಾಕಿಕೊಂಡಿದೆ.

ಸೆ.26ರಂದೇ ಸಿಎಂ ಬೊಮ್ಮಾಯಿ ಚಾಲನೆ

ಎಂದರು. ವಸ್ತುಪ್ರದರ್ಶನ ಆವರಣ ಪ್ಲಾಸ್ಟಿಕ್ ಮುಕ್ತ ವಲಯವೆಂದು ಘೋಷಿಸಲಾಗಿದೆ. ಮಾಹಿತಿ ಕೇಂದ್ರ, ಪೊಲೀಸ್ ಉಪಠಾಣೆ, ಅಗ್ನಿಶಾಮಕ ವಾಹನ ಹಾಗೂ ಪ್ರಥಮ ಚಿಕಿತ್ಸಾ ಘಟಕ ತೆರೆಯುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು. ಈ ಬಾರಿಯ ದಸರಾ ವಸ್ತುಪ್ರದರ್ಶನಕ್ಕೆ ಗ್ಲೋಬಲ್ ಇ-ಟೆಂಡರ್ ಕರೆಯಲಾಗಿದ್ದು, ಮುಂದಿನ ಹತ್ತು ದಿನಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಎ ಮತ್ತು ಬಿ ಬ್ಲಾಕ್ ಮಳಿಗೆಗಳು, ಸಿ ಬ್ಲಾಕ್ ಮಳಿಗೆಗಳು, ತಿಂಡಿ ತಿನಿಸು ಮಳಿಗೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ. ಈ ಬಾರಿ ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ ಮಳಿಗೆಗಳಿರುತ್ತವೆ. ಮನೋರಂಜನಾ ಪಾರ್ಕ್, ಸ್ಕೈಟ್ರ್ಯಾಕ್ ಮಾನೋ ರೈಲು, ದೋಣಿ ವಿಹಾರ ಸೇರಿದಂತೆ ಹಲವು ಮನರಂಜನಾ ತಾಣಗಳಿರುತ್ತವೆ. ವಸ್ತುಪ್ರದರ್ಶನ ಹೇಗಿರಬೇಕು ಎಂಬ ಬಗ್ಗೆ ಇದೇ ಮೊದಲ ಬಾರಿಗೆ ಸಾರ್ವಜನಿಕರಿಂದ ಸಲಹೆ, ಸೂಚನೆಗಳನ್ನು ಆಹ್ವಾನಿಸಿದ್ದು, ಆ.30ರೊಳಗೆ ತಿಳಿಸಬಹುದು ಎಂದರು.

ಅಲ್ಪಸಂಖ್ಯಾತರ ಅಭಿವೃದ್ಧಿಗೆ ಅನುದಾನ ಕೊರತೆ

ಸರ್ಕಾರಕ್ಕೆ ಈ ಸಂಬಂಧ ಮನವರಿಕೆ: ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜ್ಹೀಮ್ ಮಾಹಿತಿ



ಮೈಸೂರು, ಆ.24(ಎಂಕೆ)- ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಸರ್ಕಾರದಿಂದ ಬಿಡುಗಡೆಯಾಗುತ್ತಿದ್ದ ಅನುದಾನದಲ್ಲಿ ಶೇ.50 ಕಡಿಮೆಯಾಗಿದ್ದು, ಕೊರತೆ ಸರಿದೂಗಿಸುವುದು ಸೇರಿದಂತೆ ಹೆಚ್ಚಿನ ಅನುದಾನ ನೀಡುವಂತೆ ಸರ್ಕಾರಕ್ಕೆ ಆಗಾಗ ಶಿಫಾರಸು ಮಾಡಲಾಗುತ್ತಿದೆ ಎಂದು ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜ್ಹೀಮ್ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಅವರು, ಕೊರೊನಾ, ಪ್ರವಾಹದಿಂದಾಗಿ ಅಲ್ಪಸಂಖ್ಯಾತರ ಕುಂದು-ಕೊರತೆಗಳ ಕುರಿತು ಸಭೆ ನಡೆಸಲು ಸಾಧ್ಯವಾಗಿರಲಿಲ್ಲ. ಪೊಲೀಸ್ ಅಧಿಕಾರಿಗಳೊಂದಿಗೆ ಕೋಮು ಸೌಹಾರ್ದತೆ ಹಾಗೂ ಅಲ್ಪಸಂಖ್ಯಾತ ಸಮುದಾಯಗಳ ಮುಖಂಡರೊಂದಿಗೆ ಅಭಿವೃದ್ಧಿ ಕುರಿತು ಸಭೆ ನಡೆಸಿ ಚರ್ಚಿಸಲಾಗಿದೆ. ಅಲ್ಲದೆ ಅಧಿಕಾರಿಗಳಿಗೆ ಅಗತ್ಯ ಸಲಹೆ-ಸೂಚನೆಗಳನ್ನು ನೀಡಲಾಗಿದೆ ಎಂದರು.

ಕೊರೊನಾ ಮತ್ತು ನೆರೆ ಹಾವಳಿ ಹಾಗೂ ಸರ್ಕಾರಕ್ಕೆ ನಿರೀಕ್ಷಿತ ಪ್ರಮಾಣದ ತೆರಿಗೆ ಸಂಗ್ರಹವಾಗದ ಕಾರಣ ಅಲ್ಪಸಂಖ್ಯಾತರ ಆಯೋಗಕ್ಕೆ ಶೇ.50ರಷ್ಟು ಕಡಿಮೆ ಅನುದಾನ ಬಿಡುಗಡೆಯಾಗಿದೆ. ಬಿಡುಗಡೆಯಾದ ಅನುದಾನದ ಶೇ.90ರಷ್ಟನ್ನು ಸದ್ಬಳಕೆ ಮಾಡಿಕೊಳ್ಳಲಾಗಿದೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 1400 ಕೋಟಿ ರೂ., ಅನುದಾನ ಬಿಡುಗಡೆಯಾಗಿತ್ತು. ಈ ಬಾರಿ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಸುಮಾರು 800 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಸುಮಾರು 600 ಕೋಟಿ ರೂ.ಗಳಷ್ಟು ಅನುದಾನ ಕಡಿತವಾಗಿದೆ ಎಂದು ತಿಳಿಸಿದರು.

ಅಲ್ಪಸಂಖ್ಯಾತರ ಪಟ್ಟಿಯಲ್ಲಿ ಕ್ರಿಶ್ಚಿಯನ್, ಮುಸ್ಲಿಂ, ಸಿಖ್, ಬುದ್ಧಿಸ್ಟ್ ಸೇರಿದಂತೆ 6 ಸಮುದಾಯಗಳು ಬರಲಿದ್ದು, ಕ್ರಿಶ್ಚಿಯನ್ ಹಾಗೂ ಜೈನ್ ಸಮುದಾಯದ ಮುಖಂಡರು ಸ್ಮಶಾನದ ಬೇಡಿಕೆ ಇಟ್ಟಿದ್ದಾರೆ. ಈ ಸಂಬಂಧ ಸರ್ವೆ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಲಿದ್ದು, ಸುಮಾರು 5 ಎಕರೆ ಪ್ರದೇಶವನ್ನು ನೀಡುವಂತೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದರು.

ಕೋಮು ಸೌಹಾರ್ದತೆ ಕಾಪಾಡಿ: ಮೈಸೂರು ನಗರ ಹಾಗೂ ಜಿಲ್ಲಾ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದು, ಕೋಮು ಸೌಹಾರ್ದತೆ ಕಾಪಾಡುವಂತೆ ಸೂಚಿಸಿದ್ದೇನೆ. ಅಲ್ಲದೆ ನಾನು ಕೂಡ ಪೊಲೀಸ್ ಅಧಿಕಾರಿಯಾಗಿದ್ದರಿಂದ ನನಗೆ ತಿಳಿದಿರುವ ಕೆಲ ಸಲಹೆಗಳನ್ನು ನೀಡಿದ್ದೇನೆ. ಹಿಂದೂ ಮತ್ತು ಮುಸ್ಲಿಮರಿಬ್ಬರು ಶೇ.50ರಷ್ಟಿದ್ದರೆ ಎಚ್ಚರಿಕೆ ವಹಿಸುವುದು ಅವಶ್ಯವಾಗಿರುತ್ತದೆ. ಆದರೆ, ಒಂದು ಸಮುದಾಯದ ಜನರು ಕಡಿಮೆ ಇದ್ದು, ಮತ್ತೊಂದು ಸಮುದಾಯದ ಜನ ಹೆಚ್ಚಾಗಿದ್ದ ಕಡೆಗಳಲ್ಲಿ ಯಾವುದೇ ಗಲಾಟೆಗಳು ಇರುವುದಿಲ್ಲ. ಅವರೇ ಪರಸ್ಪರ ಅನ್ಯೋನ್ಯವಾಗಿರುತ್ತಾರೆ ಎಂದರು. ಅಲ್ಪಸಂಖ್ಯಾತರ ಆಯೋಗದ ಕಾರ್ಯದರ್ಶಿ ಸಲ್ಮಾ ಫಿರ್ದೋಸ್, ಅಧ್ಯಕ್ಷರ ಆಪ್ತ ಕಾರ್ಯದರ್ಶಿ ನಿಸಾರ್ ಅಹಮ್ಮದ್, ಬಿಜೆಪಿ ಅಲ್ಪಸಂಖ್ಯಾತರ ಘಟಕದ ಮುಖಂಡ ಅನಿಲ್ ಥಾಮಸ್ ಮತ್ತಿತರರು ಉಪಸ್ಥಿತರಿದ್ದರು.

> ಅಲ್ಪಸಂಖ್ಯಾತರು ಬ್ಯಾಂಕುಗಳಲ್ಲಿ ಸಾಲ ಪಡೆಯಲು ಕನಿಷ್ಠ ನಿಗದಿತ ಹಣ ಇರಬೇಕು ಎಂಬ ಕಾರಣ ನೀಡಿ ಸಾಲ ನೀಡಲು ನಿರಾಕರಿಸುತ್ತಿರುವ ವಿಚಾರ ಆಯೋಗದ ಗಮನಕ್ಕೆ ಬಂದಿದ್ದು ಅಂತಹ ಬ್ಯಾಂಕ್‌ಗಳಿಗೆ ನೋಟಿಸ್ ನೀಡಿ ಸಾಲ ನೀಡುವಂತೆ ಸೂಚಿಸಲಾಗಿದೆ. ಪ್ರಧಾನಿ ಮೋದಿ ಅವರೇ ಶೂನ್ಯ ಖಾತೆ ತೆರೆಯಲು ಉತ್ತೇಜನ ನೀಡಿ, ಬಡವರ ಖಾತೆಗೆ ನಾನಾ ಯೋಜನೆ ಹಣ ನೀಡುತ್ತಿರುವುದು ಇವರಿಗೆ ತಿಳಿದಿಲ್ಲವೇ ಇನ್ನೂ ಮುಂದೆ ಇಂತಹ ಕಾರಣ ನೀಡಿ ಸಾಲ ನಿರಾಕರಿಸಬಾರದು. -ಅಬ್ದುಲ್ ಅಜ್ಹೀಮ್

ಕೃಷಿ ಪರಿಕರಗಳ ಕೃತಕ ಅಭಾವ ಸೃಷ್ಟಿಸದಂತೆ ಎಚ್ಚರಿಕೆ



ನಾಗನಹಳ್ಳಿಯಲ್ಲಿರುವ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಕೃಷಿ ಪರಿಕರ ಮಾರಾಟಗಾರರಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರವನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ಡಾ.ಚಂದ್ರಶೇಖರ್ ಉದ್ಘಾಟಿಸಿದರು.

ಮೈಸೂರು, ಆ.24(ಎಂಟಿವೈ)- ರೈತರಿಂದ ರಸಗೊಬ್ಬರ ಸೇರಿದಂತೆ ಕೃಷಿ ಪರಿಕರಗಳ ಕೃತಕ ಅಭಾವ ಸೃಷ್ಟಿಸುತ್ತಿರುವ ಬಗ್ಗೆ ವ್ಯಾಪಕ ದೂರುಗಳು ಕೇಳಿಬರುತ್ತಿದ್ದು, ಇವುಗಳ ಮಾರಾಟಗಾರರು ರೈತಸ್ನೇಹಿಯಾಗಿ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್ ತಾಕೀತು ಮಾಡಿದ್ದಾರೆ.

ಮೈಸೂರು ತಾಲೂಕಿನ ನಾಗನಹಳ್ಳಿಯಲ್ಲಿರುವ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಕೃಷಿ ಇಲಾಖೆ ವತಿಯಿಂದ ಕೃಷಿ ಪರಿಕರ ಮಾರಾಟಗಾರರಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಜಿಲ್ಲೆಯಾದ್ಯಂತ ಈಗಾಗಲೇ ಕೃಷಿ ಚಟುವಟಿಕೆ ಆರಂಭವಾಗಿದೆ. ಕೆಲವು ವರ್ತಕರು ರಸಗೊಬ್ಬರದ ಕೃತಕ ಅಭಾವ ಸೃಷ್ಟಿಸುವ, ನಿಗದಿಗಿಂತ ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಿರುವ ಸಂಬಂಧ ದೂರುಗಳು ಕೇಳಿ ಬರುತ್ತಿವೆ. ಈ ಹಿನ್ನೆಲೆಯಲ್ಲಿ ಕೃಷಿ ಪರಿಕರ ಮಾರಾಟಗಾರರು ರೈತರಿಗೆ ಪೂರಕವಾಗಿ ಸೇವೆ ಒದಗಿಸುವಂತೆ ಸಲಹೆ ನೀಡಿದರು. ಕೃಷಿ ಇಲಾಖೆಯ ನಿಯಮಾನುಸಾರ ನಿಗದಿತ ಬೆಲೆಗೆ ಕೃಷಿ ಪರಿಕರಗಳನ್ನು ಮಾರಾಟ ಮಾಡಬೇಕು. ರೈತರು, ಕೃಷಿ ಅಧಿಕಾರಿಗಳಿಗಿಂತ ಕೃಷಿ ಪರಿಕರಗಳ ಮಾರಾಟಗಾರರೊಂದಿಗೆ ಹೆಚ್ಚಿನ ಸಂಪರ್ಕ ಹೊಂದಿರುತ್ತಾರೆ. ಅಲ್ಲದೆ ವಿಶ್ವಾಸ ಹೊಂದಿ ರುತ್ತಾರೆ. ಆದ್ದರಿಂದ ರಸಗೊಬ್ಬರಗಳ ಕೃತಕ ಅಭಾವ ಸೃಷ್ಟಿಸಬಾರದು. ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಇನ್ನಿತರ ವಸ್ತುಗಳ ಮಾರಾಟದಲ್ಲಿ ರೈತರನ್ನು ವಂಚಿಸಬಾರದು. ಇಂತಹ ದೂರುಗಳು ಮನರಾವರ್ತನೆಯಾದರೆ ಸಂಬಂಧಪಟ್ಟ ಮಾರಾಟಗಾರರ ಮೇಲೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ಜಾಗೃತ ದಳದ ಉಪ ಕೃಷಿ ನಿರ್ದೇಶಕ ಡಾ.ವೆಂಕಟರಮಣಪ್ಪ ಮಾತನಾಡಿದರು.

ಇದೇ ವೇಳೆ ಮೈಸೂರು ಉಪ ವಿಭಾಗದ ಉಪ ಕೃಷಿ ನಿರ್ದೇಶಕ ಡಾ.ಕೆ.ರಾಜು, ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕ ಡಾ.ಜಿ.ಹೆಚ್.ಯೋಗೇಶ್ ಹಾಗೂ ಮೈಸೂರು ತಾಲೂಕಿನ ಸಹಾಯಕ ಕೃಷಿ ನಿರ್ದೇಶಕಿ ಡಾ.ಹೆಚ್.ಬಿ.ಮಧುಲತಾ, ಕೃಷಿ ಪರಿಕರ ಮಾರಾಟಗಾರರಿಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು. ಜಾಗೃತ ದಳದ ಸಹಾಯಕ ಕೃಷಿ ನಿರ್ದೇಶಕ ಕೃಷ್ಣ, ಕೃಷಿ ಅಧಿಕಾರಿಗಳಾದ ಆನಂದ್ ಕುಮಾರ್, ಮಂಜುಳಾ, ಪಿ.ಎನ್.ಜೀವನ್, ಕಾರ್ತಿಕ್, ತಾಂತ್ರಿಕ ವ್ಯವಸ್ಥಾಪಕರಾದ ಎಸ್.ಜೆ.ಹೇಮಂತ್, ರಾಜಲಕ್ಷ್ಮಿ, ಪಲ್ಲವಿ, ಕೃಷಿ ಪರಿಕರ ಮಾರಾಟಗಾರರ ಸಂಘದ ಅಧ್ಯಕ್ಷ ಮಹಂತೇಶಪ್ಪ ತಾಲೂಕಿನ ಬಹುತೇಕ ಕೃಷಿ ಪರಿಕರ ಮಾರಾಟಗಾರರು ಪಾಲ್ಗೊಂಡಿದ್ದರು.

ಆ.27ರಂದು ಗ್ರಾಪಂ ನೌಕರರ ಸಂಘದ ಜಿಲ್ಲಾ ಸಮ್ಮೇಳನ

ಮೈಸೂರು,ಆ.24(ಪಿಎಂ)- ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ (ಸಿಐಟಿಯು ಸಂಯೋಜಿತ ಸಂಘಟನೆ) ಜಿಲ್ಲಾ ಘಟಕದ ವತಿಯಿಂದ ಆ.27ರಂದು ಮೈಸೂರು ಜಿಲ್ಲಾ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಕೆ.ಬಸವರಾಜು ತಿಳಿಸಿದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಟಿ.ನರಸೀಪುರ ತಾಲೂಕು ಮುಡುಕುತೊರೆಯ ಶ್ರೀ ಶಿವರಾತ್ರೀಶ್ವರ ಮಂಗಳ ಮಂಟಪದಲ್ಲಿ ಜಿಲ್ಲಾ ಸಮ್ಮೇಳನ ನಡೆಯಲಿದ್ದು, ಅಂದು ಬೆಳಗ್ಗೆ 11ಕ್ಕೆ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ರಾಮಕೃಷ್ಣ ಜಿಲ್ಲಾ ಸಮ್ಮೇಳನ ಉದ್ಘಾಟಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಮೈಸೂರು ಜಿಪಂ ಉಪ ಕಾರ್ಯದರ್ಶಿ ಡಾ.ಕೃಷ್ಣಂರಾಜು, ಸಂಘದ ರಾಜ್ಯ ಉಪಾಧ್ಯಕ್ಷ ಎಂ.ಬಿ.ನಾಡಗೌಡ, ಟಿ.ನರಸೀಪುರ ತಾಪಂ ಇಒ ಸಿ.ಕೃಷ್ಣ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ.ಜಯರಾಂ, ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಗದೀಶ್ ಸೂರ್ಯ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

> ಸಮ್ಮೇಳನದಲ್ಲಿ ವೇತನ ಹೆಚ್ಚಳ, ಪಿಂಚಣಿ, ಆರೋಗ್ಯ ಸೇವೆ ಮೊದಲಾದ ಸೌಲಭ್ಯಗಳನ್ನು ನೌಕರರಿಗೆ ಕಲ್ಪಿಸಿಕೊಡುವ ಸಂಬಂಧ ಹೋರಾಟದ ರೂಪುರೇಷೆ ಬಗ್ಗೆಯೂ ಚರ್ಚೆಯಾಗಲಿದೆ. ಜೊತೆಗೆ ಜಿಲ್ಲಾ ಘಟಕಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯೂ ನಡೆಯಲಿದೆ.
> -ಕೆ.ಬಸವರಾಜು

ಜಿಲ್ಲಾ ಸಮ್ಮೇಳನಕ್ಕೆ ಪೂರಕವಾಗಿ ಈಗಾಗಲೇ ತಾಲೂಕು ಸಮ್ಮೇಳನ ನಡೆದಿದ್ದು, ಸೆ.3 ಮತ್ತು 4ರಂದು ಚಿತ್ರದುರ್ಗದಲ್ಲಿ ನಡೆಯುವ ರಾಜ್ಯ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಜಿಲ್ಲಾ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಎಲ್ಲಾ ತಾಲೂಕುಗಳಿಂದ 400 ಪ್ರತಿನಿಧಿಗಳು ಜಿಲ್ಲಾ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಸಮ್ಮೇಳನದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಂಘದಿಂದ ನಡೆದ ಚಟುವಟಿಕೆ ಸೇರಿದಂತೆ ಗ್ರಾಪಂ ನೌಕರರು ಎದುರಿಸುತ್ತಿರುವ ಸಮಸ್ಯೆಗಳ ನಿವಾರಣೆ ಬಗ್ಗೆ ಚರ್ಚೆ ನಡೆಯಲಿದೆ ಎಂದರು. ಸಂಘದ ಜಿಲ್ಲಾ ಘಟಕದ ಖಜಾಂಚಿ ಲೋಕೇಶ್, ಮೈಸೂರು ತಾಲೂಕು ಅಧ್ಯಕ್ಷ ವರುಣಾ ನಾಗರಾಜು, ಹೆಚ್‌ಡಿ ಕೋಟೆ ತಾಲೂಕು ಅಧ್ಯಕ್ಷ ಸಿದ್ದನಾಯಕ ಗೋಷ್ಠಿಯಲ್ಲಿದ್ದರು.

ದೇಶದ ಅತೀ ದೊಡ್ಡ ಅಮೃತ ಆಸ್ಪತ್ರೆ ಉದ್ಘಾಟಿಸಿದ ಪ್ರಧಾನಿ ಮೋದಿ

ಚಂಡೀಗಢ: ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ, ಕೇಂದ್ರೀಕೃತ ಸಂಪೂರ್ಣ ಸ್ವಯಂಚಾಲಿತ ಪ್ರಯೋಗಾಲಯ ಸೇರಿದಂತೆ 2,600 ಹಾಸಿಗೆಯುಳ್ಳ ನೂತನ ಆಸ್ಪತ್ರೆಯನ್ನು ಪ್ರಧಾನಿ ನರೇಂದ್ರ ಮೋದಿ ಬುಧವಾರ ಉದ್ಘಾಟಿಸಿದರು. ಹರಿಯಾಣದ ಫರಿದಾಬಾದ್‌ನಲ್ಲಿರುವ ಹೊಸ 'ಅಮೃತ' ಆಸ್ಪತ್ರೆ ದೇಶದ ಅತೀ ದೊಡ್ಡ ಖಾಸಗಿ ಆಸ್ಪತ್ರೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಂದು ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ಹರಿಯಾಣದ ರಾಜ್ಯಪಾಲ ಬಂಡಾರು ದತ್ತಾತ್ರೇಯ ಹಾಗೂ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಉಪಸ್ಥಿತರಿದ್ದರು.






ಈ ವೇಳೆ ಮಾತನಾಡಿದ ಮೋದಿ, ಭಾರತ ಆರೋಗ್ಯ ಹಾಗೂ ಆಧ್ಯಾತ್ಮಿಕತೆಯ ನಿಕಟ ಸಂಬಂಧ ಹೊಂದಿರುವ ದೇಶವಾಗಿದೆ. ಈ ಸಂಬಂಧಕ್ಕೆ ಕೋವಿಡ್-19 ಒಂದು ಅತ್ಯುತ್ತಮ ಉದಾಹರಣೆ. ಇದು ಜನರಲ್ಲಿ ಜಾಗೃತಿ ಮೂಡಿಸಲು ಹಾಗೂ ವಿಶ್ವದ ಅತಿ ದೊಡ್ಡ ಲಸಿಕಾ ಅಭಿಯಾನವನ್ನು ಕಾರ್ಯಗತಗೊಳಿಸಲು ಸಹಾಯ ಮಾಡಿದೆ ಎಂದರು.

ತಂತ್ರಜ್ಞಾನ ಮತ್ತು ಆಧುನೀಕರಣದ ಸಂಯೋಜನೆ ದೇಶದ ಆರೋಗ್ಯ ಕ್ಷೇತ್ರದಲ್ಲಿ ಪ್ರಗತಿಗೆ ಕಾರಣವಾಗಿದೆ. ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರಗಳ ಅಭಿವೃದ್ಧಿಗೆ ಜನರನ್ನು ಮುಂದೆ ತರಲು ಭಾರತ ಪ್ರಯತ್ನಿಸುತ್ತಿದೆ ಎಂದು ತಿಳಿಸಿದರು. **ಆಸ್ಪತ್ರೆ ವಿಶೇಷತೆ:** ಸುಮಾರು 130 ಎಕರೆಯ ವಿಶಾಲವಾದ ಪ್ರದೇಶದಲ್ಲಿ ನಿರ್ಮಿಸಲಾಗಿರುವ ಅತ್ಯಾಧುನಿಕ ಅಮೃತ ಆಸ್ಪತ್ರೆ, 7 ಅಂತಸ್ತಿನ ಸಂಶೋಧನಾ ಬ್ಲಾಕ್ ಅನ್ನು ಹೊಂದಿದೆ. ಮಾತಾ ಅಮೃತಾನಂದಮಯಿ ಟ್ರಸ್ಟ್ ವತಿಯಿಂದ 6 ವರ್ಷಗಳ ಅವಧಿಯಲ್ಲಿ ಈ ಆಸ್ಪತ್ರೆಯನ್ನು ನಿರ್ಮಿಸಲಾಗಿದೆ. ಹೊಸ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 500 ಹಾಸಿಗೆಗಳನ್ನು ಈಗಾಗಲೇ ಬಳಕೆಗೆ ತೆರೆಯಲಾಗಿದೆ. ಮುಂದಿನ 5 ವರ್ಷಗಳಲ್ಲಿ ಹಂತಹಂತವಾಗಿ ಸಂಪೂರ್ಣವಾಗಿ ಕಾರ್ಯನಿರ್ವಹಿಸುವ ನಿರೀಕ್ಷೆಯಿದೆ. ಒಮ್ಮೆ ಸಂಪೂರ್ಣವಾಗಿ ಈ ಆಸ್ಪತ್ರೆ ಕಾರ್ಯನಿರ್ವಹಿಸಲು ಪ್ರಾರಂಭಿಸಿದರೆ, ದೇಶದ ಅತೀ ದೊಡ್ಡ ಖಾಸಗಿ ಆಸ್ಪತ್ರೆಯಾಗ ಲಿದೆ. ಆಸ್ಪತ್ರೆಯ ಕಟ್ಟಡಗಳನ್ನು 36 ಲಕ್ಷ ಚದರ ಅಡಿ ಪ್ರದೇಶದಲ್ಲಿ ನಿರ್ಮಿಸಲಾಗಿದೆ. 14 ಮಹಡಿಗಳುಳ್ಳ ಕಟ್ಟಡದಲ್ಲಿ ಪ್ರಮುಖ ವೈದ್ಯಕೀಯ ಸೌಲಭ್ಯಗಳು ಇವೆ. ಮೇಲ್ಭಾವಣಿಯಲ್ಲಿ ಹೆಲಿಪ್ಯಾಡ್ ಕೂಡ ಇದೆ.

ದೆಹಲಿ-ಮಥುರಾ ರಸ್ತೆಯ ಬಳಿ ಫರಿದಾಬಾದ್‌ನ ಸೆಕ್ಟರ್ 88ರಲ್ಲಿ ಈ ಆಸ್ಪತ್ರೆಯನ್ನು ನಿರ್ಮಿಸಲಾಗಿದ್ದು, ಇದರ ಕ್ಯಾಂಪಸ್‌ನಲ್ಲಿ ವೈದ್ಯಕೀಯ ಕಾಲೇಜು ಕೂಡಾ ಇದೆ. ಕಟ್ಟಡದ 7 ಅಂತಸ್ತಿನಲ್ಲಿ ಸಂಶೋಧನಾ ವಿಭಾಗ, ಗ್ಯಾಸ್ಟ್ರೋ ವಿಜ್ಞಾನ, ಮೂತ್ರಪಿಂಡ ವಿಜ್ಞಾನ, ಮೂಳೆ ರೋಗಗಳು, ಅಪಘಾತ, ಕಸಿ ಮತ್ತು ತಾಯಿ-ಮಗುವಿನ ಆರೈಕೆ ಸೇರಿದಂತೆ 8 ವಿವಿಧ ಕೇಂದ್ರಗಳು ಕ್ಯಾಂಪಸ್‌ನಲ್ಲಿವೆ.

ಆ.31ರಂದು ಮೈಸೂರು ರೋಟರಿ ಉತ್ತರದಿಂದ ಮಾಲಿನ್ಯರಹಿತ ಗಣೇಶ ಮೂರ್ತಿಗಳ ವಿಸರ್ಜನೆ

● ಮೈಸೂರು ನಗರ ವ್ಯಾಪ್ತಿಯಲ್ಲಿ ಐದು ವಾಹನಗಳ ವ್ಯವಸ್ಥೆ ● ಜಲ ಮಾಲಿನ್ಯ ತಡೆ ಜೊತೆಗೆ ಕೆರೆ-ಕಟ್ಟೆಗಳಲ್ಲಿ ವಿಸರ್ಜನೆ ವೇಳೆ ಸಂಭವಿಸಬಹುದಾದ ಅನಾಹುತ ತಡೆಗಟ್ಟುವ ಮಹದುದ್ದೇಶ



ಮೈಸೂರು,ಆ.24(ಪಿಎಂ)- ರೋಟರಿ ಮೈಸೂರು ಉತ್ತರದ ವತಿಯಿಂದ 'ಪರಿಸರ ಉಳಿಸಿ-ಬೆಳೆಸಿ' ಶೀರ್ಷಿಕೆಯಡಿ ಮಣ್ಣಿನ ಗಣೇಶನ ಮೂರ್ತಿ ಪ್ರತಿಷ್ಠಾಪಿಸಲು ಅರಿವು ಮೂಡಿಸಲಾಗುವುದು. ಇದರ ಜೊತೆಗೆ ಆ.31ರ ಗಣೇಶನ ಹಬ್ಬದಂದು ಸಂಜೆ ಸಾರ್ವಜನಿಕರು ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿಗಳನ್ನು ಸ್ವೀಕರಿಸಿ ವಿಸರ್ಜಿಸಲಾಗುವುದು. ಅದಕ್ಕಾಗಿ ವಾಹನಗಳ ವ್ಯವಸ್ಥೆ ಮಾಡಲಾಗುವುದು ಎಂದು ರೋಟರಿ ಜಿಲ್ಲೆ 3181ರ ಗೌರ್ನರ್ ಪ್ರಕಾಶ್ ಎನ್.ಕಾರಂತ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಜಿಲ್ಲಾ ರೋಟರಿ ವತಿಯಿಂದ ಜಲಸಿರಿ, ವನಸಿರಿ, ವಿದ್ಯಾಸಿರಿ ಹಾಗೂ ಆರೋಗ್ಯ ಸಿರಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಅಂತೆಯೇ ರೋಟರಿ ಮೈಸೂರು ಉತ್ತರ ಕೈಗೆತ್ತಿಕೊಂಡಿರುವ ಗಣೇಶ ಮೂರ್ತಿ ವಿಸರ್ಜನೆ ಕಾರ್ಯಕ್ರಮ ಜಲಸಿರಿ ವ್ಯಾಪ್ತಿಗೆ ಬರಲಿದೆ. ಜಲಸಂರಕ್ಷಣೆ ಹಾಗೂ ಮೂರ್ತಿ ವಿಸರ್ಜನೆ ವೇಳೆ ಆಗಬಹುದಾದ ಅನಾಹುತಗಳನ್ನು ತಡೆಗಟ್ಟುವ ಉದ್ದೇಶದಿಂದ ಈ ಕಾರ್ಯಕ್ರಮ ರೂಪಿಸಲಾಗಿದೆ. ಸಾರ್ವಜನಿಕರು ತಾವು ಪ್ರತಿಷ್ಠಾಪಿಸಿದ ಮೂರ್ತಿಗಳನ್ನು ನಮ್ಮ ವಾಹನಗಳಿಗೆ ತಲುಪಿಸಿದರೆ ಜಲಮಾಲಿನ್ಯವಾಗದಂತೆ ವಿಸರ್ಜನೆ ಮಾಡಲಾಗುವುದು ಎಂದರು.

ರೋಟರಿ ಜಿಲ್ಲೆ 3181ರ ವನಸಿರಿ ಕಾರ್ಯಕ್ರಮದ ಕಾರ್ಯಾಧ್ಯಕ್ಷ ಹಾಗೂ ರೋಟರಿ ಮೈಸೂರು ಉತ್ತರದ ಸಮುದಾಯ ಸೇವಾ ನಿರ್ದೇಶಕ ಡಿ.ಬಿ.ರಾಜಶೇಖರ ಮೂರ್ತಿ ಮಾತನಾಡಿ, ರೋಟರಿ ಮೈಸೂರು ಉತ್ತರದ ಅಧ್ಯಕ್ಷ ಎಸ್.ಹೆಚ್.ಜಗದೀಶ್ ಆಸಕ್ತಿ ವಹಿಸಿ ಈ ಕಾರ್ಯಕ್ರಮ ರೂಪಿಸಿದ್ದಾರೆ. ಗಣೇಶ ಹಬ್ಬದಲ್ಲಿ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ವಿಸರ್ಜಿಸುವ ವೇಳೆ ಅನೇಕ ಅನಾಹುತಗಳು ಸಂಭವಿಸುತ್ತಿವೆ. ಜೊತೆಗೆ ಕೆರೆ-ಕಟ್ಟೆಗಳು ಕಲುಷಿತಗೊಳ್ಳುತ್ತಿವೆ. ಇದನ್ನು ತಪ್ಪಿಸುವ ನಿಟ್ಟಿನಲ್ಲಿ ಮೈಸೂರು ನಗರದ ಐದು ವೃತ್ತಗಳಲ್ಲಿ ಐದು ವಾಹನಗಳಲ್ಲಿ (ಟಿಪ್ಪರ್) ಅಂದು ಗಣೇಶ ಮೂರ್ತಿಗಳನ್ನು ಸ್ವೀಕರಿಸಲಾಗುವುದು. ಬಳಿಕ ಜಲಮಾಲಿನ್ಯವಾಗದಂತೆ ಅವುಗಳನ್ನು ವಿಸರ್ಜಿಸಲಾಗುವುದು ಎಂದು ತಿಳಿಸಿದರು.

ಗಣೇಶ ಹಬ್ಬದ ದಿನವಾದ ಆ.31ರಂದು ಸಂಜೆ 4ಕ್ಕೆ ಮೈಸೂರು ನಗರದ ಅಗ್ರಹಾರ ವೃತ್ತ, ವಿವೇಕಾನಂದ ನಗರ ವೃತ್ತ, ಒಂಟಿಕೊಪ್ಪಲಿನ ಮಾತೃಮಂಡಳಿ ವೃತ್ತ, ಸಿದ್ಧಾರ್ಥನಗರದ ಗಣಪತಿ ದೇವಸ್ಥಾನದ ಬಳಿ, ಹೆಬ್ಬಾಳಿನ ಸೂರ್ಯ ಬೇಕರಿ ಬಳಿ ಟಿಪ್ಪರ್‌ಗಳನ್ನು ನಿಲ್ಲಿಸಿ ಮೂರ್ತಿಗಳನ್ನು ಸ್ವೀಕರಿಸಲಾಗುವುದು. ಬಳಿಕ ತೋಟ-ಜಮೀನುಗಳಲ್ಲಿರುವ ಇಂಗುಗುಂಡಿ ಮತ್ತು ಬಾವಿಗಳಲ್ಲಿ ವಿಸರ್ಜನೆ ಮಾಡಲಾಗುವುದು ಎಂದು ವಿವರಿಸಿದರು.

ನಾಳೆ (ಆ.25) ಬೆಳಗ್ಗೆ 8.30ಕ್ಕೆ ಬೋಗಾದಿ ರಿಂಗ್ ರಸ್ತೆಯ ಜಿಎಲ್‌ಎನ್ ಕಲ್ಯಾಣ ಮಂಟಪದಲ್ಲಿ ರೋಟರಿ ಇಂಟರ್ಯಾಕ್ಟ್ ಕ್ಲಬ್‌ನ (ರೋಟರಿ ವಲಯ 6, 7, 8 ಮತ್ತು 9ರ ವ್ಯಾಪ್ತಿಯ ಮಕ್ಕಳು) ಮಕ್ಕಳಿಗೆ ಬಣ್ಣ ಹಾಗೂ ಪಿಒಪಿ ಗಣೇಶ ಮೂರ್ತಿಗಳಿಂದ ಉಂಟಾಗುವ ಮಾಲಿನ್ಯ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಸುಮಾರು 500 ಮಕ್ಕಳು ಪಾಲ್ಗೊಳ್ಳಲಿದ್ದಾರೆ ಎಂದರು. ರೋಟರಿ ಮೈಸೂರು ಉತ್ತರದ ಅಧ್ಯಕ್ಷ ಎಸ್.ಹೆಚ್.ಜಗದೀಶ್, ಕಾರ್ಯದರ್ಶಿ ಕೆ.ಲೋಕನಾಥ್, ವಲಯ ಸೇನಾನಿ ರಾಜಶೇಖರ ಕದಂಬ ಗೋಷ್ಠಿಯಲ್ಲಿದ್ದರು.

ಪ್ರಚಾರ ವಾಹನದ ಮೂಲಕ ಪರಿಸರ ಮಾಲಿನ್ಯದ ಬಗ್ಗೆ ಜಾಗೃತಿ

ವಿಸರ್ಜನೆ ಕಾರ್ಯಕ್ರಮವನ್ನು ಹೆಚ್ಚುವರಿಯಾಗಿ ಇನ್ನು ಎರಡು ದಿನಗಳು ನಡೆಸಲು ಆಲೋಚಿಸಲಾಗುವುದು. ಅಲ್ಲದೆ, ಧ್ವನಿವರ್ಧಕ ಅಳವಡಿಸಿದ ವಾಹನ ಮೂಲಕ ಬಡಾವಣೆಗಳಲ್ಲಿ ಸಂಚರಿಸಿ ಗಣೇಶ ಮೂರ್ತಿಗಳನ್ನು ಸ್ವೀಕರಿಸುವ ಬಗ್ಗೆ ಮಾಹಿತಿ ನೀಡಲಾಗುವುದು. ಜೊತೆಗೆ ಇದೇ ಪ್ರಚಾರ ವಾಹನದ ಮೂಲಕ ಪಿಒಪಿ ಹಾಗೂ ಬಣ್ಣದ ಮೂರ್ತಿಗಳಿಂದ ಉಂಟಾಗುವ ಮಾಲಿನ್ಯದ ಬಗ್ಗೆ ಕರಪತ್ರ ಹಂಚಿ ಅರಿವು ಮೂಡಿಸಲಾಗುವುದು. **-ಹೆಚ್.ಆರ್.ಕೇಶವ್, 2023-24ನೇ ಸಾಲಿನ ರೋಟರಿ 3181ರ ಗೌರ್ನರ್**

ಇಂದಿನಿಂದ ಪಂಚರಾತ್ರೋತ್ಸವ

ಮೈಸೂರು,ಆ.24-ನಗರದ ಅಗ್ರಹಾರದ ಹತ್ತಿರವಿರುವ ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನದಲ್ಲಿ ಇದೇ 25ರಿಂದ 29ರವರೆಗೆ 5 ದಿನಗಳ ಕಾಲ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಸಂಕಲ್ಪದೊಂದಿಗೆ ಶ್ರೀ ಧನ್ವಂತರಿ ಜಯಂತಿ ಪ್ರಯುಕ್ತ ಪಂಚರಾತ್ರೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಆ.25 ಹಾಗೂ 26ರಂದು ಸಂಜೆ 6ರಿಂದ 7ರವರೆಗೆ ಆತನೂರಿನ ಪಂಡಿತ್ ಶ್ರೀ ಭೀಮಸೇನಾಚಾರ್ಯ ಅವರಿಂದ 'ಕೃಷ್ಣನ ಬಾಲಲೀಲೆಗಳು' ಕುರಿತು ವಿಶೇಷ ಪ್ರವಚನ. ಆ.27ರಂದು ಸಂಜೆ 6ರಿಂದ 7ರವರೆಗೆ ಪಂಡಿತ್ ಶ್ರೀ ಶ್ರೀನಿವಾಸಾಚಾರ್ಯ ಕೊರ್ಲಹಳ್ಳಿ ದಂಪತಿಯಿಂದ ವಿಶೇಷ ವೀಣಾವಾದನ. ಆ.28 ಹಾಗೂ 29ರಂದು ಪಂಡಿತ್ ಶ್ರೀ ಕಪಿಲಾಚಾರ್ಯ ಗಲಗಲಿಯವರಿಂದ ವಿಶೇಷ ಪ್ರವಚನ, ಆ.29ರಂದು ಧನ್ವಂತರಿ ಜಯಂತಿ ಪ್ರಯುಕ್ತ ಬೆಳಗ್ಗೆ 8 ಗಂಟೆಗೆ ವಿಶೇಷ ಫಲ ಮಂತ್ರಾಕ್ಷತಾ ಅಭಿಷೇಕ, ಪಂಡಿತರ ಪ್ರವಚನ, 10 ಗಂಟೆಗೆ ಮಹಾ ರಥೋತ್ಸವ, ರಾಜಬೀದಿ ಉತ್ಸವ ನಂತರ ಮಹಾಮಂಗಳಾರತಿ, ಪ್ರಸಾದ ವಿತರಣೆ. ಸಂಜೆ ವಿಟ್ಲಪಿಂಡಿ ಕಾರ್ಯಕ್ರಮ. ಹಾಗೂ ಪ್ರತಿದಿನ ಸಂಜೆ 7ರಿಂದ ಶೇಷ ವಾಹನ ಉತ್ಸವ, ಗಜವಾಹನ ಉತ್ಸವ, ವಾಯು ವಾಹನ ಉತ್ಸವ, ಗರುಡೋತ್ಸವ ಹಾಗೂ ಮಹಾ ರಥೋತ್ಸವವನ್ನು ಏರ್ಪಡಿಸಲಾಗಿದೆ.

ಕಾಂಗ್ರೆಸ್ಸಿನಿಂದ ಅಮೃತ ಮಹೋತ್ಸವ ಪಾದಯಾತ್ರೆ

ನಂಜನಗೂಡಿಗೆ ಸಿದ್ದರಾಮಯ್ಯರಿಂದ 1200 ಕೋಟಿ ರೂ. ಅನುದಾನ; ಹಾಲಿ ಶಾಸಕ, ಸಂಸದರ ಕೊಡುಗೆ ಏನೂ ಇಲ್ಲ: ಮಾಜಿ ಸಂಸದ ಧ್ರುವನಾರಾಯಣ್





ನಂಜನಗೂಡು, ಆ.24– ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ನಂಜನಗೂಡು ಕ್ಷೇತ್ರಕ್ಕೆ 1200 ಕೋಟಿ ರೂ. ಅನುದಾನ ನೀಡಿ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ನೀಡಿದ್ದಾರೆ ಎಂದು ತಿಳಿಸಿದ ಮಾಜಿ ಸಂಸದರೂ ಮತ್ತು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಆರ್. ಧ್ರುವನಾರಾಯಣ್, ಈಗಿನ ಶಾಸಕ ಮತ್ತು ಸಂಸದರ ಕೊಡುಗೆ ಈ ಕ್ಷೇತ್ರಕ್ಕೆ ಏನು ಇಲ್ಲ ಎಂದು ವಾಗ್ದಾಳಿ ನಡೆಸಿದ್ದಾರೆ.

ಪಟ್ಟಣದ ರಾಕ್ಷಸ ಮಂಟಪ ವೃತ್ತದ ಬಳಿ 75ನೇ ಸ್ವಾತಂತ್ರ್ಯ ಮಹೋತ್ಸವ ಅಂಗವಾಗಿ ಕಾಂಗ್ರೆಸ್ ಪಕ್ಷದಿಂದ ಬುಧವಾರ ಏರ್ಪಡಿಸಲಾಗಿದ್ದ ಬೃಹತ್ ಪಾದಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು ಈ ಭಾಗದಲ್ಲಿ ಹಲವು ಯೋಜನೆಗಳಿಗೆ ಸಿದ್ದರಾಮಯ್ಯನವರು ಅನುದಾನ ನೀಡಿದ್ದಾರೆ. ಅವರ ಅನುದಾನವನ್ನು ನಮ್ಮ ಸರ್ಕಾರದ ಅನುದಾನ ಎಂದು ಹೇಳಿಕೊಂಡು ಕ್ಷೇತ್ರ ಸುತ್ತುತ್ತಿದ್ದಾರೆ. ಗ್ರಾಮೀಣ ಪ್ರದೇಶದ ರಸ್ತೆ ಅಭಿವೃದ್ಧಿಗೆ ಹೆಚ್ಚು ಅನುದಾನ ನೀಡಿರುವುದು ಕಾಂಗ್ರೆಸ್ ಸರ್ಕಾರ, ಬಡವರಿಗೆ ಅನ್ನಭಾಗ್ಯ, ಶಾಲಾ ಮಕ್ಕಳಿಗೆ ಕ್ಷೀರಭಾಗ್ಯದಂತಹ ಯೋಜನೆಗಳನ್ನು ಜಾರಿಗೆ ತಂದಿದ್ದು ಕಾಂಗ್ರೆಸ್ ಸರ್ಕಾರ ಎಂದರು.

ಈಗಿನ ಬಿಜೆಪಿ ಸರ್ಕಾರ ದೇಶದ ಜನರ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ. 2 ವರ್ಷ ದೇಶದಲ್ಲಿ ಕೊರೊನಾ ಬಂದು ಜನರು ಸಂಕಷ್ಟದಲ್ಲಿದ್ದರೂ ಜನರು ದಿನನಿತ್ಯ ಬಳಸುವ ವಸ್ತುಗಳ ಬೆಲೆ ಏರಿಕೆ ಮಾಡಿ ಜನರ ಜೀವ ತೆಗೆಯಲು ಮುಂದಾಗಿರುವ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಬೇಕಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಸಚಿವ ಪುಟ್ಟರಂಗಶೆಟ್ಟಿ ಮಾತನಾಡಿ, ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಕಳೆದುಕೊಂಡಿರಬಹುದು. ಆದರೆ ವಿರೋಧ ಪಕ್ಷದಲ್ಲಿ ಇರುವ ನಮ್ಮ ಪಕ್ಷ ಈಗಲೂ ರಾಜ್ಯದ ಜನರ ಪರ ಕೆಲಸ ಮಾಡುತ್ತಿದೆ. ಬಿಜೆಪಿಯ ರಾಜ್ಯ ಮತ್ತು ಕೇಂದ್ರ ಸರ್ಕಾರದ ದುರಾಡಳಿತದ ಬಗ್ಗೆ ರಾಜ್ಯದ ಜನತೆಗೆ ಅರಿವು ಮೂಡಿಸುವ ಕೆಲಸ ನಮ್ಮ ಕಾರ್ಯಕರ್ತರ ಜವಾಬ್ದಾರಿಯಾಗಿದೆ. ದೇಶದಲ್ಲಿ ಜಿಎಸ್‌ಟಿ, ವಿದ್ಯುತ್ ದರ ಏರಿಕೆ, ದಿನಸಿ ಪದಾರ್ಥಗಳು, ಗ್ಯಾಸ್ ಸಿಲಿಂಡರ್, ಪೆಟ್ರೋಲ್, ಡೀಸೆಲ್, ಹಾಲು, ಮೊಸರು ಈ ರೀತಿ ಒಂದೆರಡ ಎಲ್ಲಾ ಪದಾರ್ಥಗಳ ಬೆಲೆ ಏರಿಕೆಯಾಗಿದೆ. ಇದನ್ನೆಲ್ಲಾ ಪ್ರತಿಯೊಬ್ಬರಿಗೂ ತಿಳಿಸಬೇಕು ಕಾಂಗ್ರೆಸ್ ಪಕ್ಷದ ಸಾಧನೆ ಬಗ್ಗೆ ಹೇಳಬೇಕು. ಇದನ್ನೆಲ್ಲಾ ಮಾಡಿದರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿಯುವುದು ಖಚಿತ ಎಂದರಲ್ಲದೆ ಕಾಂಗ್ರೆಸ್ ಪಕ್ಷ ದೇಶ ಉಳಿಸಿದೆ ಬೆಳೆಸಿದೆ ಎಂದರು.

ಈ ಕ್ಷೇತ್ರಕ್ಕೆ ಶಾಸಕ ಮತ್ತು ಸಂಸದರ ಕೊಡುಗೆ ಏನು ಇಲ್ಲ. ಸಿದ್ದರಾಮಯ್ಯನವರು 5 ವರ್ಷ ಮುಖ್ಯಮಂತ್ರಿ ಆಗಿದ್ದಾಗ 1200 ಕೋಟಿ ಬಿಡುಗಡೆ ಮಾಡಿ ಸಿಮೆಂಟ್ ರಸ್ತೆಗಳು ಆಸ್ಪತ್ರೆಗಳು, ಶಾಲೆ ಕಟ್ಟಡಗಳು, ರೈಲ್ವೆ ಸೇತುವೆಗೆ ಹಣ ಬಿಡುಗಡೆ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ ಎಂದರು.

ಶಾಸಕ ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಸಾವರ್ಕರ್ ದೇಶದ್ರೋಹಿ ಮತ್ತು ಹೇಡಿ. ಇವನ ಕೊಡುಗೆ ಸ್ವಾತಂತ್ರ ತರುವಲ್ಲಿ ಶೂನ್ಯ ಬ್ರಿಟಿಷರ ಸರ್ಕಾರಕ್ಕೆ ಬೆಂಬಲಿಸಿದವರು ಇವರ ಹೆಸರು ಹೇಳಿಕೊಂಡು ಬಿಜೆಪಿ ರಾಜಕೀಯ ಮಾಡುತ್ತಿದೆ ಎಂದರು. ಪಾದಯಾತ್ರೆಯಲ್ಲಿ 100 ಅಡಿಗಳ ರಾಷ್ಟ್ರಧ್ವಜವನ್ನೂ ಮೆರವಣಿಗೆ ಮಾಡಿದ್ದು, ಜನರ ಗಮನ ಸೆಳೆಯಿತು.

ಕಾರ್ಯಕ್ರಮದಲ್ಲಿ ಶಾಸಕರಾದ ಅನಿಲ್ ಚಿಕ್ಕಮಾದು, ಡಾ. ತಿಮ್ಮಯ್ಯ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಮುಖಂಡರಾದ ಹೆಚ್.ಸಿ. ಬಸವರಾಜು, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ. ಮಾರುತಿ, ಬ್ಲಾಕ್ ಅಧ್ಯಕ್ಷ ಕುರಹಟ್ಟಿ ಮಹೇಶ್, ನಗರ ಅಧ್ಯಕ್ಷ ಶಂಕರ್, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ನಗರಸಭೆ ಸದಸ್ಯರಾದ ಗಂಗಾಧರ, ಗಾಯತ್ರಿ, ಎಸ್.ಪಿ. ಮಹೇಶ್, ಪ್ರದೀಪ್, ಮುಖಂಡರಾದ ಶಿವಪ್ಪ ದೇವರು, ನಾಗರಾಜು, ಮಂಜುನಾಥ, ಜಿಪಂ ಮಾಜಿ ಸದಸ್ಯ ಶಶಿರೇಖಾ, ಜಿಲ್ಲಾಧ್ಯಕ್ಷ ವಿಜಯ್ ಕುಮಾರ್, ಶ್ರೀಕಂಠನಾಯಕ, ಅಕ್ಬರ್ ಖಾದರ್, ಶ್ರೀನಿವಾಸ್, ಅಶೋಕ್, ಪಿ ಶ್ರೀನಿವಾಸ್, ಶಿವಣ್ಣ, ರಾಜೇಶ್ ಸೇರಿದಂತೆ ನೂರಾರು ಕಾರ್ಯಕರ್ತರು ಹಾಜರಿದ್ದರು. ಇದೇ ವೇಳೆ ಅದ್ದೂರಿ ಸೇಬಿನ ಹಾರ ಹಾಕಿ ಸ್ವಾಗತಿಸಲಾಯಿತು.

ಹೆಚ್.ಡಿ.ಕೋಟೆ: ಸಾವರ್ಕರ್ ರಥಯಾತ್ರೆಗೆ ಸ್ವಾಗತ



ಹೆಚ್.ಡಿ.ಕೋಟೆ, ಆ.24– ಬುಧವಾರ ಪಟ್ಟಣಕ್ಕೆ ಆಗಮಿಸಿದ ವೀರ ಸಾವರ್ಕರ್ ರಥಯಾತ್ರೆಯನ್ನು ವಿಹಾರ ಧಾಮಗಳ ಮತ್ತು ಜಂಗಲ್ ಲಾಡ್ಜ್ ಮಾಜಿ ಅಧ್ಯಕ್ಷ ಅಪ್ಪಣ್ಣ ಅವರು ಪಟ್ಟಣದ ಬಾಪೂಜಿ ಸರ್ಕಲ್‌ನಲ್ಲಿ ಸ್ವಾಗತಿಸಿದರು. ನಂತರ ರಥಯಾತ್ರೆಯು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಸಾಗಿತು. ತಾಲೂಕು ಬಿಜೆಪಿ ಘಟಕದ ಅಧ್ಯಕ್ಷ ಗುರುಸ್ವಾಮಿ, ಮುಖಂಡರುಗಳಾದ ಮೊತ್ತ ಬಸವರಾಜಪ್ಪ, ಶಂಕರೇಗೌಡ, ನಂದೀಶ್, ಸತೀಶ್, ನಾಗರಾಜ್, ಮಂಜು, ಶಿವಸ್ವಾಮಿ, ಯೋಗೇಶ್, ಮಹೇಶ, ಮಾದೇಶ, ಚಂದ್ರಮೌಳಿ, ವಿನಯ್, ಲೋಕೇಶ್, ಕೆಂಡಗಣ್ಣ ಸ್ವಾಮಿ, ರಾಜು, ರವಿ ಇನ್ನು ಮುಂತಾದವರು ಇದ್ದರು.

ಜೆಡಿಎಸ್‌ಗೆ ನೇಮಕ



ತಿ.ನರಸೀಪುರ, ಆ.24– ವರುಣಾ ವಿಧಾನಸಭಾ ಕ್ಷೇತ್ರದ ಜಾತ್ಯತೀತ ಜನತಾ ದಳದ ರೈತ ವಿಭಾಗದ ಅಧ್ಯಕ್ಷರನ್ನಾಗಿ ಅಲಗೂಡು ಮಲ್ಲೇಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷ ತಿರುಮಕೂಡಲು ಜಯರಾಮ್ ತಿಳಿಸಿದ್ದಾರೆ

ಮೊಟ್ಟೆ ಎಸೆತ ಖಂಡಿಸಿ ಮೇಗಳಾಪುರ, ವರುಣಾದಲ್ಲಿ ಕಾಂಗ್ರೆಸ್ ರಸ್ತೆ ತಡೆ



ಸುತ್ತೂರು, ಆ.24– ಕೊಡಗಿನಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕಾರಿನ ಮೇಲೆ ಮೊಟ್ಟೆ ಎಸೆದು, ಕಪ್ಪು ಬಾವುಟ ಪ್ರದರ್ಶಿಸಿದ್ದನ್ನು ಖಂಡಿಸಿ ವರುಣಾ ಕ್ಷೇತ್ರದ ಮೇಗಳಾಪುರ ಹಾಗೂ ವರುಣಾ ಗ್ರಾಮದ ಬಳಿ ಕಾಂಗ್ರೆಸ್ ಕಾರ್ಯಕರ್ತರು ಒಂದು ಗಂಟೆಗಳ ಕಾಲ ರಸ್ತೆ ತಡೆದು ಪ್ರತಿಭಟಿಸಿದರು.

ಈ ಸಂದರ್ಭದಲ್ಲಿ ಮುಖಂಡರು ಮಾತನಾಡಿ, ಸಿದ್ದರಾಮಯ್ಯ ಅಂಥವರ ಕಾರಿನ ಮೇಲೆ ಮೊಟ್ಟೆ ಎಸೆದು ಕಪ್ಪು ಬಾವುಟ ಪ್ರದರ್ಶಿಸಿರುವುದು ಕೀಳುಮಟ್ಟದ ರಾಜಕೀಯ. ಇದರಿಂದ ರಾಜ್ಯ ಮತ್ತು ರಾಷ್ಟ್ರಕ್ಕೆ ಅಪಮಾನ ಮಾಡಿದಂತಾಗಿದೆ. ಇಂಥವರನ್ನು ಕೂಡಲೇ ಸರ್ಕಾರ ಬಂಧಿಸಿ. ಕ್ರಮ ಕೈಗೊಂಡು. ನ್ಯಾಯಾಲಯಕ್ಕೆ ಒಪ್ಪಿಸಬೇಕು. ಇಂಥ ನೀಚ. ಕೆಲಸದಿಂದ ಸರ್ಕಾರ ಕೂಡಲೇ ಎಚ್ಚೆತ್ತುಕೊಳ್ಳಬೇಕು ಎಂದು ಆಗ್ರಹಿಸಿದರಲ್ಲದೆ, ನೀಚ ಸರ್ಕಾರ, ನೀಚ ಮುಖ್ಯಮಂತ್ರಿ, ನೀಚ ಗೃಹ ಮಂತ್ರಿ ಎಂದು ಘೋಷಣೆ ಕೂಗಿದರು.

ಈ ಪ್ರತಿಭಟನೆಗಳಲ್ಲಿ ಮೈಸೂರು ಎಪಿಎಂಸಿ ಸದಸ್ಯ ಸಿದ್ದರಾಮ, ಬಸವರಾಜು, ವರುಣಾ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ರಾಯನಹುಂಡಿ ರವಿ, ಸಿದ್ದರಾಮನ ಹುಂಡಿ ಗ್ರಾಪಂ ಅಧ್ಯಕ್ಷ ಚಂದ್ರಶೇಖರ್, ತಾಪಂ ಸದಸ್ಯ ಮಹೇಂದ್ರ, ವರ್ಕೋಡು ಉಮೇಶ್, ಜಿಪಂ ಮಾಜಿ ಸದಸ್ಯ ಕೆಂಪಯ್ಯ, ರೂಪೇಶ್, ವರುಣಾ ಗ್ರಾಪಂ ಮಾಜಿ ಅಧ್ಯಕ್ಷ ಚಿಕ್ಕದೇವಯ್ಯ, ತಾಪಂ ಸದಸ್ಯ ಚೋರನಹಳ್ಳಿ ರಾಜು, ಲಲಿತಾದ್ರಿಪುರ ಬಸವರಾಜು, ಸಿದ್ದರಾಮ, ಟಿ ನರಸೀಪುರ ಸೋಮು, ಬುಗತಗಳ್ಳಿ ಮಣಿಯಯ್ಯ, ರಂಗನಾಥಪುರ, ತಾಪಂ ಸದಸ್ಯ ಪುಟ್ಟಣ್ಣ ಸೇರಿದಂತೆ ವರುಣಾ ಕ್ಷೇತ್ರದ ನೂರಾರು ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಮೇಗಳಾಪುರ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಎಲ್. ಸುಷ್ಮಾ ನೇತೃತ್ವದಲ್ಲಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಉಚಿತ ಸಮೃದ್ಧಿಯ ಆಶೀರ್ವಾದ-ಮಂತ್ರ ಧ್ವನಿ ಸಮ್ಮೋಹನ ಚಿಕಿತ್ಸಾ ಧ್ಯಾನ ಶಿಬಿರ

ಮೈಸೂರು,ಆ.24–ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಗುರುಕೃಪಾ ಧ್ಯಾನ ಕೇಂದ್ರದಲ್ಲಿ ಆ.26ರಂದು ರಾತ್ರಿ 9 ಗಂಟೆಗೆ ಆನ್‌ಲೈನ್ ಜೂಮ್ ಮೂಲಕ ಸಮೃದ್ಧಿಯ ಆಶೀರ್ವಾದ (Abundance Blessings)–ಮಂತ್ರ ಧ್ವನಿ ಸಮ್ಮೋಹನ ಚಿಕಿತ್ಸಾ ಧ್ಯಾನ ಶಿಬಿರವನ್ನು ಆಯೋಜಿಸಲಾಗಿದೆ. ಆಸಕ್ತರು ಈ ಧ್ಯಾನವನ್ನು ಸದುಪಯೋಗ ಪಡಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9141758569.

ಪಿಹೆಚ್‌ಡಿ ಪದವಿ



ಮೈಸೂರು: ಡಾ. ರೇಚ್ಚಣ್ಣ ಅವರ ಮಾರ್ಗದರ್ಶನದಲ್ಲಿ ಸುರೇಖಾ ಸುಭಾಸ ಪಾಟೀಲ ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರ ಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವ ವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸರಗೂರಲ್ಲಿ ಸಾವರ್ಕರ್ ರಥಯಾತ್ರೆಗೆ ಅದ್ದೂರಿ ಸ್ವಾಗತ



ಸರಗೂರು, ಆ.24– ಪಟ್ಟಣದಲ್ಲಿ ಸಾವರ್ಕರ್ ರಥಯಾತ್ರೆಗೆ ಅದ್ದೂರಿ ಸ್ವಾಗತ ಕೋರಲಾಯಿತು. ಮೈಸೂರಿನಿಂದ ಹೊರಟು ಜಿಲ್ಲೆಯಾದ್ಯಂತ ಪ್ರವಾಸ ಕೈಗೊಂಡಿರುವ ರಥಯಾತ್ರೆ ಬುಧವಾರ ಸರಗೂರು ಪಟ್ಟಣ ತಲುಪಿತು. ಈ ವೇಳೆ ವೀರಸಾವರ್ಕರ್ ಪರವಾಗಿ ಜೈಕಾರ ಘೋಷಣೆ ಮೊಳಗಿತು.

ಸಾವರ್ಕರ್ ದೇಶಕ್ಕಾಗಿ 10 ವರ್ಷ ಗಳ ಜೈಲಿನಲ್ಲಿದ್ದರು. ಅಂಥ ಮಹಾನ್ ನಾಯಕರ ಹಾದಿ ಯಲ್ಲಿ ಸಾಗುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಬಿಜೆಪಿ ಮುಖಂಡ ಡಾ.ಎಚ್.ವಿ. ಕೃಷ್ಣಸ್ವಾಮಿ ತಿಳಿಸಿದರು. ಪಟ್ಟಣದ ಕೆಇಬಿ ಕಚೇರಿ ಮುಂಭಾಗದಲ್ಲಿ ಸಾವರ್ಕರ್ ರಥಯಾತ್ರೆಯನ್ನು ಸ್ವಾಗತಿಸಿ ಮಾತನಾಡಿದ ಅವರ, ಸಾವರ್ಕರ್ ಒಬ್ಬ ಹುಟ್ಟು ಹೋರಾಟಗಾರ. ದೇಶಕ್ಕಾಗಿ ಹೋರಾಡಿದ ಮಹಾನ್ ನಾಯಕರಲ್ಲಿ ಇವರೂ ಒಬ್ಬರು. ಇಂಥವರ ಹೆಸರಿನಲ್ಲಿ ರಾಜಕೀಯ ಮಾಡಬಾರದು ಎಂದು ಹೇಳಿದರು.

ಸಾವರ್ಕರ್ ಹೆಸರಿಗೆ ಮಸಿ ಬಳಿಯುವ ಕೆಲಸವನ್ನು ಯಾರೂ ಮಾಡಬಾರದು. ಅದು ಅಪರಾಧವೂ ಹೌದು. ರಾಜಕಾರಣಕ್ಕಾಗಿ ವೀರ ಸಾವರ್ಕರ್ ಅವರನ್ನು ಎಂದಿಗೂ ವಿರೋಧಿಸಬಾರದು. ಇಂದಿನ ಯುವ ಪೀಳಿಗೆ ಎಚ್ಚೆತ್ತುಕೊಂಡು ದೇಶಾಭಿಮಾನಿಗಳ ಆದರ್ಶಗಳನ್ನು ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ತಾಲ್ಲೂಕು ವಿಶ್ವ ಹಿಂದೂ ಪರಿಷತ್ ಸಂಚಾಲಕ ರವಿಕುಮಾರ್ ಮಾತನಾಡಿದರು, ಪಟ್ಟನ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ರಥಕ್ಕೆ ಪುಷ್ಪನಮನ ಸಲ್ಲಿದರು. ಉಪಾಧ್ಯಕ್ಷ ವಿನಯ್ ಪ್ರಸಾದ್, ಸದಸ್ಯರಾದ ನೂರಾಳಸ್ವಾಮಿ, ವೀರೇಶ್, ಮುಖಂಡರಾದ ನವೀನ್, ರಾಮು, ಆನಂದ್ ಮೈಲಾರಿ, ಶ್ರೀವತ್ಸ, ಜಕ್ಕಳ್ಳಿ ಯೋಗೇಶ್, ಗುರುಸ್ವಾಮಿ, ಶಿವಕುಮಾರ್, ಜಿಪಂ ಮಾಜಿ ಸದಸ್ಯ ಎಂ.ಎನ್. ಜಗದೀಶ್, ತಾ.ಪಂ.ಮಾಜಿ ಅಧ್ಯಕ್ಷೆ ಮಂಜಳಾ ದೇವಣ್ಣ, ಸುನಂದ ರಾಜು, ಪೇಂಟ್‌ನಾಗರಾಜು, ರಾಜು, ಶಿವು, ಶಿವಕುಮಾರ್, ಜೆಡಿಎಸ್ ಯುವ ಮುಖಂಡ ನಾಗರಾಜು, ಆಗತೂರು ರಾಜೇಶ್, ಶ್ರೀರಾಮಲು, ಸೇರಿದಂತೆ ಇನ್ನಿತರರು ಹಾಜರಿದ್ದರು. ನಂತರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾವರ್ಕರ್ ರಥಯಾತ್ರೆ ಮೆರವಣಿಗೆ ಅದ್ದೂರಿಯಾಗಿ ನಡೆಯಿತು.

ಅನಾಥ ಶವಗಳ ಮುಕ್ತಿದಾತ ಡಾ.ಎಂ. ಮಾದೇಶ್‌ಗೆ ದೇಶಪ್ರೇಮಿ ಪ್ರಶಸ್ತಿ ಪ್ರದಾನ



ತಿ.ನರಸೀಪುರ, ಆ.24– ಕರ್ನಾಟಕ ಪ್ರತಿಭಾ ವರ್ಧಕ ಅಕಾಡೆಮಿ ವತಿಯಿಂದ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ನಾಳೆ (ಗುರುವಾರ) ನಡೆಯಲಿರುವ ಭಾರತೀಯ ಅಮೃತ ಮಹೋತ್ಸವ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಟ್ಟಣದ ಅನಾಥ ಶವಗಳ ಮುಕ್ತಿದಾತ ಡಾ.ಎಂ.ಮಾದೇಶ್ ರವರಿಗೆ ದೇಶಪ್ರೇಮಿ ಪ್ರಶಸ್ತಿ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ.

ಸಂಜೆ 5.30ಕ್ಕೆ ನಡೆಯಲಿರುವ ಸಮಾರಂಭದ ದಿವ್ಯಸಾನಿಧ್ಯವನ್ನು ಚಿತ್ರದುರ್ಗ ಬೃಹನ್ಮಠದ ಡಾ. ಶಿವರಾತ್ರಿ ಮುರುಘಾ ಶರಣರು ವಹಿಸಲಿದ್ದು, ಹೈಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಜಸ್ಟೀಸ್ ಅರಳೀ ನಾಗರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ವಸತಿ ಸಚಿವ ಸೋಮಣ್ಣ, ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ್, ಬೃಹತ್ ಕೈಗಾರಿಕಾ ಸಚಿವ ಮುರುಗೇಶ್ ಭಾಗವಹಿಸಲಿದ್ದಾರೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಸಿದ್ದರಾಮಯ್ಯನವರ ಬಗ್ಗೆ ಬಾಯಿಗೆ ಬಂದಂತೆ ಹೇಳಿಕೆ ನೀಡಬೇಡಿ

ಸಂಸದ ಪ್ರತಾಪ್‌ಸಿಂಹ ಹೇಳಿಕೆಗೆ ಜಿಪಂ ಮಾಜಿ ಸದಸ್ಯರ ಆಕ್ಷೇಪ



ತಿ.ನರಸೀಪುರ, ಆ.24– ಮಾಂಸಹಾರ ಸೇವನೆ ಮಾಡಿ ಚಾಮುಂಡೇಶ್ವರಿ ದೇವಿಗೆ ಸಿದ್ದರಾಮಯ್ಯ ಪೂಜೆ ಸಲ್ಲಿಸುವ ಮೂಲಕ ಹಿಂದೂಗಳ ಧಾರ್ಮಿಕ ನಂಬಿಕೆಗೆ ಧಕ್ಕೆ ಉಂಟು ಮಾಡಿದ್ದಾರೆ ಎಂದು ಸಂಸದ ಪ್ರತಾಪ್ ಸಿಂಹ ಮಾಡಿರುವ ಆರೋಪಕ್ಕೆ ತಿರುಗೇಟು ನೀಡಿರುವ ಜಿ.ಪಂ.ಮಾಜಿ ಸದಸ್ಯ ಎಂ.ಮಹದೇವ್ ಲಕ್ಷಾಂತರ ಜನರ ಧಾರ್ಮಿಕ ನಂಬಿಕೆಗೆ ಹೆಸರಾದ ಚಿಕ್ಕಲ್ಲೂರು ಜಾತ್ರೆಯಲ್ಲಿ ಪ್ರಾಣಿ ಬಲಿ ನಿಷೇಧ ಮಾಡಿದಾಗ ನೀವ್ಯಾಕೆ ಹೋರಾಟ ಮಾಡಲಿಲ್ಲ ಎಂದು ಪ್ರಶ್ನಿಸಿದ್ದಾರೆ.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಸಿದ್ದರಾಮಯ್ಯರವರು ನೇರವಾದಿಯಾಗಿದ್ದು,ತಿನ್ನುವ ಆಹಾರ ಪದ್ಧತಿಗೆ ಬದ್ಧವಾಗಿ ನಡೆದುಕೊಳ್ಳುವ ವ್ಯಕ್ತಿ. ಮಾಂಸಾಹಾರ ಸೇವಿಸಿದ್ದರೆ ನೇರವಾಗಿಯೇ ಹೇಳಿಕೊಳ್ಳುವ ದಿಟ್ಟತನದ ವ್ಯಕ್ತಿಯಾಗಿದ್ದಾರೆ. ಅವರು ಮಾಂಸದೂಟ ಮಾಡಿ ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸಿದ್ದರೂ ಎಂದು 5 ವರ್ಷದ ಘಟನೆಯನ್ನು ಈಗ ಎಳೆದು ಜನರಲ್ಲಿ ಪ್ರಚೋದನೆ ಉಂಟು ಮಾಡುತ್ತಿದ್ದೀರಿ. ಇಂತಹ ಹೇಳಿಕೆಗಳು ಬೇಡ ಎಂದರು.

ಮೈಸೂರು, ಚಾಮರಾಜನಗರ, ಮಂಡ್ಯ ಭಾಗದ ಶೂದ್ರ ಸಮುದಾಯದವರ ಧಾರ್ಮಿಕ ನಂಬಿಕೆಯಿಂದ ಚಿಕ್ಕಲ್ಲೂರಿನಲ್ಲಿ ಆಚರಿಸಲ್ಪಡುವ ಜಾತ್ರೆಯನ್ನು ನಿಷೇಧ ಮಾಡಿದಾಗ ನಿಮ್ಮ ಧಾರ್ಮಿಕ ನಂಬಿಕೆ ಎಲ್ಲಿಗೆ ಹೋಗಿತ್ತು ಎಂದು ಅವರು ಪ್ರಶ್ನಿಸಿದ್ದಾರೆ. ಅಲ್ಲಿ ಸಹಸ್ರಾರು ಮಂದಿ ಭಕ್ತರ ಧಾರ್ಮಿಕ ಭಾವನೆಗೆ ಧಕ್ಕೆ ಉಂಟಾಗಲಿಲ್ಲವೇ, ಮರಿಗಳನ್ನು ಕಡಿದು ಸಹಪಂಕ್ತಿ ಭೋಜನ ಮಾಡುವ ಜಾತ್ರೆ. ಆ ಭಾಗದ ಜನರ ಧಾರ್ಮಿಕ ನಂಬಿಕೆ.ಪ್ರಾಣಿ ಬಲಿ ನಿಷೇಧ ಮಾಡಿ ಜಾತ್ರೆ ರದ್ದಾದಾಗ ಆ ಭಾಗದ ಜನತೆಯ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಲಿಲ್ಲವೇ, ಇಂದು ಸಿದ್ದರಾಮಯ್ಯ ಮಾಂಸಾಹಾರ ಸೇವಿಸಿ ದೇವರಿಗೆ ಪೂಜೆ ಸಲ್ಲಿಸಿದರು ಎಂದು ಬೊಬ್ಬೆ ಹೊಡೆದು ಬೀದಿಗಿಳಿದಿರುವ ನೀವು ಅಂದು ಏಕೆ ಧಾರ್ಮಿಕ ನಂಬಿಕೆ ಪರವಾಗಿ ಬೀದಿಗಿಳಿದು ಹೋರಾಟ ಮಾಡಲಿಲ್ಲ, ಅಂದು ನೀವು ಬಹು ಸಂಖ್ಯೆಯಲ್ಲಿದ್ದ ಶೂದ್ರ ಸಮುದಾಯದವರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಮಾಡಲಿಲ್ಲವೇ ಎಂದು ಪ್ರತಾಪ್ ಸಿಂಹ ರ ವಿರುದ್ಧ ಕಿಡಿಕಾರಿದರು.

ಇದೇ ರೀತಿ ಬಿಳಿಗಿರಿರಂಗನ ಬೆಟ್ಟದಲ್ಲೂ ಆದದ್ದನ್ನು ಮರೆತಿದ್ದೀರಾ, ಅಂದು ಅಲ್ಲಿ ಭಕ್ತಾದಿಗಳು ಕದ್ದು ಮುಚ್ಚಿ ಹಬ್ಬ ಆಚರಣೆ ಮಾಡುವಂತಾದಾಗ ಧಾರ್ಮಿಕ ಭಾವನೆಯ ವಿಷಯ ಪ್ರಸ್ತಾಪವಾಗಲಿಲ್ಲ.ಬಹು ಸಂಖ್ಯೆಯಲ್ಲಿರುವ ಜನರ ಭಾವನೆಗಳಿಗೆ ಅಡಚಣೆ ಮಾಡಬಾರದು, ಅವರ ಜೊತೆ ಸಹಕರಿಸಬೇಕು ನಿಮಗೆ ಅನಿಸಲಿಲ್ಲವೇ, ನಿಮಗೆ ಓಟು ಬೇಕಾದಾಗ ಮಾತ್ರ ಒಬ್ಬ ವ್ಯಕ್ತಿಯ ತೇಜೋವಧೆ ಮಾಡಬೇಕಾದಾಗ ಧಾರ್ಮಿಕ ಭಾವನೆಗಳು, ಆಧ್ಯಾತ್ಮಿಕ ವಿಷಯಗಳನ್ನು ಎಳೆದು ತರುತ್ತೀರಾ ಇದು ಹೆಚ್ಚಿನ ಕಾಲ ಉಳಿಯದು ಎಂದ ಮಹದೇವ್ ನಿಮಗೆ ತಾಕತ್ತಿದ್ದರೆ 2013 ರಿಂದ 2018 ರವರೆಗಿನ ಆರ್ಥಿಕ ಅಭಿವೃದ್ಧಿಯ ಬಗ್ಗೆ ತುಲನೆ ಮಾಡಿ ಅದನ್ನು ಬಿಟ್ಟು ಕ್ಷುಲ್ಲಕ ಕಾರಣ ಮುಂದಿಟ್ಟುಕೊಂಡು ಧರ್ಮಗಳ ಮಧ್ಯೆ ತಂದಿಡುವ ಕೆಲಸ ಮಾಡಬೇಡಿ, ಒಬ್ಬ ಮುತ್ಸದ್ದಿ ರಾಜಕಾರಣಿಯ ಬಗ್ಗೆ ಮಾತನಾಡಬೇಕಾದರೆ ಏನು ಮಾತನಾಡುತ್ತಿದ್ದೇನೆಂಬ ಅರಿವು ನಿಮಗಿರಲಿ.ಸುಖಾಸುಮ್ಮನೇ ನಮ್ಮ ನಾಯಕ ಸಿದ್ದರಾಮಯ್ಯರ ಬಗ್ಗೆ ಆಧಾರ ರಹಿತ ಆರೋಪ ಮಾಡಿದೆ ಮುಂದೆ ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಗ್ರಾಪಂ ಮಾಜಿ ಅಧ್ಯಕ್ಷ ಮನ್ನೆ ಹುಂಡಿ ಮಹೇಶ್, ಜಿಲ್ಲಾ ವೈದ್ಯಕೀಯ ವಿಭಾಗದ ಜಿಲ್ಲಾಧ್ಯಕ್ಷ ಡಾ.ಪ್ರದೀಪ್, ಎಸ್ ಡಿಎಂಸಿ ಅಧ್ಯಕ್ಷ ಅರುಣ್‌ಗೌಡ, ಡಣನಾಯಕಪುರ ಮಹಾದೇವಸ್ವಾಮಿ, ಗ್ರಾಪಂ ಸದಸ್ಯರಾದ ಮರಯ್ಯ, ನಿರುಜನ್, ಮಹೇಶ್, ಬಸವರಾಜು, ಮಹದೇವಸ್ವಾಮಿ ಇದ್ದರು.

ದೇವದತ್ತ ನಿಧನ



ಹುಣಸೂರು, ಆ.24– ತಾಲೂಕು ಕಾಂಗ್ರೆಸ್ ಮಾಜಿ ಅಧ್ಯಕ್ಷ ಬಿ.ಎನ್.ಜಯರಾಮ್ ಅವರ ಸಹೋದರ ಹಾಗೂ ಮೈಸೂರು ರಾಜ್ಯ ಉಣ್ಣೆ ನೇಕಾರ ಸಹಕಾರ ಸಂಘದ ಮಾಜಿ ಅಧ್ಯಕ್ಷ ದಿವಂಗತ ಹೆಚ್.ಡಿ.ನರಸಯ್ಯ ನವರ ಪುತ್ರ ನಗರದ ಕಲ್ಕುಣಿಕೆಯ ಬೆಳ್ತೂರು ಗ್ರಾಮದ ವಾಸಿ ದೇವದತ್ತ (65) ಇಂದು ಬೆಳಗ್ಗೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಬೆಳತ್ತೂರು ಗ್ರಾಮದ ಮೃತರ ತೋಟದಲ್ಲಿ ನೆರವೇರಿತು.

ಲಿಂಗಪ್ಪ



ನಂಜನಗೂಡು, ಆ.24–ತಾಲೂಕಿನ ಹೆಡತಲೆ ಗ್ರಾಮದ ಹಿರಿಯ ಮುಖಂಡ ಲಿಂಗಪ್ಪ(87) ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಸಂಜೆ ಸ್ವಗ್ರಾಮ ಹೆಡತಲೆಯ ಅವರ ತೋಟದಲ್ಲಿ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ

ನಂ.ಗೂಡು ವಕೀಲ ಸಂಘದ ಅಧ್ಯಕ್ಷರಾಗಿ ಸುರೇಶ್ ಆಯ್ಕೆ



ನಂಜನಗೂಡು, ಆ.24– ನಂಜನಗೂಡು ವಕೀಲರ ಸಂಘಕ್ಕೆ ಸುರೇಶ್ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಸುರೇಶ್ ಹಾಗೂ ಷಣ್ಮುಖ ನಾಮಪತ್ರ ಸಲ್ಲಿಸಿದರು. ಒಟ್ಟು 141 ಸದಸ್ಯರ ಬಲ ಹೊಂದಿರುವ ವಕೀಲರ ಸಂಘದಲ್ಲಿ ಸುರೇಶ್ ಅವರು 83 ಮತ ಪಡೆದು ಆಯ್ಕೆಯಾದರು. ಪ್ರತಿಸ್ಪರ್ಧಿ ಷಣ್ಮುಖ ಅವರು 50 ಮತ ಪಡೆದು ಪರಾಭವಗೊಂಡರು.

ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಆರ್. ರೇಣುಕಾ ಪ್ರಸಾದ್, ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ಆರ್. ಸುನೀಲ್‌ಕುಮಾರ್ ನಾಮಪತ್ರ ಸಲ್ಲಿಸಿದ್ದು, ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಉಪಾಧ್ಯಕ್ಷರ ಸ್ಥಾನಕ್ಕೆ 4 ಮಂದಿ ಸ್ಪರ್ಧಿ ಸಿದ್ದು, ಒಂದು ಮತದ ಅಂತರದಿಂದ ಸೋಹನ್ ಕುಮಾರ್ ಆಯ್ಕೆ ಯಾದರು. ಅಧ್ಯಕ್ಷ ಸ್ಥಾನ ಚುನಾವಣೆಯಲ್ಲಿ 2 ಮತ, ಉಪಾಧ್ಯಕ್ಷ ಸ್ಥಾನದಲ್ಲಿ 1 ಮತ ತಿರಸ್ಕೃತಗೊಂಡಿತು. ಚುನಾವಣಾಧಿಕಾರಿಯಾಗಿ ಬಸಪ್ಪಶೆಟ್ಟಿ ಕುಮಾರ್, ಸಹಾಯಕ ಚುನಾವಣಾಧಿಕಾರಿಯಾಗಿ ಕೆ. ತಾರಕರಾಮನ್ ಕಾರ್ಯನಿರ್ವಹಿಸಿದ್ದರು.

ಡಿಆರ್‌ಸಿ ಸಿನಿಮಾಸ್

DRC CINEMAS

ದೂ : 4240422/4241800

ಸ್ಕ್ರೀನ್ 1	ಸೀತಾರಾಮಂ (ತೆ): ಬೆ.10ಕ್ಕೆ, ಗಾಳಿಪಟ–2(ಕ): ಮ.1.05ಕ್ಕೆ, ಸಂ.4.05ಕ್ಕೆ, ರಾ.7.05ಕ್ಕೆ, ರಾ.10ಕ್ಕೆ
ಸ್ಕ್ರೀನ್ 2	ಗಾಳಿಪಟ –2 (ಕ): ಬೆ.10.25ಕ್ಕೆ, ಕಾರ್ತಿಕೇಯ 2 (ತೆ): ಮ.1.25ಕ್ಕೆ, ಸಂ.4.15ಕ್ಕೆ, ವಿಕ್ರಾಂತ್ ರೋಣ (3ಡಿ) (ಕ): ರಾ.7ಕ್ಕೆ, ತೀರುಪ್ಪು (ಮ): ರಾ.9.55ಕ್ಕೆ.
ಸ್ಕ್ರೀನ್ 3	ಲವ್ 360 (ಕ): ಬೆ.10.35ಕ್ಕೆ, ತಿರುಚಿಟ್ರಂಬಲಂ (ತ): ಮ.1.30ಕ್ಕೆ, ಲೈಗರ್ (ಕ): ಸಂ.4.15ಕ್ಕೆ, ಲೈಗರ್ (ಹಿಂ): ರಾ.7.05ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಲೈಗರ್ (ತೆ): ಬೆ.8ಕ್ಕೆ, ಬೆ.10.45ಕ್ಕೆ, ಮ.1.35ಕ್ಕೆ, ಸಂ.4.25ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗಾಳಿಪಟ–2 (ಕ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ
ಸ್ಕ್ರೀನ್ 2	ತಿರುಚಿಟ್ರಂಬಲಂ (ತ): ಬೆ.9.50ಕ್ಕೆ, ಕಾರ್ತಿಕೇಯ 2 (ತೆ): ಮ.12.50ಕ್ಕೆ, ರಾ.7.10ಕ್ಕೆ, ಸೀತಾರಾಮಂ (ತೆ): ಮ.3.50ಕ್ಕೆ, ರಾ.7.40ಕ್ಕೆ,
ಸ್ಕ್ರೀನ್ 3	ಗಾಳಿಪಟ 2 (ಕ): ಬೆ.11ಕ್ಕೆ, ಲವ್ 360 (ಕ): ಮ.2ಕ್ಕೆ, ರಾ.7.40ಕ್ಕೆ, ತಿರುಚಿಟ್ರಂಬಲಂ (ತ): ಸಂ.4.50ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ನೋಪ್ (ಇಂ): ಬೆ.10.05ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ವಿಕ್ರಾಂತ್ ರೋಣ (3ಡಿ) (ಕ): ಮ.12.50ಕ್ಕೆ, ಲಾಲ್‌ಸಿಂಗ್ ಚಡ್ಡಾ (ಹಿಂ): ಸಂ.6.40ಕ್ಕೆ.

ಮೈಸೂರು ವಿಷನ್ ಸಿನಿಮಾ

MVC

ದೂ : 0821–2973519

ಸ್ಕ್ರೀನ್ 1	ಲವ್ 360 (ಕ): ಬೆ.10.45ಕ್ಕೆ, ತಿರುಚಿಟ್ರಂಬಲಂ (ತ): ಮ.1.30ಕ್ಕೆ, ಸಂ.6.40ಕ್ಕೆ, ಥಲ್ಲುಮಾಲ (ಮ): ರಾ.9.15ಕ್ಕೆ.
ಸ್ಕ್ರೀನ್ 2	ಲವ್ 360 (ಕ): ಮ.1.30ಕ್ಕೆ, ತಿರುಚಿಟ್ರಂಬಲಂ (ತ): ರಾ.9.15ಕ್ಕೆ
ಸ್ಕ್ರೀನ್ 3	ಗಾಳಿಪಟ–2 (ಕ): ಮ.1ಕ್ಕೆ, ಸಂ.4ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಗಾಳಿಪಟ–2 (ಕ): ಬೆ.10.30ಕ್ಕೆ, ಸಂ.6.15ಕ್ಕೆ, ರಾ.9.15ಕ್ಕೆ, ಸೀತಾರಾಮಂ (ತೆ): ಮ.1.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139


ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಗಾಳಿಪಟ–2 (ಕ): ಬೆ.9.10ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ, ರವಿ ಬೋಪಣ್ಣ (ಕ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ವಿಕ್ರಾಂತ್ ರೋಣ (3ಡಿ)(ಕ): ಮ.3.50ಕ್ಕೆ, ರಾ.10.10ಕ್ಕೆ, ವಿರುಮನ್ (ತ): ಬೆ.9.30ಕ್ಕೆ, ಮ.12.40ಕ್ಕೆ, ರಾ.7ಕ್ಕೆ, ಥಲ್ಲುಮಾಲ (ಮ): ಸಂ.4.10ಕ್ಕೆ, ಮಾರ್ಚಿಲಾ ನಿಯೋಜಕ ವರ್ಗಂ (ತೆ): ರಾ.9.40ಕ್ಕೆ, ಕಾರ್ತಿಕೇಯ–2(ತೆ): ಮ.12.20ಕ್ಕೆ, ರಕ್ಷಾಬಂಧನ್ (ಹಿಂ): ಬೆ10.25ಕ್ಕೆ, ಮ1.40ಕ್ಕೆ, ಸಂ.4.20ಕ್ಕೆ, ರಾ.7.20ಕ್ಕೆ, ರಾ.9.50ಕ್ಕೆ, ಲಾಲ್‌ಸಿಂಗ್ ಚಡ್ಡಾ (ಹಿಂ): ಬೆ.8.50ಕ್ಕೆ, ಮ.12.15ಕ್ಕೆ, ಮ.12.55ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಲೈಗರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವಿಕ್ರಾಂತ್ ರೋಣ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ರಕ್ಷಾಬಂಧನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗಾಳಿಪಟ –2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಗಾಳಿಪಟ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ತಿರುಚಿಟ್ರಂಬಲಂ (ತ)	4 ಪ್ರದರ್ಶನಗಳು
ಸಂಗಂ	
ಲೈಗರ್ (ತೆ)	4 ಪ್ರದರ್ಶನಗಳು
ಲಿಡೋ	
ತೀಸ್ ಮಾರ್ ಖಾನ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ವಿರುಮನ್ (ತ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಕಾರ್ತಿಕೇಯ–2 (ತೆ)	4 ಪ್ರದರ್ಶನಗಳು

ಮೈಸೂರು ರೇಸುಗಳು–2022



1ನೇ ದಿನ, ಗುರುವಾರ 25–8–2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ವರದ ಪ್ಲೇಟ್–1100 ಮೀ. 3 ವರ್ಷದ (ಟರ್ಮ್ಸ್). (ಮೈಸೂರ್ ಬೇಸ್ಡ್ ಹಾರ್ಸಸ್). ಮ.2.00ಕ್ಕೆ

1. ಐ ದಿ ಮೈಂಡ್ 2. ಎಲೆವಾಡ 3. ಮಿಸ್ಟಿಕ್ ಡಿವೈನ್

II. ಸೋಮನಾಥಪುರ್ ಪ್ಲೇಟ್–1200 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ

1. ಕಿಂಗ್ಸ್ ಕಮಾಂಡ್ 2. ಕಮ್ ಅಲೈವ್ 3. ವರ್ಜಿನಿಯಾ ಕ್ವೀನ್

III. ಬಿ.ಕೆ.ಕೃಷ್ಣದೇವರಾಜ ಅರಸ್ ಮೆಮೋರಿಯಲ್ ಟ್ರೋಫಿ–1200 ಮೀ. ರೇಟೆಡ್ 40 ರಿಂದ 65. (ಮೈಸೂರ್ ಬೇಸ್ಡ್ ಹಾರ್ಸಸ್). ಮ.3.00ಕ್ಕೆ

1 ಕಿಂಗ್ ಆಫ್ ದಿ ಜಂಗಲ್ 2 ಕಂಟ್ರೀಸ್ ಫ್ಲಾಷ್ 3 ಲೌಲಿ ಥಾಟ್ಸ್

IV. ಸ್ಟಾರ್ ಆಫ್ ಮೈಸೂರ್ ಟ್ರೋಫಿ–1400 ಮೀ. ರೇಟೆಡ್ 60 ಮತ್ತು 85. ಮ.3.30ಕ್ಕೆ

1. ಫ್ಲಾಷ್ ಬಾಂಡ್ 2. ಅಬೆರ್ ಲೋರ್ 3. ಸೌಂಡ್ ಆಫ್ ಕ್ಯಾನನ್

V. ಹೆಚ್.ಹೆಚ್. ಶ್ರೀ ಜಯಚಾಮರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ –1400 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.00ಕ್ಕೆ

1. ಎಮಲ್ಡಾ 2. ಕಂಟ್ರೀಬ್ಯೂಟರ್ 3. ನಥಿಂಗ್ ಟು ವರಿ

VI. ಲಾವಸ್ ಪ್ಲೇಟ್–1600 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ

1. ಔರಲಿ 2. ಫಾರೆಸ್ಟ್ ವ್ಯೂ 3. ಕೂರ್ಗ್ ಜನರಲ್

VII. ಪುಣೆ ಪ್ಲೇಟ್ –1400 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸಸ್). ಸಂ.5.00ಕ್ಕೆ

1. ಫೆಸ್ಟಿವ್ ಸ್ಟಾರ್ 2. ನೈಸ್ ಕ್ಯಾನ್‌ಬಿಸ್ 3. ಕೋಡ್ ಆಫ್ ಹಾನರ್

ದಿನದ ಅತ್ಯುತ್ತಮ	: ಎಮಲ್ಡಾ
ಡಬ್ಬಲ್	: ಕಿಂಗ್ ಆಫ್ ಜಂಗಲ್, ಎಮಲ್ಡಾ
ಜಾಕ್‌ಪಾಟ್	: 3, 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 6 ಮತ್ತು 7

ಟಿಪ್ ಸ್ಟರ್ ಪಿಜೆಸಿ

ಇಂದು ವಿದ್ಯುತ್ ವ್ಯತ್ಯಯ

ಹೆಚ್.ಡಿ.ಕೋಟೆ, ಆ.24– ಗುರುವಾರ ತಾಲೂಕಿನ ಕ್ಯಾತನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹಾಲನಹಳ್ಳಿ,ಜಿ.ಬಿ. ಸರಗೂರು, ಸುತ್ತಮುತ್ತಲಿನ ಗ್ರಾಮಗಳಲ್ಲಿ ತುರ್ತು ಕಾಮಗಾರಿ ಕಾರಣ ಗುರುವಾರ (ಆ.25) ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಚಂದ್ರು ಕುಮಾರ್ ತಿಳಿಸಿದ್ದಾರೆ.

ಶತಮಾನೋತ್ಸವದ ಹೊಸ್ತಿಲಲ್ಲಿರುವ ಕೆ.ಆರ್.ಆಸ್ಪತ್ರೆಗೆ ಹೈಟೆಕ್ ಸ್ಪರ್ಶ

ಹೊರರೋಗಿ ನೋಂದಣಿ, ಒಳರೋಗಿ ದಾಖಲಾತಿ, ಪ್ರಯೋಗಾಲಯ ವರದಿಗೆ ಆನ್‌ಲೈನ್ ವ್ಯವಸ್ಥೆ



ಕೆ.ಆರ್.ಆಸ್ಪತ್ರೆಯಲ್ಲಿ ಚೀಟಿ ಪಡೆಯಲು ಸಾಲುಗಟ್ಟಿ ನಿಂತಿರುವ ಹೊರರೋಗಿಗಳು.

ಎಸ್.ಟಿ.ರವಿಕುಮಾರ್

ಮೈಸೂರು, ಆ.24(ಆರ್‌ಕೆ)–ಶತಮಾನೋತ್ಸವದತ್ತ ದಾಪುಗಾಲಿಡುತ್ತಿರುವ ಮೈಸೂರಿನ ಕೆ.ಆರ್. ಆಸ್ಪತ್ರೆಗೀಗ ಹೈಟೆಕ್ ಸ್ಪರ್ಶ ನೀಡಲಾಗಿದೆ.

ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬಡವರು, ಮಧ್ಯಮ ವರ್ಗದವರೂ ಸೇರಿದಂತೆ ಸರ್ವ ಜನರಿಗೂ ಉಚಿತವಾಗಿ ಆರೋಗ್ಯ ಸೇವೆ ಒದಗಿಸಬೇಕೆಂಬ ಮಹದುದ್ದೇಶದಿಂದ ನಿರ್ಮಿಸಿದ ಕೆ.ಆರ್.ಆಸ್ಪತ್ರೆಯು, 2024ಕ್ಕೆ ಶತಮಾನೋತ್ಸವ ಆಚರಿಸಿಕೊಳ್ಳಲಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (MMC &RI)ಯ ಬೋಧನಾ ಆಸ್ಪತ್ರೆಯಾಗಿದೆ.

ಹಳೇ ಪದ್ಧತಿಗೆ ತಿಲಾಂಜಲಿ ಇತ್ತು, ಇದೀಗ ತಂತ್ರಜ್ಞಾನ ಬಳಸಿಕೊಂಡು, ದೊಡ್ಡಾಸ್ಪತ್ರೆಯನ್ನು ಗಣಕೀಕರಣಗೊಳಿಸಿ, ಮುಂದುವರೆದ ಭಾಗವಾಗಿ ಇ–ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಗುತ್ತಿದೆ. ಹೊರರೋಗಿ ನೋಂದಣಿ, ಒಳರೋಗಿ ದಾಖಲಾತಿ, ಪ್ರಯೋಗಾಲಯದಿಂದ ಪರೀಕ್ಷಾ ವರದಿ, ಎಕ್ಸ್‌ರೇ, ಸ್ಕ್ಯಾನಿಂಗ್‌ನಂತಹ ರೇಡಿಯಾಲಜಿ ವಿಭಾಗದ ಎಲ್ಲಾ ಬಗೆಯ ಸೇವೆಗಳನ್ನೂ ಆನ್‌ಲೈನ್ ಮೂಲಕ ಒದಗಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ಓಪಿಡಿ ಚೀಟಿಗಾಗಿ ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ರೋಗಿಗಳು ನಿಲ್ಲುವುದನ್ನು ತಪ್ಪಿಸಲು ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲೂಕು ಸರ್ಕಾರಿ ಆಸ್ಪತ್ರೆಗಳಲ್ಲಿ ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು ಎಂದು ಸರ್ಕಾರ ಘೋಷಿಸಿದ್ದು, 'ಇ–ಆಸ್ಪತ್ರೆ' ಯೋಜನೆಗೂ ಚಾಲನೆ ನೀಡಿರುವ ಬೆನ್ನಲ್ಲೇ ಕೆ.ಆರ್.ಆಸ್ಪತ್ರೆಯಲ್ಲಿ ತಂತ್ರಜ್ಞಾನಾಧಾರಿತ ಸೇವೆಗೆ ಸಿದ್ಧತೆ ಮಾಡಲಾಗುತ್ತಿದೆ.

ಎಸ್‌ಎಂಎಸ್ ಅಥವಾ ಆನ್‌ಲೈನ್ ಮೂಲಕ ರೋಗಿಗಳಿಗೆ ವೈದ್ಯಕೀಯ ಸೇವೆಗೆ ಅಪಾಯಿಂಟ್‌ಮೆಂಟ್ ನೀಡಿ ಆಸ್ಪತ್ರೆಗಳಲ್ಲಿ ರೋಗಿಗಳ ದಟ್ಟಣೆಯನ್ನು ಕಡಿಮೆ ಮಾಡಬೇಕು. ಕೇವಲ ಹೊರರೋಗಿ ನೋಂದಣಿಗೆ, ಲ್ಯಾಬ್ ರಿಪೋರ್ಟ್‌ಗಾಗಿ ಕಾಯುವುದನ್ನು ತಪ್ಪಿಸಬೇಕೆಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ನಿರ್ದೇಶನ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

> "ಮೆಡಿಸಿನ್, ಸರ್ಜರಿ, ಯೂರಾಲಜಿ, ನೆಫ್ರಾಲಜಿ, ಆರ್ಥೋ, ಇಎನ್‌ಟಿ, ಡರ್ಮಟಾಲಜಿ, ನ್ಯೂರಾಲಜಿ, ಆಪ್ತಮಾಲಜಿ ಸೇರಿದಂತೆ ಎಲ್ಲಾ ವಿಭಾಗಗಳಿಗೂ ಈ ಆನ್‌ಲೈನ್ ವ್ಯವಸ್ಥೆ ಒದಗಿಸಿ ಇ–ಆಸ್ಪತ್ರೆ ಯೋಜನೆಯನ್ನು ಜಾರಿಗೆ ತಂದು ಪರಿಣಾಮಕಾರಿಯಾಗಿ ರೋಗಿಗಳಿಗೆ ವೈದ್ಯಕೀಯ ಸೇವೆ ಒದಗಿಸಲು ಕ್ರಮ ವಹಿಸಲಾಗಿದೆ.
>
> –ಡಾ. ಎನ್. ನಂಜುಂಡಸ್ವಾಮಿ, ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ



ಪ್ರತೀ ದಿನ 1,500 ರಿಂದ 1,800 ಮಂದಿ ಹೊರರೋಗಿಗಳು ಬರುವ 1,050 ಹಾಸಿಗೆ ಸಾಮರ್ಥ್ಯದ ದೊಡ್ಡಾಸ್ಪತ್ರೆಯಲ್ಲಿ 450ರಿಂದ 500 ಮಂದಿ ಒಳರೋಗಿಗಳು ದಾಖಲಾಗುತ್ತಾರೆ. ಅವರಿಗೆ ಎಕ್ಸ್‌ರೇ, ವಿವಿಧ ಸ್ಕ್ಯಾನಿಂಗ್, ರಕ್ತ ಪರೀಕ್ಷೆ ಸೇರಿದಂತೆ ರೇಡಿಯಾಲಜಿಯ ಎಲ್ಲಾ ಬಗೆಯ ಸೇವೆಗಳ ರಿಪೋರ್ಟ್ ಪಡೆಯಲು ಕೌಂಟರ್‌ಗಳಲ್ಲಿ ನೂಕು–ನುಗ್ಗಲು ಉಂಟಾಗುತ್ತಿರುವುದರಿಂದ ರೋಗಿಗಳಿಗೆ ತೀವ್ರ ತೊಂದರೆಯಾಗುತ್ತಿತ್ತು. ಕಂಪ್ಯೂಟರೀಕರಣ, ಆನ್‌ಲೈನ್ ಸಿಸ್ಟಂ ಜಾರಿಗೊಳಿಸಿರುವುದರಿಂದ ಇದೀಗ ಎಲ್ಲಾ ರೀತಿಯ ಲ್ಯಾಬೊರೇಟರಿ ರಿಪೋರ್ಟ್‌ಗಳನ್ನು ಸಂಬಂಧಿಸಿದ ವೈದ್ಯರಿಗೆ ಆನ್‌ಲೈನ್‌ನಲ್ಲೇ ಕಳುಹಿಸುವ ವ್ಯವಸ್ಥೆ ಕಲ್ಪಿಸಿದ್ದು, ರೋಗಿಗಳು ಒಂದು ಕಟ್ಟಡದಿಂದ ಮತ್ತೊಂದು ಕಟ್ಟಡಕ್ಕೆ ಅಲೆಯುವುದು ತಪ್ಪಿದಂತಾಗಿದೆ.

ಸೆಂಟ್ರಲ್ ಲ್ಯಾಬೊರೇಟರಿಯಿಂದ ಕೆ.ಆರ್. ಆಸ್ಪತ್ರೆಯ ಓಪಿಡಿ, ಒಳ ರೋಗಿಗಳ 60 ವಾರ್ಡ್, ತುರ್ತು ಚಿಕಿತ್ಸಾ ವಿಭಾಗ, ಮೈನರ್ ಓಟಿ, ಅಪಘಾತ ತುರ್ತು ಚಿಕಿತ್ಸಾ ವಿಭಾಗ, ರಕ್ತ ನಿಧಿ ಕೇಂದ್ರಗಳಿಗೆ ನೇರವಾಗಿ ಪರೀಕ್ಷಾ ವರದಿಗಳನ್ನು ರವಾನಿಸುವ ವ್ಯವಸ್ಥೆ ಜಾರಿಗೆ ತಂದು, ಎಲ್ಲಾ ವಾರ್ಡ್‌ಗಳಿಗೂ ಲ್ಯಾಪ್‌ಟಾಪ್ ಒದಗಿಸಿ ಡೇಟಾ ಎಂಟ್ರಿ ಆಪರೇಟರ್ (DEO)ಗಳ ಮೂಲಕ ಅವುಗಳನ್ನು ವೈದ್ಯರು ಹಾಗೂ ಒಳರೋಗಿಗಳಿಗೆ ತಲುಪಿಸಲಾಗುವುದು ಎಂದು ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ಎನ್.ನಂಜುಂಡಸ್ವಾಮಿ ತಿಳಿಸಿದ್ದಾರೆ.



ಆನ್‌ಲೈನ್ ಪದ್ಧತಿಯಲ್ಲಿ ಸೇವಾನಿರತ ಸಿಬ್ಬಂದಿ

ಆಡಳಿತ ವಿಭಾಗ, ಔಷಧ ಉಗ್ರಾಣ, ಮೈಕ್ರೋಬಯಾಲಜಿ ವಿಭಾಗಗಳಿಗೂ ಗಣಕೀಕೃತ ವ್ಯವಸ್ಥೆ ಜಾರಿಗೊಳಿಸಿ ಕ್ಯಾಷ್‌ಲೆಸ್ ಮತ್ತು ಪೇಪರ್‌ಲೆಸ್ ಪದ್ಧತಿಯನ್ನು ಕೆ.ಆರ್.ಆಸ್ಪತ್ರೆಯಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುತ್ತಿದೆ. ಅದೇ ರೀತಿ ಚೆಲುವಾಂಬ, ಪಿಕೆಟಿಬಿ ಆಸ್ಪತ್ರೆಗಳಲ್ಲೂ ಜಾರಿಗೆ ತಂದು ಸೇವೆ ಸುಧಾರಣೆ ಮಾಡಲು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಮತ್ತು ಡೈರೆಕ್ಟರ್ ಡಾ.ದಾಕ್ಷಾಯಿಣಿ ಪ್ರಕ್ರಿಯೆ ನಡೆಸುತ್ತಿದ್ದಾರೆ.

ಮೈಸೂರು–ಚೆನ್ನೈ ಅಲೈಯನ್ಸ್ ವಿಮಾನ ಹಾರಾಟಕ್ಕೆ ಅಧಿಕೃತ ಚಾಲನೆ



ಮೈಸೂರು,ಆ.24(ಜಿಎ)–ಮೈಸೂರಿನಿಂದ ಚೆನ್ನೈಗೆ ಮತ್ತೊಂದು ವಿಮಾನ ಹಾರಾಟ ಆರಂಭವಾಗಿದ್ದು, ಅಧಿಕೃತವಾಗಿ ಬುಧವಾರ ಹಸಿರು ನಿಶಾನೆ ತೋರಲಾಯಿತು.

ಮೈಸೂರಿನಿಂದ ಚೆನ್ನೈಗೆ ಹಾರಾಟ ನಡೆಸಲಿರುವ ಅಲೈಯನ್ಸ್ ಏರ್ ವಿಮಾನಕ್ಕೆ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಉದ್ಯಮಿ ಮಹೇಶ್ ಶೆಣೈ, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಮೈಸೂರು ಟೂರ್ಸ್ ಅಂಡ್ ಟ್ರಾವಲ್ಸ್ ಅಧ್ಯಕ್ಷ ಜಯಕುಮಾರ್, ಸಮಾಜ ಸೇವಕಿ ಭಾಗ್ಯಶ್ರೀ ಮತ್ತು ವಿಮಾನ ನಿಲ್ದಾಣ ನಿರ್ದೇಶಕ ಆರ್. ಮಂಜುನಾಥ್ ಹಸಿರು ನಿಶಾನೆ ತೋರಿದರು. ಮೈಸೂರಿಂದ ಚೆನ್ನೈಗೆ ಈಗಾಗಲೇ ಇಂಡಿಗೋ ವಿಮಾನ ಮಂಗಳವಾರ, ಬುಧವಾರ, ಗುರುವಾರ ಮತ್ತು ಶುಕ್ರವಾರ ಹಾರಾಟ ನಡೆಸುತ್ತಿದೆ. ಈಗ ಅಲೈಯನ್ಸ್ ಏರ್ ಮತ್ತೊಂದು ವಿಮಾನವು ಮೈಸೂರು ಮತ್ತು ಚೆನ್ನೈ ನಡುವೆ ಹಾರಾಟ ನಡೆಸುವುದರ ಮೂಲಕ ಎರಡೂ ನಗರಗಳ ನಡುವಿನ ವ್ಯಾಪಾರ ಮತ್ತು ಪ್ರವಾಸೋದ್ಯಮಕ್ಕೆ ಹೆಚ್ಚಿನ ಸಹಕಾರಿಯಾಗಲಿದೆ.

ವಾರದಲ್ಲಿ ಬುಧವಾರ, ಶುಕ್ರವಾರ ಮತ್ತು ಭಾನುವಾರ ಬೆಳಿಗ್ಗೆ 11 ಗಂಟೆಗೆ ಆಗಮಿಸುವ ಅಲೈಯನ್ಸ್ ಏರ್ ವಿಮಾನವು 11.30ಕ್ಕೆ ಮೈಸೂರಿನಿಂದ ಹೊರಟು ಮಧ್ಯಾಹ್ನ 1ಕ್ಕೆ ಚೆನ್ನೈ ತಲುಪಲಿದೆ. ಈಗಾಗಲೇ ಮೈಸೂರು ವಿಮಾನ ನಿಲ್ದಾಣದಿಂದ ಬೆಂಗಳೂರು, ಚೆನ್ನೈ, ಕೊಚ್ಚಿನ್, ಗೋವಾ, ಹುಬ್ಬಳ್ಳಿ ಮತ್ತು ಹೈದರಾಬಾದ್‌ಗಳಿಗೆ ವಿಮಾನಗಳು ಹಾರಾಟ ನಡೆಸುತ್ತಿದ್ದು, ಹೆಚ್ಚುತ್ತಿರುವ ಬೇಡಿಕೆಗಳಿಗೆ ಅನುಗುಣವಾಗಿ ಹೆಚ್ಚಿನ ವಿಮಾನ ಸೇವೆ ಕಲ್ಪಿಸುವ ಗುರಿಯನ್ನು ಹೊಂದಲಾಗಿದೆ.

ಟಿಬಿ ಬಗ್ಗೆ ಅರಿವು: ಇದೇ ವೇಳೆ ಟಿಬಿ ಕಾಯಿಲೆ ಬಗ್ಗೆ ವಿಮಾನ ನಿಲ್ದಾಣದ ಸಿಬ್ಬಂದಿ ಮತ್ತು ಪ್ರಯಾಣಿಕರಿಗೆ ಅರಿವು ಮೂಡಿಸಲಾಯಿತು. ನಮ್ಮ ರಾಷ್ಟ್ರವನ್ನು ಟಿಬಿ ಮುಕ್ತ ಮಾಡಲು ಒಂದು ಹೆಜ್ಜೆ ಇಡೋಣ ಎಂಬ ಧ್ಯೇಯ ವಾಕ್ಯದೊಂದಿಗೆ ವೈದ್ಯರು ಟಿಬಿ ಪತ್ತೆ ಮತ್ತು ನಿರ್ಮೂಲನೆ ಯೋಜನೆಯ ಮಾಹಿತಿ ನೀಡಿದರು. ಟಿಬಿ ಕಾಯಿಲೆಗೆ ಸಂಬಂಧಿಸಿದಂತೆ ವಿವಿಧ ದೃಶ್ಯ ರೂಪದ ಮೂಲಕವೂ ಮಾಹಿತಿಯನ್ನು ವಿಮಾನ ನಿಲ್ದಾಣದಲ್ಲಿ ನೀಡಲಾಯಿತು. ನಂತರ ಮಂಡಕಳ್ಳಿ ವಿಮಾನ ನಿಲ್ದಾಣ ಸಲಹಾ ಸಮಿತಿ ಸದಸ್ಯರ ಸಭೆ ನಡೆಸಿ, ಮೈಸೂರಿನ ಜನತೆಗಾಗಿ ವಿಮಾನ ನಿಲ್ದಾಣದ ಅಭಿವೃದ್ಧಿ ಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಪ್ರಮುಖವಾಗಿ ಪ್ರವಾಸೋದ್ಯಮವನ್ನು ಉತ್ತೇಜಿಸುವ ಮತ್ತು ಅಸ್ತಿತ್ವದಲ್ಲಿರುವ ಮೂಲಸೌಕರ್ಯವನ್ನು ಮತ್ತಷ್ಟು ಉನ್ನತಿಕರಿಸುವ ಕುರಿತು ಚರ್ಚಿಸಲಾಯಿತು.


ಮಗನೇ ನಿನ್ನ ನಾಲಗೆ ಕತ್ತರಿಸ್ತೀವಿ

ಮಾಜಿ ಸಚಿವ ಈಶ್ವರಪ್ಪಗೆ ಅನಾಮಧೇಯ ಬೆದರಿಕೆ ಪತ್ರ



ಶಿವಮೊಗ್ಗ: ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಅವರಿಗೆ ಅನಾಮಧೇಯ ಪತ್ರ ಬರೆದಿರುವ ದುಷ್ಕರ್ಮಿಗಳು ಮಗನೇ ನಿನ್ನ ನಾಲಗೆ ಕತ್ತರಿಸುತ್ತೇವೆ ಎಂದು ಬೆದರಿಸಿದ್ದಾರೆ. ಶಿವಮೊಗ್ಗದ ಮಲ್ಲೇಶ್ವರ ನಗರದಲ್ಲಿರುವ ಈಶ್ವರಪ್ಪ ಮನೆಗೆ ಅನಾಮಧೇಯ ಪತ್ರ ಬಂದಿದೆ. ನಿರಂತರವಾಗಿ ಮುಸ್ಲಿಂರನ್ನು ಟೀಕಿಸುತ್ತಾ, ಮುಸ್ಲಿಂರನ್ನು ಗೂಂಡಾಗಳು ಎಂದು ಕರೆಯುವ ನಿನ್ನನ್ನು ಬಿಡುವುದಿಲ್ಲ. ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕಿನ ಮೋಟೆ ಬೆನ್ನೂರಿನಲ್ಲಿ ಕಾಲೇಜು ಕಟ್ಟಲು ಮುಸ್ಲಿಂ ಸಿಮೆಂಟ್ ಬ್ರಿಕ್ಸ್‌ಗಳನ್ನು ಬಳಸುತ್ತಿದ್ದೀರಾ. ಆದರೂ ನಿಮಗೆ ಮುಸ್ಲಿಂರು ಬೇಡ. ನಿನಗೆ ನಾಚಿಕೆಯಾಗಬೇಕು ಎಂದು ಪತ್ರದಲ್ಲಿ ಬರೆದಿದ್ದಾರೆ.

ಚೆನ್ನಬಸವಣ್ಣ ನಿಧನ



ತಲಕಾಡು: ತಿ.ನರಸೀಪುರ ತಾಲೂಕು ತಲಕಾಡು ಹಳೇ ಬೀದಿಯ ನಿವಾಸಿ, ಶ್ರೀ ಬಂಡರಸಮ್ಮ ದೇವಾಲಯದ ಅರ್ಚಕ ಚೆನ್ನಬಸವಣ್ಣ (87) ಬುಧವಾರ ನಿಧನರಾದರು. ಇವರು ಪುತ್ರ ಸುರೇಶ್, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ತಲಕಾಡಿನ ಮುಕ್ತಿಧಾಮದಲ್ಲಿ ಮೃತರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ನೆರವೇರಿತು

ಮೂಲ ಸೌಕರ್ಯಕ್ಕೆ ಆಗ್ರಹಿಸಿ ಪಂಚಗವಿ ಮಠ ಬಡಾವಣೆ, ಗೌರಿಶಂಕರನಗರ ನಿವಾಸಿಗಳ ಪ್ರತಿಭಟನೆ



ಮೈಸೂರು, ಆ.24(ಎಂಟಿವೈ)– ಮೈಸೂರಿನ ಪಂಚಗವಿ ಮಠ ಬಡಾವಣೆ ಹಾಗೂ ಗೌರಿಶಂಕರ ನಗರಕ್ಕೆ ಮೂಲ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ಚಾಮುಂಡಿಬೆಟ್ಟದ ತಪ್ಪಲಿನ ಗೌರಿಶಂಕರನಗರದಲ್ಲಿ ಸ್ಥಳೀಯರು ಪ್ರತಿಭಟನೆ ನಡೆಸಿದರು.

ಹಲವು ವರ್ಷಗಳಿಂದ ಗೌರಿಶಂಕರನಗರ ಹಾಗೂ ಪಂಚಗವಿಮಠ ಬಡಾವಣೆಗೆ ಮೂಲ ಸೌಲಭ್ಯ ಕಲ್ಪಿಸುವಲ್ಲಿ ಮೈಸೂರು ನಗರ ಪಾಲಿಕೆ ನಿರ್ಲಕ್ಷಿಸಿದೆ. ಕಳಪೆ ಕಾಮಗಾರಿ ನಡೆಸುವ ಮೂಲಕ ಸ್ಥಳೀಯರಿಗೆ ಬಡಾವಣೆಯ ರಸ್ತೆಗಳು ಗುಂಡಿಮಯವಾಗಿವೆ. ಕೆಲವೆಡೆ ಚರಂಡಿಗಳು ಕುಸಿದಿದ್ದು, ಮತ್ತೆ ಕೆಲವೆಡೆ ಹೂಳು ತುಂಬಿಕೊಂಡಿದೆ. ಹಾಗಾಗಿ ಮಳೆ ಬಂತೆಂದರೆ ಮನೆಗಳಿಗೆ ನೀರು ತುಂಬಿಕೊಳ್ಳುತ್ತದೆ. ಇದರಿಂದ ಸ್ಥಳೀಯರು ಪರದಾಡುವಂತಾಗಿದೆ ಎಂದು ಪ್ರತಿಭಟನಾಕಾರರು ದೂರಿದರು.

ಮೈಸೂರು–ನಂಜನಗೂಡು ಮುಖ್ಯ ರಸ್ತೆಗೆ ಹೊಂದಿಕೊಂಡಂತಿರುವ ದೊಡ್ಡ ಮೋರಿ ಕಾಮಗಾರಿಯೂ ಕಳಪೆ ಮಟ್ಟದಿಂದ ಕೂಡಿದೆ. ಗೌರಿಶಂಕರನಗರದ ಚರಂಡಿಗಳ ನೀರು ದೊಡ್ಡ ಮೋರಿ ಸೇರುವುದರಿಂದ ಅನಾಹುತ ಸಂಭವಿಸುವ ಆತಂಕ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ರಸ್ತೆ, ಚರಂಡಿ ದುರಸ್ತಿಗೆ ಮನವಿ ಮಾಡಿದರು.

ಪಂಚಗವಿ ಮಠ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮಹದೇವ ಉಡಿಗಾಲ ಉಪಾಧ್ಯಕ್ಷ ಸಿ.ರಾಜಶೇಖರಮೂರ್ತಿ, ಕಾರ್ಯದರ್ಶಿ ಹೆಚ್.ಪಿ.ಗಂಗಾಧರಸ್ವಾಮಿ, ವಿಜಯಕುಮಾರ್, ಪ್ರದೀಪ್‌ಕುಮಾರ್, ಜಯಶೇಖರ್ ಪ್ರತಿಭಟನೆಯಲ್ಲಿದ್ದರು.

ಇಂದು 'ಡೈನಾಮಿಕ್ ಆಫ್ ರಿಪೋರ್ಟಿಂಗ್' ಪುಸ್ತಕ ಬಿಡುಗಡೆ

ಮೈಸೂರು,ಆ.24(ಎಂಕೆ)–ಹಿರಿಯ ಪತ್ರಕರ್ತ ಡಾ.ಕೂಡ್ಲಿ ಗುರುರಾಜ ಅವರ 'ಬರಹ ಮತ್ತು ವರದಿಗಾರಿಕೆ' ಪುಸ್ತಕದ ಇಂಗ್ಲಿಷ್ ಅನುವಾದ 'ಡೈನಾಮಿಕ್ ಆಫ್ ರಿಪೋರ್ಟಿಂಗ್' ಪುಸ್ತಕವನ್ನು ನಾಳೆ(ಆ.25) ಬೆಳಗ್ಗೆ 9.30ಕ್ಕೆ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಿಡುಗಡೆಗೊಳಿಸಲಾಗುವುದು. ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಪುಸ್ತಕ ಬಿಡುಗಡೆ ಮಾಡಲಿದ್ದು, ವಿಶ್ರಾಂತ ಸಹ ಕುಲಪತಿ ಪ್ರೊ.ಕೆ.ವಿ.ನಾಗರಾಜ್ ಪುಸ್ತಕ ಕುರಿತು ಮಾತನಾಡಲಿದ್ದಾರೆ. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಅನುವಾದಕ ವಿಜಯ್‌ಕುಮಾರ್ ಪಾಟೀಲ ಮತ್ತಿತರರು ಭಾಗವಹಿಸಲಿದ್ದಾರೆ.

ಸೆ.12ರಿಂದ ಜಿಲ್ಲಾದ್ಯಂತ ಕುಷ್ಠರೋಗ ನಿರ್ಮೂಲನಾ ಅಭಿಯಾನ



ಮೈಸೂರು, ಆ.24– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನ ಕಾರ್ಯಕ್ರಮ ಕುಷ್ಠರೋಗ ಪತ್ತೆ ಹಚ್ಚುವ ಅಭಿಯಾನ– 2022–23ರ ಪೂರ್ವಭಾವಿ ಸಭೆ ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆಯಿತು.

ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ. ಮಂಜುಪ್ರಸಾದ್ ಮಾತನಾಡಿ, LCDC ಕಾರ್ಯಕ್ರಮದಲ್ಲಿ ಕುಷ್ಠರೋಗ ನಿರ್ಮೂಲನೆಗಾಗಿ ಆರಂಭಿಕ ಹಂತದಲ್ಲಿ ರೋಗ ಪತ್ತೆ ಹಚ್ಚುವುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಜಿಲ್ಲಾದ್ಯಂತ ಸೆ.12ರಿಂದ 29ರವರೆಗೆ LCDC ಕಾರ್ಯಕ್ರಮವನ್ನು ಜಿಲ್ಲಾದ್ಯಂತ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಪತ್ತೆ ಹಚ್ಚದೆ ಉಳಿದ ಪ್ರಕರಣಗಳನ್ನು ಏಕಕಾಲದಲ್ಲಿ ಶೀಘ್ರಗತಿಯಲ್ಲಿ ಪತ್ತೆ ಹಚ್ಚುವ ಹಾಗೂ ಸಮುದಾಯದಲ್ಲಿ ರೋಗ ಸಂವಹನ ತಡೆಗಟ್ಟುವುದು ಕಾರ್ಯಕ್ರಮದ ಮೂಲ ಉದ್ದೇಶವಾಗಿದೆ ಎಂದರು.

ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಪಂಚಾಯತ್ ರಾಜ್ ಇಲಾಖೆ ವತಿಯಿಂದ ಎಲ್ಲಾ ಹಂತಗಳ ಅಂದರೆ ಮಹಾನಗರ ಪಾಲಿಕೆ, ನಗರ ಸಭೆ, ಪುರಸಭೆ ಗ್ರಾಮ ಪಂಚಾಯಿತಿ, ಸ್ಥಳೀಯ ಸಂಸ್ಥೆಗಳಲ್ಲಿ ಕಸ ವಿಲೇವಾರಿ ವಾಹನಗಳ ಮೂಲಕ ಪ್ರಚಾರ ಮಾಡಿ ಜನರಲ್ಲಿ ಜಾಗೃತಿ ಮೂಡಿಸುವ ಕುರಿತು ಚರ್ಚಿಸಲಾಯಿತು. ಸರ್ಕಾರಿ ಖಾಸಗಿ ಕಚೇರಿಗಳು, ಶಾಲೆ–ಕಾಲೇಜುಗಳು, ಹಾಸ್ಟೆಲ್‌ಗಳು, ಆಸ್ಪತ್ರೆಗಳು, ವಾಣಿಜ್ಯ ಕಟ್ಟಡಗಳಲ್ಲಿ ಕುಷ್ಠರೋಗ ಪ್ರಕರಣ ಪತ್ತೆ ಆಂದೋಲನ ಸಮಯದಲ್ಲಿ ಸಹಕಾರ ನೀಡುವಂತೆ ಚರ್ಚಿಸಲಾಯಿತು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದ ಆಂದೋಲನದ ಅವಧಿಯಲ್ಲಿ ಅಂಗನವಾಡಿ ಕಾರ್ಯಕರ್ತರು ಕಡ್ಡಾಯವಾಗಿ ತಪಾಸಣಾ ತಂಡದ ಸಮೀಕ್ಷ ಕಾರ್ಯದಲ್ಲಿ ಭಾಗವಹಿಸಬೇಕು. ತಾಲೂಕುಗಳಿಗೆ ತಪ್ಪದೇ ಪ್ರತಿದಿನ ಎರಡು ಆರೋಗ್ಯ ಕೇಂದ್ರಗಳ ಹಳ್ಳಿಗಳಿಗೆ ಭೇಟಿ ನೀಡಿ ಪರಿಶೀಲಿಸಿ ವರದಿಯನ್ನು ನೀಡಲಾಗುವುದು. ಲೆಪ್ರಸಿ ಕೇಸ್ ಡಿಟೆಕ್ಷನ್ ಕ್ಯಾಂಪಿಂಗ್ ಎಲ್‌ಸಿಡಿಸಿ ಬಗ್ಗೆ ದೇವಾಲಯಗಳಲ್ಲಿ ಮಸೀದಿಗಳಲ್ಲಿ ಮತ್ತು ಚರ್ಚ್‌ಗಳಲ್ಲಿ ಧ್ವನಿವರ್ಧಕಗಳ ಮೂಲಕ ಪ್ರಚಾರಪಡಿಸಬೇಕೆಂದು ತಿಳಿಸಿದರು.

ಎಲ್ಲಾ ತಾಲೂಕು ಆರೋಗ್ಯ ಅಧಿಕಾರಿಗಳು ಹಾಗೂ ಆಡಳಿತ ವೈದ್ಯಾಧಿಕಾರಿಗಳು ಎಲ್‌ಸಿಡಿಸಿ ಕಾರ್ಯಕ್ರಮದ ಬಗ್ಗೆ ತಾಲೂಕು ದಂಡಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲೂಕು ಅಂತರ ಇಲಾಖೆ ಸಮನ್ವಯ ಸಭೆಯಲ್ಲಿ ಸಹಕರಿಸಿ ಆಶಾ ಮತ್ತು ಸ್ವಯಂಸೇವಕರಿಗೆ ತರಬೇತಿ ಹಾಗೂ ತಾಲೂಕಿಗೆ ಸಂಬಂಧಪಟ್ಟ ಎಲ್ಲ ವಲಸೆ ನಗರ ಪ್ರದೇಶ ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ ಸಮೀಕ್ಷೆ ಮಾಡಲಾಗುವುದು ಕಾರ್ಯಕರ್ತರು ಕಾರ್ಯಕ್ರಮಕ್ಕೆ ನಿಯೋಜಿಸಿ ಸಮೀಕ್ಷೆಯಲ್ಲಿ ಎಲ್ಲಾ ನಿವಾಸಿಗಳು ಒಳಪಡುವಂತೆ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಯಶಸ್ವಿಗೊಳಿಸುವಂತೆ ಸಹಕರಿಸಬೇಕೆಂದು ಚರ್ಚಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಆರೋಗ್ಯ ಇಲಾಖೆ ಎಲ್ಲಾ ತಾಲೂಕಿನ ಅಧಿಕಾರಿಗಳು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು, ಡಿಎನ್‌ಟಿ ತಂಡದ ಮೇಲ್ವಿಚಾರಕರು ಉಪಸ್ಥಿತರಿದ್ದರು.